TIGHT BINDING

OSMANIA UNIVERSITY LIBRARY

Call No. K83.1/B57K Accession No. K5471.

Author [illegible]

Title [illegible] 1954

This book should be returned on or before the date last marked below.

UNIVERSAL LIBRARY

OU_200245

UNIVERSAL LIBRARY

ಭೈರವೇಶ್ವರ ಕಾವ್ಯದ

# ಕಥಾಸೂತ್ರರತ್ನಾಕರ

(ಭಾಗ-೧)

ಪ್ರಕಾಶಕರು :

ಆಸ್ಥಾನ ವಿದ್ವಾನ್, ಪಂಡಿತ ರತ್ನಂ, ಕೀರ್ತನಾಚಾರ್ಯ

**ಬಿ. ಶಿವಮೂರ್ತಿ ಶಾಸ್ತ್ರೀ**

'ಶರಣ ಸಾಹಿತ್ಯ' ಕಾರ್ಯಾಲಯ
ರಂಗಸ್ವಾಮಿಗುಡಿ ಬೀದಿ, ಬೆಂಗಳೂರು-೨.

ಮುದ್ರಕರು:
ಸ್ವತಂತ್ರ ಕರ್ಣಾಟಕ ಮುದ್ರಣಾಲಯ
ರಂಗಸ್ವಾಮಿಗುಡಿ ಬೀದಿ, ಬೆಂಗಳೂರು-೨.

(ಎಲ್ಲಹಕ್ಕುಗಳನ್ನೂ ಕಾದಿರಿಸಲಾಗಿದೆ.)

ಮೊದಲ ಮುದ್ರಣ: ೧೯೫೪
ಬೆಲೆ: ೦—೧೨—೦

ಪ್ರಕಾಶಕರು:
'ಶರಣ ಸಾಹಿತ್ಯ' ಕಾರ್ಯಾಲಯ
೯೨. ರಂಗಸ್ವಾಮಿಗುಡಿ ಬೀದಿ,
(ಬಳೇಪೇಟೆ,) ಬೆಂಗಳೂರು.

# ವಿಷಯ ಸೂಚಿಕೆ


| | | |
|---|---|---|
| | **ಪೀಠಿಕೆ** | |
| | ಭೈರವೇಶ್ವರ ಕಾವ್ಯದ ಕಥಾ ಸೂತ್ರ ರತ್ನಾಕರ | |
| ೧ | ಪೀಠಿಕಾ ಸೂತ್ರ | ೧ |
| ೨ | "ಶ್ರೀ ಮದನೇಕಲೋಕಜನಕಂ" ಎಂಬುದಕ್ಕೆ ಕಥೆ | ೧೦ |
| ೩ | "ಹರಿಮುಖ್ಯ ಅಮರಾಳಿಸೇವಿತಂ" | ೧೨ |
| ೪ | "ಕಾಮಮದಪ್ರಹಾರಿ" | ೧೫ |
| ೫ | "ಲಿಂಗದಂಘ್ರಿಪೂಜಾ ಮಹಾಚಿತ್ತವುನ್ನತ ಗುಣಾಂಬುಧಿ" | ೧೫ |
| ೬ | "ಭೈರವದೇವನಂ ಕೀರ್ತಿಸುವವನೆ ಮುಕ್ತಿಮೂಲಿಗಂ" | ೧೬ |
| ೭ | "ಶ್ರೀವರನೇತ್ರ ರಾಜೀವಾಂಕ ಪಾದರಾಜೀವ" | ೧೬ |
| ೮ | "ಶ್ರುತಿಗೆ ವಾದೀಶರೊಳು ಶ್ರುತಿಗೆಯುರಸಕೊಲ್ದು ಶ್ರುತಿಯೊಳಲಂಕೃತಗೆಯ್ದು" | ೧೭ |
| ೯ | "ಅಭ್ರಜೀವನ ಜೂಟ" | ೧೯ |
| ೧೦ | "ಶುಭ್ರಾಂಶು ಸಕಲಂಕ ಭಿಭೃತೆ" | ೨೦ |
| ೧೧ | "ಧಾತೃಪಂಚಮ ಶಿರಃಪಾತ್ರ" | ೨೦ |
| ೧೨ | "ಪನ್ನಗಜನ್ನ ಸೂತ್ರ" | ೨೧ |
| ೧೩ | "ಕಿನ್ನರಪತಿ ಮಿತ್ರ" | ೨೨ |
| ೧೪ | "ಸುರಪಥದೂರ್ಗಳನುರಪಿದಂ" | ೨೩ |
| ೧೫ | "ಕಾಲ ಸಂಹರಂ" | ೨೫ |
| ೧೬ | "ಕರಿದಾನವನ ಸೀಳ್ದುದಂ" | ೨೬ |
| ೧೭ | "ಇಂದಿರೆವಾಣಿ ಯುರುಂಧತ್ಯಾದಿ ನಾರೀವೃಂದಮಾತರಯೋಗಿಣಿಯರು ವಂದಿತ ಪಾದಾರವಿಂದಸೇವಿತೆ" | ೨೭ |
| ೧೮ | "ಶಿವಾನಂದ ಸಿಂಧೇಂಧು ಶಿವೆ" | ೨೮ |
| ೧೯ | "ಹರನಕ್ಷಿಯಿಂದೊಗೆದು ವೀರೇಶ ಹರಿಯಜದಕ್ಷರ ಸಂಹರಿಸಿದಂ" | ೨೯ |
| ೨೦ | "ಕೀರ್ತಿದಿಶಾಂತ ಯೇಕದಂತನನಾಂ ಬಲಗೊಂಬೆಂ" | ೩೨ |
| ೨೧ | "ನಂದಿಕೇಶ್ವರ ಭೃಂಗಿಸ್ಕಂದ ಮುಖ್ಯಾಮರಾಳಿಯೆನ್ನ ಹೃತ್ಕಮಲದೊಳು ನಿಂದು" | ೩೪ |
| ೨೨ | "ಈ ಕೃತಿಯೊಳು ತಪ್ಪೊಂದಿಲ್ಲವೆನೆ ನಡೆಸುವುದು" | ೩೫ |
| ೨೩ | "ಬಾಣ ಮಯೂರನ ಜಾಣು" | ೩೫ |
| ೨೪ | "ಮಯೂರನ ಜಾಣ್ಮೆ" | ೩೭ |
| ೨೫ | "ಗುರ್ಜರನ ಬಿನ್ನಾಣ" | ೩೭ |
| ೨೬ | "ಮಲುಹಣನುರ್ಬು" | ೩೦ |

೨೭ "ಮಲಯಕ್ಷೋಣೀಶನೇಳ್ಗೆ" ೪೧

೨೮ "ಕಟ್ಟಾಣಿ ಹರಿಪನೋಕ್ತಿಗಾಣಿಪುದು" ೪೩

೨೯ "ಗುರು ಸೋಮನಾಥ ಸ್ವಪ್ನದೊಳ್ ಬಂದು ಕರಕಂಜವಂ ಶಿರಕಿಟ್ಟು ನಿರ್ವಿಘ್ನವೆಂದು ಪೇಳಿಸಿದನು" ೪೫

೩೦ "ಮೇರು ಲೋಕಂಗಳಾಧಾರ, ಅಮರಾಳಿಗಾಗಾರ" ೪೭

೩೧ "ಹರಿಬ್ರಹ್ಮಾದಿಗಳಹಂಕರಿಸಲು ಉರಿಲಿಂಗವಾದ ಪರಮತೇಜೋರಾಶಿ" ೪೮

೩೨ "ಜಂಬೂನದಿಯನವಲಂಬಿತ ದ್ವೀಪಕದಂಬ ಭಾರತ ವರ್ಷ" ೪೯

೩೩ "ಅಗದು ನಟ್ಟರು ದೇವರುಗಳು ಮೇರುವಂ" ೫೦

೩೪ "ನಂದಿ ನಗುತ ಕಿತ್ತಿಟ್ಟ ಮಹೇಂದ್ರನಗವಂ" ೫೧

೩೫ "ಕುಮಾರ ತಟ್ಟುಗಿದ ಕ್ರೌಂಚಾದ್ರಿಯು ನಗುವಂತೆ ಹಿಮಗಿರಿ" ೫೨

೩೬ "ಶಿವನ ಕೃಪೆವಡೆದನು ಹರಿಶ್ಚಂದ್ರನು" ೫೩

೩೭ "ದ್ಯೂತ ವ್ಯಸನದಿಂದೆ ರಾಜ್ಯವಂ ಸೋತು ಕುಷ್ಠಿಯಾಗಿ ಓಪಳನಗಲ್ದು ಕಾಮಾರಿಯಿಂ ಪುನೀತನಾದ ನಳನು" ೫೫

೩೮ "ಪುರುಪುಚ್ಛನು" ೫೮

೩೯ "ಪುರೂರವ ಭೂಮಿಪಾಲಕನೊಪ್ಪುತಿಹನು" ೫೯

೪೦ "ಸ್ವರ್ಣನದಿಯು ತಂದ ಭಗೀರಥನಂದು ಕೇಳರಸಾ" ೬೦

೪೧ "ಜಮದಗ್ನಿಯು ಕೊಂದ ಕಾರ್ತವೀರ್ಯಂ" ೬೨

೪೨ "ಮಾಪತಿ ಬೇಡೆ ಕವಚವನಿತ್ತ ಹತಕರ್ಣಂ" ೬೫

೪೩ "ಬಲಿ ಮೊದಲಾದವರು ಕೀರ್ತಿವಲ್ಲಭರಾದರು ಅರಸಾ" ೬೬

೪೪ "ಕೀರ್ತಿಯಿಂ ಭೋಜನೆಂಬುದಕ್ಕೆ" ೬೮

೪೫ "ಶಿಬಿಚಕ್ರವರ್ತಿ ಕೀರ್ತಿಯಿಂದ ವ್ಯರ್ಥವಾಗಿ ಸತ್ತನು" ೬೯

೪೬ "ಕೀರ್ತಿಯಿಂ ಮುಂಜಕವಿ ಸ್ವರ್ಗವನೆಯ್ದಿದ" ೭೦

೪೭ "ಮಾಧಾಂತ ಕೀರ್ತಿಯಿಂದ ಕೆಟ್ಟಂ" ೭೧

೪೮ "ಕೀರ್ತಿಯಿಂದ ಪರಹಿತಾರ್ಥಿಯಾದನು ಜೀಮೂತ" ೭೨

# ಪೀಠಿಕೆ

"ಭೈರವೇಶ್ವರ ಕಾವ್ಯದ ಕಥಾಸೂತ್ರರತ್ನಾಕರ" ಗ್ರಂಥವನ್ನು ಬರೆದ ಕವಿ ಶ್ರೀ ಶಾಂತಲಿಂಗದೇಶಿಕ. ಈತನ ಕಾಲ ಕ್ರಿ.ಶ. ೧೬೭೨. ಈತನ ಗುರು ವಿರಕ್ತ ನಮುಶ್ಶಿವಾಯದೇವ. ಕವಿ ಈ ಗ್ರಂಥವನ್ನು ಶಕ ೧೫೯೪ರಲ್ಲಿ ಅಂದರೆ ಕ್ರಿ.ಶ. ೧೬೭೨ರಲ್ಲಿ ವಿರಚಿಸಿದನು. ಇದರಲ್ಲಿ ೮೧ ಕಥೆಗಳೂ ೭೧೪ ವಾಕ್ಯಗಳೂ ಇವೆ. ಕಿಕ್ಕೇರಿಯ ಆರಾಧ್ಯ ನಂಜುಂಡೇಶಕವಿ ವಿರಚಿತ (ಕ್ರಿ.ಶ ೧೫೫೦)ವಾದ ಭೈರವೇಶ್ವರಕಾವ್ಯಕ್ಕೆ ಈ ಗ್ರಂಥವು ಗದ್ಯಾನುವಾದವಾಗಿದೆ. ಇದು ಹಲವು ವೀರಶೈವ ಕವಿಗಳ ಮತ್ತು ಗ್ರಂಥಗಳ ಸಂಬಂಧವಾದ ಇತಿಹಾಸವನ್ನು ಒಳಗೊಂಡಿರುವುದರಿಂದ ಬಹಳ ಉಪಯುಕ್ತವಾಗಿದೆಯೆಂದು ಕನ್ನಡ ಕವಿ ಚರಿತ್ರಕಾರರು ಹೇಳಿದ್ದಾರೆ.

ಕ್ರಿ. ಶ. ೧೬೦೦ ರಲ್ಲಿದ್ದ ಸಿದ್ಧಲಿಂಗ ಶಿವಯೋಗಿಯು ಭೈರವೇಶ್ವರ ಪುರಾಣವನ್ನು ಚಂಪೂರೂಪದಲ್ಲಿ ಬರೆದಿದ್ದಾನೆ. ಇದಕ್ಕೆ 'ರಾಜೇಂದ್ರ ವಿಜಯ ಪುರಾಣಂ' ಎಂಬ ಇನ್ನೊಂದು ಹೆಸರೂ ಇದೆ. ಈಗ ದೊರೆತ ಅಸಮಗ್ರಗ್ರಂಥದಲ್ಲಿಯೇ ೨೧ ಆಶ್ವಾಸಗಳೂ, ೧೩೫೦ ಪದ್ಯಗಳೂ ಇವೆ. ಈ ಗ್ರಂಥವು ಅಚ್ಚಾಗಿಲ್ಲ. ಆದರೆ ಈ ಚಂಪೂ ಗ್ರಂಥಕ್ಕೆ ಮೂಲ ಕಿಕ್ಕೇರಿಯ ಆರಾಧ್ಯ ನಂಜುಂಡೇಶನ ಭೈರವೇಶ್ವರಕಾವ್ಯವೇ ಆಗಿದೆ. ಈ ಕಾವ್ಯ ಸಾಂಗತ್ಯದಲ್ಲಿದ್ದು ಮೊನ್ನೆ ತಾನೇ ಮೈಸೂರಿನಲ್ಲಿ ಅಚ್ಚಾಗಿದೆ. ಕ್ರಿ.ಶ. ೧೬೦೦ ರಲ್ಲಿದ್ದ ಉತ್ತರ ದೇಶದ ಬಸವಲಿಂಗ ದೇವ ಎಂಬ ಕವಿಯು 'ಭೈರವೇಶ್ವರ ಕಥಾಸಾಗರ' ಎಂಬ ಗ್ರಂಥ ಬರೆದಿದ್ದಾನೆ. ಈ ಕಥಾ ಸಾಗರದಲ್ಲಿ ೩೧೬ ಕಥೆಗಳಿವೆ. ಈ ಗ್ರಂಥವೂ ಅಚ್ಚಾದಂತೆ ಕಾಣುವುದಿಲ್ಲ:

ಕನ್ನಡ ಕವಿ ಚರಿತ್ರೆಕಾರರಿಂದ ಸಂಸ್ತುತ್ಯ ಮಾನವಾದ 'ಭೈರವೇಶ್ವರ ಕಾವ್ಯ ಕಥಾಸೂತ್ರ ರತ್ನಾಕರ'ವನ್ನು ಅಚ್ಚು ಮಾಡಬೇಕೆಂಬ ಆಶೆ ನಮಗೆ ಬಹಳ ಕಾಲದಿಂದ ಇತ್ತು. ಮೈಸೂರು ಸರ್ಕಾರದ ಪ್ರಾಚೀನ ಪುಸ್ತಕ ಭಂಡಾರದಲ್ಲಿರುವ ಶ್ರೀ ಎಲ್. ಬಸವಾರಾಧ್ಯರು ಎಂ.ಎ., ರವರು ಈ ಗ್ರಂಥದ ಕೆಲವು ಕಥೆಗಳನ್ನು ಬರೆದು ಕಳಿಸಿದರು. ಅವನ್ನು 'ಶರಣ ಸಾಹಿತ್ಯ' ಮಾಸಿಕ

ದಲ್ಲಿ ಪ್ರಕಟಿಸಿದೆವು. ಹಲವು ಮಂದಿ ಮಾನ್ಯವಾಚಕರ ಬಯಕೆಯಂತೆ ಈಗ ಅವನ್ನೇ ಗ್ರಂಥರೂಪವಾಗಿ ಪ್ರಕಟಿಸಿರುತ್ತೇವೆ. ಇದು ಒಂದನೆಯ ಭಾಗ. ಮಹಾಜನಗಳಿಗೆ ಇದು ರುಚಿಸಿದರೆ ಮುಂದಿನ ಭಾಗಗಳನ್ನೂ ಪ್ರಕಟಿಸಬೇಕೆಂಬ ಆಸೆಯಿದೆ. ಇದು ಮಹಾಜನರ ಪ್ರೀತಿ ಮತ್ತು ಪ್ರೋತ್ಸಾಹದಿಂದ ಮಾತ್ರ ಆಗತಕ್ಕ ಕಾರ್ಯವಾಗಿದೆ. ಈ ಭಾಗದಲ್ಲಿ ೪೮ ಕಥೆಗಳಿವೆ.

ಭೈರವೇಶ್ವರ ಕಾವ್ಯವು ವೀರಶೈವರಲ್ಲಿ ಅತ್ಯಂತ ಜನ ಪ್ರಿಯವಾದ ಕಥೆಯೆಂದು ತೋರುತ್ತದೆ. ಆದ್ದರಿಂದಲೇ ಸಾಂಗತ್ಯ, ಚಂಪೂ, ಗದ್ಯ ಮೊದಲಾದ ವಿವಿಧಶೈಲಿಯಲ್ಲಿ ಈ ಕಥೆಯು ಪ್ರಾಚೀನ ಕವಿಗಳಿಂದ ವಿರಚಿತವಾಗಿದೆ.

ಈ ಕಥೆಯ ನಾಯಕ ಆಂಧ್ರದೇಶದ ಮೋಪೂರು ಪಟ್ಟಣದ ಅರಸು ಸಂಗಮರಾಜ ಇವನ ಪತ್ನಿ ಹೇಮಾವತಿ ಇವರಿಗೆ ಪುತ್ರನಾಗಿ ಜನಿಸಿದ 'ಭೈರವರಾಜ'. ಈತನ ಪತ್ನಿ ಮಹಾದೇವಿ, ಇವರ ಗುರು ಪ್ರಹುಡಾಚಾರ್ಯ. ಈ ಗುರುವು ಶಿಷ್ಯನನ್ನು ಕುರಿತು ಹೇಳಿದ ಕಥೆಗಳೇ (ಭೈರವರಾಜನಿಗೆ) ಈ ಗ್ರಂಥದಲ್ಲಿ ಸಂಗ್ರಹಿಸಲ್ಪಟ್ಟಿವೆ. ಈ ಕಥೆಗಳು ಐತಿಹಾಸಿಕ ಪ್ರಧಾನವಾಗಿಯೂ ವೀರಶೈವ ಮತಸಿದ್ಧಾಂತ ಬೋಧಕವಾಗಿಯೂ ಇವೆ. ಈ ಗ್ರಂಥಕರ್ತನು ನಡುಗನ್ನಡದ ಸರಳಶೈಲಿಯಲ್ಲಿ ಕಥೆಗಳನ್ನು ಬರೆದಿದ್ದಾನೆ. ಆದರೆ ಕೆಲವು ವ್ಯಾಕರಣ ವಿರೋಧ ಪ್ರಯೋಗಗಳೂ ಇವೆ. ಉದಾಹರಣೆಗೆ ಪಾರ್ವತಾದೇವಿ (ಪುಟ ೮) ಮೃತವಾದಳು (ಪುಟ ೭೩) ಇತ್ಯಾದಿ. ಈ ಗ್ರಂಥದಲ್ಲಿ ರ ಱ, ಶಕಟ ೞ ಕಾರಗಳ ಪ್ರಯೋಗವಿದೆ. ಗ್ರಂಥದ ಶೈಲಿಯು ಒಂದು ಅಪೂರ್ವ ಸೌಂದರ್ಯದಿಂದ ಕೂಡಿದೆ.

'ಸಾಸಲು' ಎಲ್ಲಿದೆ ಎಂಬುದು ಹಲವರಿಗೆ ಸಂದೇಹಗ್ರಸ್ತವಾಗಿದೆ. ಇದು ಧಾರವಾಡ ಜಿಲ್ಲಾ ಲಕ್ಷ್ಮೇಶ್ವರ (ಹುಲಿಗೆರೆ) ಎಂದೂ ಕೆಲವರು ಹೇಳಿದ್ದಾರೆ. ಅಲ್ಲದೆ ಇದು ಶ್ರವಣಬೆಳಗೊಳಕ್ಕೆ ಅನತಿದೂರದಲ್ಲಿದೆ ಎಂದು ಮತ್ತೆ ಕೆಲವರು ಹೇಳಿದ್ದಾರೆ. ಆದರೆ ತುಮಕೂರು ಜಿಲ್ಲಾ ಚಿಕ್ಕನಾಯಕನಹಳ್ಳಿ ಪ್ರದೇಶದಲ್ಲಿರುವ 'ಸಾಸಲು' ಇಲ್ಲಿ ಉಕ್ತವಾದುದೆಂದು ತೋರುತ್ತದೆ. ಧಾರವಾಡ ಜಿಲ್ಲಾ ಲಕ್ಷ್ಮೇಶ್ವರ ಎಂದಿಗೂ 'ಸಾಸಲು' ಆಗಲಾರದು ಎನ್ನಬಹುದು. ಈ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ಅಗತ್ಯವಾಗಿದೆ.

'ಭೈರವೇಶ್ವರ ಕಾವ್ಯ ಕಥಾಸೂತ್ರ ರತ್ನಾಕರವು' ತುಂಬಾ ಉಪಯುಕ್ತ ಗ್ರಂಥವಾಗಿದೆ. ಈ ಕಥಾವಸ್ತುವು ಸಾಂಗತ್ಯ, ಚಂಪೂ, ಗದ್ಯ

ಮೊದಲಾದ ಶೈಲಿಗಳಲ್ಲಿ ನಾಲ್ಕುಮಂದಿ ಮಹಾಕವಿಗಳಿಂದ ರಚಿತವಾಗಿರುವುದು ಇದರ ಜನಪ್ರಿಯತೆಗೆ ನಿದರ್ಶನವಾಗಿದೆ.

ಈ ಗ್ರಂಥವನ್ನು 'ಶರಣ ಸಾಹಿತ್ಯ'ದಲ್ಲಿ ಪ್ರಕಟಿಸಲು ತನ್ಮೂಲಕ ಸ್ವತಂತ್ರ ಗ್ರಂಥವಾಗಿ ಪ್ರಕಟಿಸಲು ನಿಷ್ಕಾಮ ಬುದ್ಧಿಯಿಂದ ನೆರವಾದ ಮೈಸೂರು ಪ್ರಾಚೀನ ಪುಸ್ತಕ ಭಂಡಾರದಲ್ಲಿರುವ ಶ್ರೀ ಎಚ್. ಬಸವಾರಾಧ್ಯರು ಎಂ.ಎ.,. ಇವರ ಉಪಕಾರವನ್ನು ನಾವು ಬಹಳವಾಗಿ ಸ್ಮರಿಸುತ್ತೇವೆ.

ನಮ್ಮ ಇತರ ಗ್ರಂಥಗಳಿಗೆ ಪ್ರೋತ್ಸಾಹವಿತ್ತಂತೆಯೇ ಈ ಗ್ರಂಥಕ್ಕೂ ಸಹೃದಯರು ಬೆಂಬಲವೀಯುವರೆಂದು ನಂಬಿರುತ್ತೇವೆ.

ಇಂತು ಸಜ್ಜನ ವಿಧೇಯ,
ಬಿ. ಶಿವಮೂರ್ತಿ ಶಾಸ್ತ್ರೀ,
ಪ್ರಕಾಶಕ.

ತಾ|| ೨೮-೭-೧೯೫೪
ಬೆಂಗಳೂರು

# ಭೈರವೇಶ್ವರ ಕಾವ್ಯ ಗ್ರಂಥಗಳು

೧. ಭೈರವೇಶ್ವರ ಕಾವ್ಯ–ಕವಿ: ಕಿಕ್ಕೇರಿಯಾರಾಧ್ಯ ನಂಜುಂಡ.
ಕಾಲ: ೧೫೫೦. ಛಂದಸ್ಸು: ಸಾಂಗತ್ಯ.

೨. ಭೈರವೇಶ್ವರ ಕಾವ್ಯ ಕಥಾಸಾಗರ-ಕವಿ: ಬಸವಲಿಂಗ ದೇವರು
ಕಾಲ: ೧೬೦೦. ಗದ್ಯಶೈಲಿ.

೩. ಭೈರವೇಶ್ವರ ಪುರಾಣ–ಕವಿ: ಸಿದ್ಧಲಿಂಗ ಶಿವಯೋಗಿ
ಕಾಲ: ೧೬೦೦. ಶೈಲಿ ಗದ್ಯ.

೪. ಭೈರವೇಶ್ವರ ಕಾವ್ಯ ಕಥಾಸೂತ್ರರತ್ನಾಕರ–ಕವಿ: ಶಾಂತಲಿಂಗ
ದೇಶಿಕಕಾಲ ೧೬೪೨. ಶೈಲಿ–ಗದ್ಯ.

ಮೇಲೆಕಂಡ ನಾಲ್ಕುಮಂದಿ ಕವಿಗಳೆಲ್ಲರೂ ವೀರಶೈವ ಕವಿಗಳಾಗಿರುವ ರೆಂಬುದು ಗಮನಾರ್ಹವಾಗಿದೆ. ಕಥಾನಾಯಕ ಭೈರವರಾಜನು ಆದರ್ಶ ಶಿವಶರಣನೆನಿಸಿದ್ದಾನೆ.

—ಪ್ರಕಾಶಕ.

# ಸಮರ್ಪಣೆ

ಕರ್ಣಾಟಕ ರತ್ನಸಿಂಹಾಸನಾಧೀಶ್ವರರೂ
ಆಳುವ ಮಹಾಸ್ವಾಮಿಯವರೂ ಆದ

**ಶ್ರೀಮನ್ಮಹಾರಾಜ ಜಯಚಾಮರಾಜೇಂದ್ರ
ಒಡೆಯರ್ ಬಹದ್ದೂರ್ ಮಹಾಪ್ರಭು
ಗಳವರ ದಿವ್ಯ ಸನ್ನಿಧಾನಂಗಳಲ್ಲಿ**

ರಾಜಭಕ್ತಿಪೂರ್ಣವಾದ ಕಾಣಿಕೆ.

ದಿನಾಂಕ : ೨-೮-೧೯೫೪

**ಬಿ. ಶಿವಮೂರ್ತಿ ಶಾಸ್ತ್ರೀ**

॥ಚಿರಮಭಿವರ್ಧತಾಂ ಯದುಸಂತಾನ ಶ್ರೀಃ॥



ಕರ್ಣಾಟಕ ರತ್ನ ಸಿಂಹಾಸನಾಧೀಶ್ವರರೂ, ಸಂಸ್ಕೃತಿ ಸಾಹಿತ್ಯಗಳ ಮಹಾ
ಪೋಷಕರೂ ರಾಜರ್ಷಿಗಳೂ ಆದ

**ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದೂರ್**
**ಮಹಾಸ್ವಾಮಿಯವರು**

**ಜಿ.ಸಿ.ಎಸ್.ಐ., ಜಿ.ಸಿ.ಬಿ.,**

# ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ

ಶ್ರೀ ಸಿದ್ಧಲಿಂಗ ದೇಶಿಕ ವಿರಚಿತ

# ಭೈರವೇಶ್ವರನ ಕಾವ್ಯದ ಕಥಾ ಸೂತ್ರರತ್ನಾಕರ

## ॥ಪ್ರಥಮದಲ್ಲಿ ಪೀಠಿಕಾಸೂತ್ರವೆಂತೆಂದಡೆ ಪೇಳುತ್ತಿರ್ದಪಂ॥

ಶ್ರೀಗುರು ಸದಾಮಳ ನಿತ್ಯನಿರಂಜನ ಪರಮಪಾವನ ನಿರ್ಗುಣ ನಿರಾವರಣ ನಿರವಯವ ನಿರಾಮಯ ನಿರ್ದ್ವಂದ್ವ ನಿರ್ಭೇದ್ಯ ನಿಷ್ಪ್ರಪಂಚ ನಿಷ್ಪ್ರತ್ಯುಪಮಾತೀತ ನಿರುಪಾಧಿಕ ನಿರ್ವಿಕಾರ ನಿರ್ವಿಕಲ್ಪ ನಿಶ್ಚಲ ನಿಷ್ಕಳಂಕ ಮಹಿಮಾನಂದಾರ್ಣವ ಕೃಪಾಮೃತೇಕ್ಷಣ ಪರಶಿವನುಂ, ನಿಷ್ಕಲ ನಿರಂಜನ ಶೂನ್ಯಮಹಾಲಿಂಗ ಸದಾಶಿವ ಈಶ್ವರ ಮಹೇಶ್ವರ ರುದ್ರರೆಂಬ ಪ್ರಭಾಮೂರ್ತಿಗಳಂ ತಾಳ್ದಂಥಾ ಪರಶಿವನುಂ ತಾನೆ ತನ್ನ ಪಂಚಮುಖದಿಂ ಪಂಚಭೂತಾಷ್ಟತನುವಿಂ, ಪಂಚವಿಂಶತಿತತ್ವಾತ್ಮಕಮಾದ ಸಚರಾಚರಂ ನಾನಾಲೋಕ ಬ್ರಹ್ಮಾಂಡತೃಣಾದಿ ಬ್ರಹ್ಮಾಂತ್ಯಮಾದನೇಕ ಪಿಂಡಬ್ರಹ್ಮಾಂಡಗಳಂ ಕಲ್ಪಿಸಿ, ಅದಱೊಳಗೆ ಚತುರ್ದಶ ಭುವನಕ್ಕೆ ಮಧ್ಯದಲ್ಲೊಪ್ಪುವ ರಜತಪರ್ವತಾಗ್ರದಲ್ಲಿ, ನವರತ್ನಖಚಿತರಚಿತಮಪ್ಪ ದಿವ್ಯಸಿಂಹಪೀಠದಲ್ಲಿ ಉಮಾಸಮೇತನಾಗಿ ಮೂರ್ತಂಗೆಯ್ದು, ನರ ಸುರ ಗರುಡ ಗಂಧರ್ವ ಸಿದ್ಧ ವಿದ್ಯಾಧರ ಮನು ಮುನಿ ಯಕ್ಷ ರಾಕ್ಷಸ ಕಿನ್ನರ ಕಿಂಪುರುಷ ನಾಗಾಪ್ಸರ ದನುಜ ದಿವಿಜರಿಂ, ಪರಿಯಜೇಂದ್ರಾದಿಯಷ್ಟದಿಕ್ಪಾಲಕರಷ್ಟವಸುಗಳಿಂ, ನವಗ್ರಹ ನವಬ್ರಹ್ಮ ಸಪ್ತಋಷಿಮಾತೃಕೆಯರಿಂ, ಸಿರಿ ಭಾರತಿ ಶಚಿಯರುಂಧತಿ ಮೊದಲಾದನೇಕ ದೇವಕನ್ನಿಕೆಯರಿಂ, ನಂದೀಶ್ವರ ಭೃಂಗೀಶ್ವರ ಸ್ಕಂದ ಗಣಪ ವೀರಭದ್ರೇಶ್ವರ ದಾರುಕ ರೇಣುಕ ಘಂಟಾಕರ್ಣ ಗಜಕರ್ಣ ಶತಮುಖ ಸಹಸ್ರಮುಖಾದ್ಯನೇಕ ಪ್ರಮಥನಾಯಕರಿಂ, ಸಕಲವೇದಶಾಸ್ತ್ರಾಗಮ ಪುರಾಣತರ್ಕಾದಿ ಇತಿಹಾಸಘೋಷಸ್ತವನದಿಂ, ಓಂಕಾರನಾದಾದಿಮಂತ್ರನಿಚಯ[1] ಜಯಜಯರವದಿಂ, ಸನಕಾದಿಯೋಗಿಗಳ [2]ಸ್ತುತಿಗಳಿಂಪಿನಿಂ,[2] ಶುಕಾದಿಮುನಿಗಳ ವಂದ್ಯಸ್ತವನತತಿಯಿಂ, ತುಂಬುರನಾರದರ ಖಚರನಿಶಾಚರರ ತೂರ್ಯತ್ರಯಘೋಷದಿಂ, ಪ್ರಮಥಗಣತಿಂಥಿಣಿಯ ಸಂತೋಷದಿಂ, ಸಕಲೈಶ್ವರ್ಯಸಂಪತ್ತಿನಿಂದೊಪ್ಪುತ್ತಿರ್ದ, ಪರಶಿವನ ಚಂದ್ರಧರಲೀಲೆಯಾದಿಯಾದ ಸ್ಥಾಣುವಿನ ಲೀಲೆಯಂತ್ಯಮಾದಿಪ್ಪತ್ತೈದು ಲೀಲೆಗಳ್, ಆ ಪರಶಿವನ ಸಗುಣಾನಂದಲೀಲೆ; ಅಂತಪ್ಪ ಪರಶಿವಂಗೆ ಭಕ್ತ್ಯಾನಂದರೂಪಾಗಿರ್ಪ, ಗೋಪ್ಯದ ಲೀಲೆಯುಂಟದೆಂತೆಂದಡೆ; ಅಂತಪ್ಪ ನಿತ್ಯನಿರಂಜನ ನಿಷ್ಕಳ ಪರಶಿವನುಂ, ಭಕ್ತ್ಯಾನಂದಲೀಲೆಯಂ ನಟಿಸಲೋಸ್ಕರವಾಗಿ, ತಾನೇ ಗುರುಶಿಷ್ಯ, ತಾನೇಯಂಗಲಿಂಗ ತಾನೇ ಭಕ್ತ ಜಂಗಮ ತಾನೇ ಕರ್ತೃ ಭೃತ್ಯತ್ವಮುಂ, ತಾನೇ

1. ಮ (ಕ) 2. ಆಶೀರ್ವಾದದಿಂ (ಗ)

ನ್ವ್ಯಸೇವಕತ್ವಮಂ, ಏಕಮೇವಾದ್ವಿತೀಯನಪ್ಪ, ನಿರಾಳಪರವಸ್ತುವೇ ಒಂದೆರಡು ಮೂಱೂಱು ಮುವ್ವತ್ತಾಱು, ನೂಱೊಂದಿನ್ನೂಱು ಹದಿನಾಱೆಂಬ, ಅನೇಕಾಷ್ಟವಿಧ ಸಕೀಲಸಂಬಂಧವಾದ ಶರಣಲಿಂಗ ಸಂಬಂಧತ್ವಮಂ ತಾಳಿದ ಪರಶಿವ ತಾನೇ, ನಂದೀಶ್ವರ ಭೃಂಗೀಶ್ವರ ಸ್ಕಂದಗಣಪ ವೀರೇಶ್ವರ ಮೊದಲಾದನೇಕಾದ್ಯರ ರೂಪಂ ಧರಿಸಿರುತುಂ ಮತ್ತಂ ಆದ್ಯರೇ ಶಿವನ ನಿರೂಪದಿಂ ವೀರಶೈವಾಚಾರದಿಂದ ಲೋಕವನುದ್ಧರಿಸಲೆಂದು, ಬಸವಣ್ಣ ಚೆನ್ನಬಸವಣ್ಣ ಅಲ್ಲಮಪ್ರಭುದೇವರು ಮಡಿವಾಳಮಾಚಯ್ಯ ಸೊಡ್ಡಳಬಾಚಯ್ಯಗಳು ಕಿನ್ನರಿಬ್ರಹ್ಮಯ್ಯ ಕನ್ನದಬ್ರಹ್ಮಯ್ಯಗಳೆಂಬೇಳುನೂಱೆಪ್ಪತ್ತೇಳು ಪುರಾತನರಾಗಿ, ಮರ್ತ್ಯಲೋಕಕ್ಕವತರಿಸಿ ವೀರಶೈವಾಚಾರದಿಂದಷ್ಟಾವರಣ ಮೊದಲಾದ ಶಿವಾಚಾರವನುದ್ಧರಿಸಿ ಮರ್ತ್ಯದಲ್ಲಿ ನಿತ್ಯಾನಂದ ನಿಜಲಿಂಗೈಕ್ಯರಾಗಿರುತುಂ, ಮರ್ತ್ಯಲೋಕದ ಮಣಿಹವಂ ಪೂರೈಸಿ ಕೈಲಾಸಕ್ಕೈಯ್ದಿ, ಘನಲಿಂಗಸುಖದಿಂದಿರಲತ್ತ. ಇತ್ತ ಭೂಲೋಕದಲ್ಲಿ ವೀರಶೈವಾಚಾರವೆಲ್ಲವುಂ ಮಸುಳಿಸಿ ಪೋಗಲು, ನಾರದನೆಂಬ ಮುನಿರಾಜ ಮರ್ತ್ಯಕ್ಕೈತಂದು ಭೂಲೋಕದ ಸ್ಥಿತಿಗತಿಯನಱಿದು, ಕೈಲಾಸಕ್ಕುರವಣಿಸಿ ಪೋಗಿ, ಶಿವಂಗಷ್ಟಾಂಗವೆಱಗಿ, ಕೈಮುಗಿದು ನಿಂದು, ದೇವ ದೇವಾ! ಶರಣಜನಮನೋವಲ್ಲಭ ಭಕ್ತದೇಹಿಕ ದೇವಾ, ಎನ್ನ ಬಿನ್ನಪವನವಧರಿಸಿಮೆನಲು, ಶಿವಂ ಲಾಲಿಸುತ್ತಿರೆ ಬಿನ್ನೈಸಿದಂ. ಬಸವಣ್ಣ ಚೆನ್ನಬಸವಣ್ಣ ಅಲ್ಲಮಪ್ರಭುದೇವರು ಮುಖ್ಯವಾದ ಪ್ರಮಥರು, ಭೂಲೋಕದೊಳು ಶಿವಭಕ್ತಿಯನುದ್ಧರಿಸಿ ನಿಮ್ಮೊಳು ಬೆರಸಿದಂದಿಂದ ಭೂಲೋಕದಲ್ಲಿ ವೀರಶೈವಾಚಾರದ ಕುಱುಹು ಇಲ್ಲದಂತಾಯ್ತು. ಪರಶಿವನೆ ನೀವೇ ಬಿಜಯಂಗೈದು, ಭೂಲೋಕದಲ್ಲಿ ವೀರಶೈವಾಚಾರವನುದ್ಧರಿಸಬೇಕು ದೇವಾಯೆನಲಾತ ನಮಿಸಲಾ ಮುನಿಯ ಬಿನ್ನಪಂಗೇಳ್ದು, ಪರಶಿವಂ ನಸುನಗುತಂ, ಸು[1]ತ್ತಿ[1]ರ್ದ ಪ್ರಮಥಗಣದ ಮೊತ್ತಮುಂ ನೋಡುತ್ತುಂ, ಕಾಲಸಂಹಾರನೆಂಬ ಗ[2]ಣೇ[2]ಶ್ವರನಂ ಕರೆದು, ಮನ್ನಿಸುತ್ತುಂ ಮರ್ತ್ಯದೊಳು ನೀ ಪೋಗಿ ವೀರಶೈವಾಚಾರವನುಂಟುಮಾಡಿ, ಪವಾಡಗಳಂ ಗೆಲಿದು ವಾದಮಂ ಖಂಡಿಸಿ ಗೆಲಿದು ನೀನಿರುತಿರಲ್ಕೆ, ನಾಂ ಬಂದು, ಕೈಲಾಸಕ್ಕೆ ಕರೆದುಕೊಂಡುಬರ್ಪೆನು ಪೋಗೆನಲು, ಶಿವಂಗೆಱಗಿ, ಎನಗೆ ಜನ್ಮಸ್ಥಲವಾವುದು ದೇವಾ! ಎನಲು, ಭೂಲೋಕದೊಳಾಂಧ್ರದೇಶದಲ್ಲಿ, ಮೋಪೂರೆಂಬ ಪಟ್ಟಣದರಸು ಸಂಗಮರಾಜ ಹೈಮವತಿಯೆಂಬ ಸತಿಯುಳ್ಳ ಕ್ಷತ್ರಿಯಭೂಪಾಲಕನು ಪುತ್ರನಕಾಂಕ್ಷೆಯಿಂದೆಮ್ಮ ಶ್ರೀಪದವ ಧ್ಯಾನಿಸುತ್ತಿರ್ಪನಾತಂಗೆ ಪುತ್ರನಾಗು ಪೋಗೆನಲು, ಶಿವಂಗೆಯು ಪ್ರಮಥರಿಗೆಱಗಿ, ಬೀಳ್ಕೊಂಡು ಭೂಲೋಕಕ್ಕೆಯ್ದಿಯವರಿಗೆ ಪುತ್ರನಾಗುದಯಿಸಿ, ಭೈರವರಾಜನೆಂಬ ನಾಮದಿಂದೊಪ್ಪಿರುತ್ತುಂ, ಬಾಲಲೀಲೆಯಂ ಕಳೆದು, ಕರಿತುರಗ[3]ಶ[3]ಸ್ತ್ರಾಭ್ಯಾಸ ಚೌಷಷ್ಟಿಕಳಾವಿದ್ಯಾಪರಿಣತನಾಗಿ, ಸಲ್ಲಕ್ಷಣ ಸಂಪೂರ್ಣವಪ್ಪ ಕನ್ನಿಕೆ ಮಹಾದೇವಿಯೆಂಬ ಸ್ವಸ್ತ್ರೀಯುಕ್ತನಾಗಿ, ಸಕಲೈಶ್ವರ್ಯ

1. ತ್ತಲಿ (ಗ) 2. ಣಾಧೀ (ಗ) 3. ಸ್ಮರಶಾ (ಗ)

ನಿಯೋಗವೆರಸಿ, ಚತುರಂಗಬಲದಿಂದೊಪ್ಪುತ್ತುಂ, ಕಾಮನ ಚೆಲ್ವು, ಭೀಮನ ಸತ್ವ, ಸುರಪನ ಭೋಗ, ಕರ್ಣನ ತ್ಯಾಗ, ಬ್ರಹ್ಮನ ಚತುರತ್ವ, ಸೂರ್ಯನ ಶೂರತ್ವ, ಕುಬೇರನ ಭಾಗ್ಯದಿಂ ಶ್ರೇಷ್ಠನಾಗಿರುತ್ತುಂ, ದಾನ ಧರ್ಮ ಸ್ನಾನ ಜಪ ಸೂರ್ಯಕುಲದರಸು ನೀತಿಯ ಖ್ಯಾತಿಯಿಂದಿರುತ್ತುಂ, ಸಕಲಶಾಸ್ತ್ರಂಗಳಂ ಕೇಳ್ವಾಕಾಂಕ್ಷೆಯುಳ್ಳಾತನಾಗಿ, ವೇದಶಾಸ್ತ್ರಾಗಮಪುರಾಣೇತಿಹಾಸಾದಿಕೋವಿದನಾದ ಪ್ರಹುಢಾಚಾರ್ಯನೆಂಬ ಪುರಾಣಿಕನಂ ಕರೆಸಿ, ತ್ಯಾಗ ಭೋಗ ವೀರ ವಿತರಣ ಪರಹಿತಚರಿತದಿಂದ ರಾಜ್ಯತೇಜ ಕೀರ್ತಿಪ್ರತಾಪದಿಂ, ರಾಜ್ಯವನಾಳಿದರಸುಗಳಾರೆಂದು ಕೇಳಲು ಭೈರವರಾಜನೊಳು ಪೇಳುತ್ತಿರ್ದಪಂ.

॥ಅದೆಂತೆಂದಡೆ॥

ನಳ ಹರಿಶ್ಚಂದ್ರ ಪುರೂರವ ಪುರುಕುತ್ಸ ಸಗರ ಕಾರ್ತವೀರ್ಯಕನುಂ ಮೊದಲಾದ ಷಟ್ಚಕ್ರವರ್ತಿಗಳುಂ, ಗಯನೆ ಆದಿಯಾಗಿ ಅಂಬರೀಷನಂತ್ಯವಾದ ಷೋಡಶ ಮಹಾರಾಯರುಂ, ಕರ್ಣ ಕೌರವ ರಾಮ ರಾವಣ ಬಲಿ ವಾಲಿ ಯಯಾತಿ ನಹುಷ ರಘು ಭೀಮ ಬಲಭದ್ರ ಶಿಶುಪಾಲ ಕಲಿಪಾರ್ಥನುಂ, ಕೀಚಕ ದಶರಥ ಮೊದಲಾದವರು ಕೆ[1]ಟ್ಟ[1]ಹಾಸ್ಯಕ್ಕೆ ಕಾರಣವಾದ ಹಾನಿಕಥೆಗಳಂ ಕೇಳ್ದು ಶಿರದೂಗುತ್ತುಂ, ಸಪ್ತ ಮಾತೃಕೆಯರುಂ, ಸಪ್ತಋಷಿಗಳುಂ, ಅಷ್ಟತನುಗಳಷ್ಟಕುಲಶೈಲಂಗಳುಂ, ಅಷ್ಟದಿಕ್ಪಾಲಕರಷ್ಟವಸುಗಳುಂ, ಕ್ಲೇಶದಿಂ ಕಾದಿ ಕಾದಿ ಮಡಿದರೆಂದು ಪೇಳುವ ದೂಷ್ಯಕ್ಕೆ ಕಾರಣವಾದ ಜಾರಚೋರರ ಕಥೆಗಳಂ ಕೇಳ್ದು ಚಿಂತಿಸುತ್ತುಂ, ಕೌರವರು ಪಾಂಡವರು ಮೌರಿ ಕದಂಬರುಂ, ಹರಿಯಜೇಂದ್ರಾದಿ ಮೊದಲಾದ ಮನುಮುನಿಗಳುಂ, ಜೂಜು ಮೊದಲಾದ ರಾಜಗರ್ವದಿಂ, ಕಾದಿ ಮಡಿದರೆಂದು ಪೇಳ್ದ ಲೋಕವರ್ತನೆಯ ನೀತಿ ಕಥೆಗಳಂ ಕೇಳ್ದು ಚಿಂತಾಕ್ರಾಂತನಾಗಿ ಮತ್ತಿಂತೆಂದನು. ಭೈರವರಾಜನುಂ ಶಿವಭಕ್ತಿನಿಷ್ಠಾಪರರಾರೆಂದು ಕೇಳಲು, ಮೂಱುಲೋಕದೊಳಗುಳ್ಳವರ ಪೇಳುತ್ತಿರ್ದನು. ನವಬ್ರಹ್ಮರುಂ, ನವಗ್ರಹಂಗಳುಂ, ನವಚೋಳರುಂ, ನವಬಲ್ಲಾಳರುಂ, ನವಮುಗ್ಧರುಂ, ನವನಾಥಸಿದ್ಧರುಂ, ಇಂತಿವರೊಳು ಶಿವಭಕ್ತಿನಿ[2]ಷ್ಠಾಪರರಾಗಿ,[2] ಮುಕ್ತರಾದರ್ಕೆಲಬರುಂ, ಶಿವಭಕ್ತಿಹೀನರಾಗಿ ಕೆಟ್ಟವರ್ಕೆಲಬರುಂ, ಆಱುಶೈವದಲ್ಲಿಯುಂ, ವೀರಶೈವದಲ್ಲಿಯುಂ, ಮುಕ್ತಿಯುಂ ಪಡೆದವರಾರೆಂದು ಕೇಳಲುಂ ಭೈರವರಾಜನಿಗೆ ಪೇಳಿದನು. ಮನು ಮುನಿ ಯಕ್ಷ ರಾಕ್ಷಸರುಂ ಅಱುವತ್ತುಮೂಱು ಪುರಾತನರುಂ, ಶೈವದಲ್ಲಿ ಮುಕ್ತಿಯುಂ ಪಡೆದವರುಂ, ವೀರಶೈವದಲ್ಲಿ ದಶಗಣ ತೇರಸಗಣ ಷೋಡಶಗಣ, ಪ್ರಮಥಗಣ ರುದ್ರಗಣ ಅಮರಗಣ ಭಕ್ತಗಣಮೊದಲಾದೇಳುನೂಱೆಪ್ಪತ್ತೇಳು ಪುರಾತನರುಂ, ನೂತನ ಪುರಾತನರುಂ, ನೂಱೊಂದುವಿರಕ್ತರುಂ, ಮೊದಲಾದ ಶ್ರೀ ವೀರಶೈವದಲ್ಲಿ,

1. ಟ್ಟು (ಗ) 2. ಷ್ಠರಾದನಿ (ಗ)

ಶಿವನ ಕೃಪಾಪ್ರಸನ್ನತ್ವಮಂ ಪಡೆದು ನಿತ್ಯಾನಂದನಿಜಸುಖಿಗಳಾರೆಂದು ಪುಣ್ಯಕ್ಕೆ ಕಾರಣವಾದ ಪುರಾತನರ ಕಥೆಗಳಂ ಪೇಳಲು, ಕೇಳ್ದು ಭೈರವರಾಜನುಂ, ಇಂತೀ ಹಾಸ್ಯಕ್ಕೆ ಈಡಾದ ಹಾನಿಕಥೆಗಳಂ, ದೂಷ್ಯಕ್ಕೆ ಈಡಾದ ಜಾರಚೋರರ ಕಥೆಗಳಂ, ಲೋಕವರ್ತನೆಗೆ ಬೇಕಾದ ನೀತಿಯ ಕಥೆಗಳಂ, ಮೋಕ್ಷಕ್ಕೆ ಕಾರಣವಾದ ಪೂರ್ವ ಪುರಾತನರ ಚಾರಿತ್ರಂಗಳಂ ಕೇಳ್ದು ಮೋಕ್ಷಾಪೇಕ್ಷಿತನಾಗಿ, ಎಂದಿಗೆ ಈ ಸಂಸಾರದ ಬಂಧನವಳಿದು ಕಳೆದು, ಎಂದಿಗೆ ನಾಂ ಶಿಭಕ್ತರಾಗಿ ಭಕ್ತಿಯುಕ್ತರಾಗಿಪ್ಪೆವೊಯೆಂದು ಸತಿಪತಿಗಳು ಶಿವಜ್ಞಾನಚಿಂತೆಯಿಂದೆ ಮಱದೊಱಗಿದಂತೆ ನಿದ್ರೆಗೆಯ್ಯಲು, ಸ್ವಪ್ನದಲ್ಲಿ ಶಿವನು ಬಂದು ಭೈರವರಾಜನೊಳೆಂದನು. ನಿನ್ನ ಕರದ ಸುರಗಿ ಚರಣದ ಬಿರಿದು ನಿನ್ನ ತರುಣಿ ಸಹವಾಗಿ, ಮಲ್ಲಿಪಟ್ಟಣಕ್ಕೆ ಪೋಗಿ, ಅಲ್ಲಿ ಗುರುಕರುಣವುಂ ಪಡೆದು ಸಾಸಲಿಗೆ ಪೋಗಿ ಜಂಗಮಾರ್ಚನೆಯಂ ಮಾಡುತ್ತಿರು, ನಿನಗೆ ನಿತ್ಯಾನಂದಸುಖವ ನಿತ್ತಪೆನು. ಎನ್ನ ಪೆಸರು, ಸಾಸಲಸೋಮೇಶ್ವರ ದಿಟ. ನಿನ್ನಾಣೆ ನಂಬೆಂದು ತನ್ನ ಹಸ್ತವಂ ಮಸ್ತಕದಮೇಲಿಟ್ಟು ಪೋಗಲೆಚ್ಚತ್ತು, ಕಣ್ದೆಱೆದು ಕಂಡ ಕನಸುಮಂ, ಸತಿಗೆ ಪೇಳಲು, ಕಣ್ಣಪ್ಪ ಚೇರಮರಾಯ ನಂಬ್ಯಣ್ಣ ಮೊದಲಾದ ಪುರಾತನರಿಗೆ; ಶಿವನು ಸ್ವಪ್ನದಲ್ಲಿ ಪೇಳಿದಂತಾಯಿತೆಂದು, ಸತಿಪತಿಗೆಱಗಿ, ನಮಗೆ ನಿಜಮುಕ್ತಿಗೆಯ್ದುವ ಸಮಯಮಾದುದೆಂದು ನಿಶ್ಚೈಸಿ, ಹರುಷದಿಂದ ದೇಶ ಕೋಶ ಬೊಕ್ಕಸ ಭಂಡಾರ ಆನೆ ಕುದುರೆ ರಥ ಪದಾತಿ ಛತ್ರ ಚಾಮರ ಕುಂಚ ಕಾಳಂಜಿ ಸಿಂಧ ಸೀಗುರಿ ಮುತ್ತು ರತ್ನ ಮೊದಲಾದ ಸಕಲೈಶ್ವರ್ಯಮುಂ, ಶಿವಭಕ್ತರಿಗಿತ್ತು ವಂದಿಸಿ, ಭೈರವರಾಜ ತನ್ನ ಸ್ತ್ರೀ ಮಹಾದೇವಿಸಹವಾಗಿ, ಮೋಪೂರದತ್ತಣಿಂ ಪೋಱವಂಟು ಪೋಗುತ್ತಿರಲು ಕಂಡು ಪಾರಿಯಾತ್ರಕ ಧನಸೇನ ಭರ್ತೃಹರಿ ಮೊದಲಾದವರು ಸಂಸಾರವಂ ಬಿಟ್ಟು ಪೋದಂತಲ್ಲವೆಂದು ಸರ್ವಜನರು ಕೀರ್ತಿಸುತ್ತಿರಲು, ಸತಿಪತಿಗಳು ಶಿವನನು, ಪಾರ್ವತಾದೇವಿ ದುಗ್ಗಳವ್ವೆ ಚಂಗಳವ್ವೆ ನಾಗಮ್ಮ ಮೊದಲಾದ ಶರಣೆಯರ ನೆನವುತ್ತಂ, ಮನೋವೇಗದಿಂ ಬಂದು ಮಲ್ಲಿಪಟ್ಟಣಮುಂ ಪೊಕ್ಕು ಉಳಿಯುಮೇಶ್ವರಲಿಂಗವಂ ಕಂಡು ನುತಿಸಿ ಕರುಣಮುಂ ಪಡೆದಿರುವಷ್ಟರೊಳಾ ಪಟ್ಟಣದರಸು ರಾಮರಾಜ ವೈಹಾಳಿಗೆಯ್ದುವಲ್ಲಿ ಭೈರವಾಂಕನ ಚರಣದ ಬಿರಿದಂ ಕಂಡು ಕದನಾಂಕ ಶೂರನೆಂಬ ಪಟುಭಟ ತಡೆಯಲು, ಕಾದಿಗೆದ್ದವನ ಸಂಹರಿಸಿ ರಾಮರಾಜನಿಂದ ಮನ್ನಣೆವೆತ್ತಿರುವ ನಿತಱಕೊಳು, ಬೇಂಟೆಗೆಂದು ಕಿರಾತರ್ವೆರಸಿ ಕಾನನಕೆಯ್ದಲು, ದಸರಥ ಪಾಂಡವನೃಪ ಸೌಂದರರಾಯ ಮೊದಲಾದವರು ಬೇಂಟೆಗೆಂದು ಪೋಗಿ, ಶಾಪಹತರಾಗಿ ಕೆಟ್ಟು ಪೋದವಂತಲ್ಲ. ಭೈರವರಾಜ ರಾಮರಾಜರುಂ ಬೇಂಟೆಗೆ ಪೋದರು, ಎಂದು ಸರ್ವಜನರುಂ ಕೀರ್ತಿಸುತ್ತಿರ್ಪಲ್ಲಿ, ಮುಂಪೆ ಶಿವನ ಕಾರುಣ್ಯಸೂತ್ರದಿಂದ ಭೈರವದೇವ ಮೆಱದ ಪವಾಡವೆಂತೆಂದಡೆ. ಲಿಂಗದನದಿಯ ಸ್ವಪ್ನಂಗಳು, ಅವರೆ ಸಮರಂಗಣ ಬೆರಳು, ಪನ್ನಿಗಸುಂ, ಜಂಗಮದಿಷ್ಟ ಫಲಂಗಳುಂ, ಒನಕೆಯುಂ ತವನಿಧಿಯು,

ಹಾಂಗೆ ಸೋಮೇಶ್ವರನುಂಟೆಂದು ನುಡಿದುದು. ಮೊದಲು ಲಿಂಗದ ಪವಾಡ ವೆಂತೆಂದಡೆ, ಭೈರವರಾಜನು ಬೇಂಟೆಗೆಯ್ದು ತೋಹಿನಲ್ಲಿರ್ದ ಎರಳೆಯನಿಱಿಯಲು ಎರಳೆಯ ರೂಪು ಪೋಗಿ, ನಿಶ್ಶಾಪವಾಗಿ ಗಾಂಧರ್ವಂ ಶಿವಲೋಕಕ್ಕೆಯ್ದಲು ಕಂಡು ಸಿದ್ಧರಾಮೇಶ ಜಸಕಂಪ ಪಾರಾಶರ ಮೊದಲಾದವರ ಕೈಸೋಂಕಿನಿಂದ, ನಿಶ್ಶಾಪ ವಾದಂತಾಯಿತ್ತೆಂದು ಕೀರ್ತಿಸುತ್ತಿರಲು, ಭೈರವಾಂಕ ಎರಳೆಯನಿಱಿದ ಕಠಾರಿಗೆ ರಡು ಲಿಂಗ ಸಿಲ್ಕಿಬರಲ್ಕಂಡು, ಸಮಸ್ತಜನರು ಕೀರ್ತಿಸುತ್ತಿರ್ದರು. ಅನಿಮಿಷರಾಜ ಸಿದ್ಧರಾಮೇಶ ಮೇದಾರ ದೂಳಯ್ಯ ಮೊದಲಾದವರಿಗೆ, ನಂದೀಶ ಮೊದಲಾದವರಿತ್ತ ಲಿಂಗದಂತಿದೆಯೆಂದು ಕೊಂಡಾಡುತಿರಲು, ಲಿಂಗವಂ ಕಂಡು ರಾಮರಾಜ ಭೈರವ ರಾಜಂಗೆಱಗಿ ಸಂಭ್ರಮದಿಂದ ಪಟ್ಟಣಕ್ಕೆಯ್ತಂದು ಧನಧಾನ್ಯ ಸಕಲ ವಸ್ತುವನಿತ್ತು ಪೊಡವಂಟು ಪೋಗಲು ಏಕಾಂತರಾಮಯ್ಯ, ತೆಲ್ಗಣೆಯಾಂಡಿ, ಚೊಕ್ಕನಯಿನಾರು ಮೊದಲಾದವರಿಗೆ ಶಿವನು ಆಕಾಶವಾಕ್ಕಾಗಿ ನುಡಿದಂತೆ ಪೇಳಿದ ಶಿವನು ಸಾಸಲ ಪುರದಿಂದ ಬಂದು ದೀಕ್ಷೆಯನಿತ್ತಪೆನೆಂದೆನಲ್ಕೇಳಿ ಗುರುಪದಧ್ಯಾನದಿಂದಿರಲು, ಸಾಸಲ ಸೋಮೇಶನು ಹಾಲಸೋಮೇಶನೆಂಬ ಗುರುರೂಪನಾಮವಂ ತಾಳ್ದು ಬರಲ್ಕಂಡು ವಂದಿಸಿ ಸತ್ಕರಿಸಿ, ಎತ್ತಣಿಂದ ಬಂದಿರಿ ದೇವಾ ಎನಲು, ಗುರುಸಾಂಪ್ರದಾಯದ ಪೂರ್ವಾಪರವಂ ಪೇಳಲು ಕೇಳಿ, ಎನಗೆ ದೀಕ್ಷೆಯಂ ಕರುಣಿಸೆಂದು ಪೊಡಮಡಲು ವೇದಾಗಮೋಕ್ತದಿಂ, ಸರ್ವಗಣಸಮ್ಮತದಿಂ ದೀಕ್ಷಾತ್ರಯವನಿತ್ತು ಸರ್ವಾಚಾರಮಂ ಬೋಧಿಸಿ, ಕರದ ಸುರಗಿ ಚರಣದ ಬಿರಿದು ಇರಲಿ, ಮುಂದೆ ಕಾರಣವುಂಟೆಂದುದೀ ಲಿಂಗದ ಪವಾಡವು.

## ॥ಇನ್ನು ನದಿಯ ಪವಾಡವೆಂತೆಂದಡೆ॥

ಮಲ್ಲಿಪಟ್ಟಣದಿಂದ ಸಾಸಲಿಗೆ ಹಾಲಸೋಮೇಶ ಭೈರವದೇವ ಮಹಾದೇವಿ ಯಮ್ಮನು, ಶಿವಶರಣರೊಡಗೂಡಿ ಪೋಗುವಲ್ಲಿ, ಸಿರಿಯಾಳ ಸಿಂಧುಬಲ್ಲಾಳ ತಿರುನಾ ಳ್ಪೋವರು ಮೊದಲಾದವರಿಗೆ ಶಿವನು ಮಳೆಯ ಕಱಿಸಿದಂತೆ ಮಳೆ ಕಱೆಯಲು, ಹೇಮಾವತಿಯೆಂಬ ಹೊಳೆ ಕಟ್ಟಲು, ಪರಸ್ಪರ ಧಾಳಿಯಿಂದ, ಸರ್ವಜನರು ಗೂಳಿಯದೆಗದು ನದಿಯುರವಣೆಯ ಕಂಡು ನಡುಗುತ್ತಿರಲು, ನದಿಯು ದಾರಿಯಂ ಬಿಡಿಸಿ ಭೈರವದೇವ ಸರ್ವಜನರೊಡಗೂಡಿ ನಡೆಯಲು ಕಂಡು ಮಡಿವಾಳಮಾಚಯ್ಯ, ಮುಸುಟೆಚೌಡಯ್ಯ, ಕೇತಿರಾಜಯ್ಯ. ಮೊದಲಾದ ಪುರಾತನರು, ನದಿಯು ದಾರಿಯ ಬಿಡಿಸಿ ನಡೆದಂತಾಯಿತೆಂದು ಕೀರ್ತಿಸಿದರೆಂಬುದೇ ನದಿಯ ಪವಾಡವು.

## ॥ಇನ್ನು ಸ್ವಪ್ನದ ಪವಾಡವೆಂತೆಂದಡೆ॥

ಅಂದು ಮೋಪೂರಲ್ಲಿ ಮಲ್ಲಿಪಟ್ಟಣಕ್ಕೆ ಪೋಗೆಂದು ಸ್ವಪ್ನದಲ್ಲಿ ಪೇಳಿದ ಪರಶಿವ ತಾನೆ, ಮುಂದೆ ಸಾಸಲಿಗೆ ಪೋಗಿ ಚಿಕ್ಕಣಾಚಾರ್ಯ ಶಂಭುನೃಪತಿ ಮೊದಲಾದ

ಭಕ್ತರ ಸ್ವಪ್ನದಲ್ಲಿ, ಶಿವನು ಪೇಳಿದನೆನ್ನಸುವೆನ್ನಾಚಾರ ಎನ್ನಸಮಯ ಸಮುದ್ಧರಣ ಎನ್ನಣುಗ ಭೈರವದೇವನಂ ಇದಿಗೊಳ್ಳಿಯೆಂದು ಪೇಳಲವರು ಸರ್ವಸಂಭ್ರಮ ದಿಂದಿದಿರ್ಗೊಂಡು ಸತ್ಕರಿಸಿ ಕರೆದುಕೊಂಡೊಯ್ದು, ಲಿಂಗಮುದ್ರೆಯ ಗೃಹಮೊದಲಾದ ಸಕಲವಸ್ತುವನಿತ್ತು ಇರುತಿರಲಿತ್ತ, ಭೈರವದೇವನು ಗುರುಭಕ್ತಿ ಲಿಂಗಪೂಜೆ ಜಂಗ ಮದಾಸೋಹ ಮಾಡುತ್ತಿರ್ದರೆಂಬುದೇ ಸ್ವಪ್ನದ ಪವಾಡವು.

## ॥ಇನ್ನು ಅವರೆಯ ಪವಾಡವೆಂತೆಂದಡೆ॥

ಶಿವನು ಚರಲಿಂಗವಾಗಿ ಬಂದು ಒಂದು ಅವರೆಯ ಬೀಜಮಂ ಭೈರವಂಗಿತ್ತು ಪೋಗಲು ಹಿತ್ತಿಲೊಳ್ಬಿತ್ತಲಂಕುರಿಸಿ, ಪಲ್ಲವಿಸಿ, ಪುಷ್ಪಫಲಕಾಯಾಗಿರೆ ಶಾಖವಮಾಡಿ ಶರಣರಿಗೆ ನೀಡಿ ಅನಂತಕಾಲಪೋಗಲು, ಫಲಬೀಜಬಿತ್ತು ಜಳ್ಳ್ಯಾಣಗಿಪೋಗಲತ್ತಾ ಚರಮೂರ್ತಿ ಬಂದು ಅವರೆಯ ಫಲವಾಯಿತ್ತೆಯೆಂದು ಕೇಳಲು, ಭೈರವಾಂಕ ಪವಾಡದಿಂದ ಫಲಮಂ ತೋಱಿ ಕಾಯಕೊಯ್ದು, ಶಾಕವಮಾಡಿ ಶರಣರಿಗೆ ನೀಡಲು ಕಂಡು ಬಸವಣ್ಣ, ಮೊರಟದ ಬಂಕಣ್ಣ, ಆದಯ್ಯ ಮೊದಲಾದ ಪುರಾತನರು, ಕೊರಡ ಕೊನರ್ಚಿ ಬರಡಮಂಸುಸ ಕಱೆಸಿ ಕುರುಡಹೆಳವರ್ಗೆ ಕಣ್ಣು ಕಾಲಿತ್ತುದಕಿಂದ ಭೈರವ ದೇವನ ಪವಾಡವೆ ಅಧಿಕವೆಂದು ಕೀರ್ತಿಸಿದರೆಂಬುದೆ ಅವರೆಯ ಪವಾಡವು.

## ॥ಇನ್ನು ಸಮರಾಂಗಣದ ಪವಾಡವೆಂತೆಂದಡೆ॥

ಚರಣದಲ್ಲಿ ಬಿರಿದ ಕಟ್ಟಿ ಭೈರವದೇವ ಗುರುಲಿಂಗ ಜಂಗಮ ಭಕ್ತಿಯ ಮಾಡು ತ್ತಿರಲು ಹರನು ಬಿರುದಾಂಕನಾದ ಚರಲಿಂಗಮೂರ್ತಿಯಾಗಿ ಬಂದು ಭೈರವಾ ಕದನಕ್ಕೆ ಬಾರೆಂದು ಕರೆಯಲು, ಒಲ್ಲೆನು ಶಿವಶಿವಾ ಎನಲು, ಯುದ್ಧಭಿಕ್ಷೆಯೆಂದು ಆಣೆಯನಿಕ್ಕಿ ಕಥೆಯಂ ಪೇಳಿ, ಕಾದುವನಿತಱೊಳ್, ಚರಮೂರ್ತಿ ಮಡಿಯಲು, ಸೇದಿರಾಜ, ಏಣಾದಿನಾಥ, ದಸರಯ್ಯ, ಸಿಂಧುಮರಾಳ ಮೊದಲಾದ ಶರಣರು ಹಗೆಯುಮಂ ಜಂಗಮವಾಗಿ ಬಂದಿಱಿಯಲು ಶರಣೆಂದರು. ಭೈರವನಿಂದು ಜಂಗಮ ವನಿಱಿಯಬಹುದೆಯೆಂದು ಶರಣಾಳಿ ಘೋರೆಂದುಲಿವುತ್ತಿರೆ, ಭೈರವದೇವ ಲಿಂಗಾ ರ್ಪಿತಕ್ಕೆ ಬನ್ನಿ ಎಂದು ಬಿನ್ನೈಸಲು, ನೀ ಜಂಗಮವಂ ಕೊಂದೆ ಒಲ್ಲೆವೆನೆ ನಿಮಗಿಂದ ಮುಂದೆ ನಾನವರ ಕರೆದು ತಂದಪೆನು, ನಾನವರ ಇಷ್ಟವನಿತ್ತುದು ಉಂಟೆಂದು ನುಡಿದು ಚರಣವಂ ಪಿಡಿದು ಶರಣುಮಾಡಿ ಕರೆಯಲು ಮಡಿದ ಚರಮೂರ್ತಿ ನುಡಿವುತ್ತೆದ್ದುಬರಲು ಕಂಡು, ಬಸವಣ್ಣ ನಂಬ್ಯಣ್ಣ ಮುಸುಟೆಯ ಚೌಡಯ್ಯ, ಸಕಳೇಶಮಾದರಸರು ಪ್ರಾಣವನಿತ್ತುದಕಿಂತಿದೇನಧಿಕವೆಂದು ಭಕ್ತರ್ಕೊಂ ಡಾಡಿದಂತೆ ಜಱೆದರೆಂಬುದೇ ಸಮರಾಂಗಣದ ಪವಾಡವು.

## ||ಇನ್ನು ಬೆರಳಿನ ಪವಾಡವೆಂತೆಂದಡೆ||

ಭೈರವದೇವ ತಮ್ಮ ಶೀಲಕ್ಕೆ ತಿಲಗಾಣವನಾಡುತ್ತ ಸುಯ್ದಾನದಿಂದಿರೆ ಶಿವನು ಭಕ್ತನಂತೆ ಬಂದು ಹಿತವಚನವ ನುಡಿದು, ಎಳ್ಳ ನೀ ನೂಂಕು ನಾನು ತಿರುಹುವೆನೆಂದು ಮೋಸದೋಳ್ತಿರುಹಲು, ಭೈರವದೇವನೈವೆರಳು ಖಂಡಿಸಿ ಬೀಳಲು, ಕಂಡಾಗ ಹರನು, ಕಲಿಕಾಮದೇವ, ಮೆಱೆಮಿಂಡಯ್ಯ, ರಕ್ಕಸಬೊಮ್ಮಯ್ಯ, ಮೊದಲಾದವರಿಗೆ ಹೆದರೋಡಿದಂತೋಡಲು, ಭೈರವದೇವನು ನಮಶ್ಶಿವಾಯ ಎಂದು ಭಸ್ಮವಂ ಮುಟಿ ಲಿಂಗಾರ್ಚನೆಗೆಯ್ಯಲು ಕರದಬೆರಳು ಚಿಗುರ್ತುಬರಲು ಕಂಡು, ಕೋವೂರಬೊಮ್ಮಯ್ಯ, ಬಾಣಕವೀಶ್ವರ, ಗುರುಭಕ್ತಯ್ಯ ಮೊದಲಾದ ಭಕ್ತರು ಕರ ಚರಣ ಕಣ್ಣ ಪಡೆದುದಕೆಂದ ಇದೇ ಘನವೆಂದು ಶರಣರು ಕೊಂಡಾಡಿದರೆಂಬುದೇ ಬೆರಳ ಪವಾಡವು.

## ||ಇನ್ನು ಪನ್ನಗನ ಪವಾಡವೆಂತೆಂದಡೆ||

ಭೈರವದೇವನು ಪುಷ್ಪದ ತೋಂಟಕ್ಕೆ ಪೋಗುವಲ್ಲಿ, ಶಿವಾಜ್ಞೆಯಿಂದ ಸರ್ಪಕಚ್ಚಿ ತಾನೆ ಮಡಿಯಲು, ಭೈರವದೇವ ಪೂಗೊಯ್ದು ಮನೆಗೆ ಬಂದು ಶರಣಗೋಷ್ಠಿಯಿಂದಿರಲು, ನಿಮ್ಮ ಕಚ್ಚಿದ ಸರ್ಪ ಸತ್ತುದೆಂದು ಪೇಳಲು, ಕೇಳಿ ಶರಣಾಳಿಸಹಿತ ನಡೆತಂದು ಉರಗನ ಶವಮಂ ಕಾಣುತ್ತ ಶಿವಶಿವಾ ನಮಶ್ಶಿವಾಯ ಎಂದು ಕರವಿಟ್ಟು ನೇವರಿಸಲು, ಭೋರೆಂದು ಮುರಿದೆದ್ದು ಪೆಡೆಯನೆತ್ತುತ್ತಿರೆ, ಭೈರವಾಂಕ:ಪೋಗೆಂದು ಕಳುಪಲು, ಕಂಡು ಶರಣಾಳಿ ಹಾವಿನಹಾಳ ಕಲ್ಲಯ್ಯ, ಸಿಂಗಿಬೊಪ್ಪಯ್ಯ, ಕದಿರೆ ರೇಮಯ್ಯ, ವೇಮನಾರಾಧ್ಯರು ಮೊದಲಾದ ಪುರಾತನರು ಸರ್ಪನಿಗೆ ಸರ್ಪನಿಂದಳಿದವರಿಗೆಯುಂ ಪ್ರಾಣವನಿ[1]ತ್ತುದಕಿಂತಲು, ಭೈರವದೇವ ಸರ್ಪಂಗೆ ಪ್ರಾಣವನಿತ್ತುದೇ ಆಶ್ಚರ್ಯವೆಂದು ಭಕ್ತರು ಕೊಂಡಾಡುತಿರ್ದರೆಂಬುದೇ ಪನ್ನಗನ ಪವಾಡವು.

## ||ಇನ್ನು ಜಂಗಮದಿಷ್ಟಫಲದ ಪವಾಡವೆಂತೆಂದಡೆ||

ಶರಣರೊಡಗೂಡಿ ಭೈರವಾಂಕನು ವನದೊಳಗಿರಲು, ಅಕಾಲದಲ್ಲಿ ಶಿವನು ಚರಲಿಂಗವಾಗಿ ಬಂದು ಚೂತಫಲವಂ ಬೇಡಲು, ಪವಾಡದಿಂದ ಚೂತಫಲವಂ ಮಾಡಿತ್ತು, ಅನಂತಭಕ್ತರ್ಸವಿದು ಲಿಂಗತೃಪ್ತಿಯೊಳೋಲಾಡುತ್ತಿರಲು, ಕಾರಿಕಾಲಮ್ಮೆ, ದಂಡನಾಥ, ಮುಸುಟಿಯಚೌಡಯ್ಯ, ಮೊದಲಾದ ಪುರಾತನರು ಜಂಗಮಕ್ಕೆ ಇಷ್ಟಫಲವಂ ಕೊಟ್ಟುದಕಿಂದ ಈ ಭೈರವದೇವನಿತ್ತುದು ಕರಚೋದ್ಯವೆಂದು ಭಕ್ತರು ಕೊಂಡಾಡಿದರೆಂಬುದೇ ಜಂಗಮದಿಷ್ಟಫಲದ ಪವಾಡವು.

---

1 ತ್ತಾದರೆಂತ (ಕ)

**॥ಇನ್ನು ಒನಕೆಯ ಪವಾಡವೆಂತೆಂದಡೆ॥**

ಮಹಾದೇವಿಯಮ್ಮನು ರಾಜಾಜ್ಞದಕ್ಕಿಯಂ ತಳಿಸುತ್ತಂ ಶ್ರೀಗುರನಾಥ, ನಾಗಮ್ಮ, ನೀಲಮ್ಮ, ಕಮಲವ್ವೆಯರು ಮೊದಲಾದ ಶರಣೆಯರ ಪಾಡುತ್ತಿರಲು, ಸೋಮೇಶನು ಚರಲಿಂಗವಾಗಿ ಬಂದು ಮುಱೆಯಲ್ಲಿ ನಿಂದು ಲಾಲಿಸಿ ಬಾಗಿಲಿಗೆ ಬಂದು ಮಹಾದೇವಿ ಎನಲು, ಕಂಡು ಕಡುಭೀತಿಯಿಂದ ಕಯ್ಯಲ್ಲಿರ್ದೊನಕೆಯ ನಂತರದಲ್ಲಿಯೇ ಬಿಟ್ಟು ಬೇಗ ಬಂದೆರಡುಪಾದಕ್ಕೆಱಗಿ, ಸರ್ವಸತ್ಕಾರವನಿತ್ತು. ಅನಿತಱೊಳು ಗುರು ಸೋಮನಾಥ ಅಂತರದಲ್ಲಿ ‌ನಿಂದಿರ್ದ ಒನಕೆಯಂ ಕಂಡು ನಂದೀಶ, ಬಸವಣ್ಣ, ಮಡಿವಾಳಗಳು ಮೊದಲಾದ ಶರಣರ ಮಹಿಮೆಗಿಂದ, ಮಹಾದೇವಿಯಮ್ಮನ ಪವಾಡವೇ ಅಧಿಕವೆಂದು ಕೊಂಡಾಡಿದರೆಂಬುದೇ ಒನಕೆಯ ಪವಾಡವು

**॥ಇನ್ನು ತವನಿಧಿಯ ಪವಾಡವೆಂತೆಂದಡೆ॥**

ಶಂಕರದಾಸಯ್ಯನಂತೆ ಸೂಜಿಯಕಾಯಕವಂ ಮಾಡಿ, ಜಂಗಮಾರ್ಚನೆಯ ಮಾಡಬೇಕೆಂದು ನೂತನದ ಅಂಗಿಯಂ ಪೊಲಿದು ವಿಕ್ರೈಸುವಷ್ಟಕ್ಕೆ ಶಿವನು ಚರಲಿಂಗವಾಗಿ ಬಂದು ಹರಸಿ ಭಸಿತವನಿಟ್ಟು, ಅಂಗಿಯಂ ಬೇಡಲು, ಭೈರವಾಂಕನಂಗಿಯಂ ಇತ್ತು ವಂದಿಸಲು, ಶರಣರು ಕಂಡು ಭಾಪೆಂದು ಕೀರ್ತಿಸುತ್ತಿರೆ, ಬಸವಣ್ಣ, ನಿಡುಗುಡಿ ಮಾರಯ್ಯ, ದಾಸಯ್ಯ ಮೊದಲಾದ ಶರಣರು ಜಂಗಮಕ್ಕೆ ವಸನವನಿತ್ತುದಕಿಂದಿದೇನು ಚೋದ್ಯವೆಂದು ಕೆಲರು ಕಿಱುದುಮಾಡಿ ನುಡಿಯಲು ಕೆಲರು ಘನವೆಂದು ಕೊಂಡಾಡುತ್ತಿರಲು, ಅನಿತಕ್ಕೆ ತವನಿಧಿ ಹೆಚ್ಚಲು ಕಂಡು ಕೋಟೆಯ ಶಿವದೇವ ನಂಬ್ಯಣ್ಣ ಚಿರುಪುಲಿಯರು ಮೊದಲಾದ ಪುರಾತನರು ತವನಿಧಿಯಂ ಪಡೆದುದಕಿಂದಿದೇ ಚೋದ್ಯವೆಂದು ಕೊಂಡಾಡಿದರು ಭಕ್ತಾಳಿಯೆಂಬುದೇ ತವನಿಧಿಯಂ ಪಡೆದ ಪವಾಡವು.

**॥ಹಾಂಗೆ ಸೋಮೇಶನುಂಟುಯೆಂದ ಪವಾಡವೆಂತೆಂದಡೆ॥**

ಭೈರವಾಂಕನುಂ ಸಾಸಿಲಿಂದ ಕಿಕ್ಕೇರಿಯಾರಾಧ್ಯ ಮಲ್ಲಣಯ್ಯನುಂ ಗಣಾಡಂಬರದ ಪರ್ವಕ್ಕೆ ಬಿನ್ನಹಂಮಾಡಲು, ಭಕ್ತಾಳಿಗೂಡಿ ಪೋಗಿ ಪಾದಾಂಬು ಪ್ರಸಾದವ ಸವಿದು ಶಿವಗಣಸುಖಾನಂದಾಬ್ಧಿಯೊಳೋಲಾಡುತ್ತಿರಲಿತ್ತ, ಕಮಲಸಖನಸ್ತಾದ್ರಿಯ ಸೇರಲು ಕಾರ್ಗತ್ತೆಯಾಗಿ ಮರಳಿ ಸಾಸಲಿಗೆ ಭೈರವಾಂಕನೈತರುವಾಗ, ಪುರಹರನು ಚತುರಂಗಬಲವೆರಸಿ ಬಂದು ಅಡ್ಡಗಟ್ಟಿ ತೋಱೆ, ದೇವತಾಸುರರು ಸಹವಾಗಿ ಭೈರವನೊಡನೆ ಕಾದುವಲ್ಲಿ, ಹರನ ಚತುರಂಗಬಲ ಮುಱಿದೋಡಲು ಕಂಡು ಶಿವನು ಭೈರವಂಗೆ ನಿಜದೋಱಲು, ಎಱಗಿದ ಭೈರವನ ಮನ್ನಿಸಿ ಮೈದಡಹಿ, ಚಲವಂತಶರಣ ಕೈಲಾಸಕ್ಕೆ ಬಾಯೆನಲು, ಇಂದಿಗೆ ತಿಂಗಳಿಗೆನ್ನ ಮಡದಿಸಹಿತ ಬಂದಪೆನೆನಲು, ಶಿವನು

---

1. ೩೦ (ಗ)

ಕೈಲಾಸಕ್ಕೆ ಪೋಗಲಿತ್ತ ಭೈರವಾಂಕನು ಮಂದಿರಕ್ಕೈತಂದು ಲಿಂಗ ಪೂಜೆಯಂ ಮಾಡಿ ಸುಖಮಿರ್ದು ಬೆಳಗಾಗಲೆಯ್ತಂದು ಶ್ರೀಗುರುವಿಗೆ ಶಿವನ ಕೃಪೆಯಂ ಬಿನ್ನೈಸಲು ಕೇಳಿ ಶರಣಾಳಿ ಚೋದ್ಯವೆಂದು ವೀರೇಶ ದಕ್ಷಾಧ್ವರಕೆ, ಮಾರಾರಿ ತ್ರಿಪುರಸಂಹಾರಕೆ ನಡೆದಂದಿನಂತಲ್ಲವೆಂದು ಕೀರ್ತಿಸುತ್ತಿರಲು, ವಾದಿಗಳು ನೆರೆದು ಸಟೆಯೆಂದು ಹಾಸ್ಯದಿಂದೆ ಘೋರಾಂಧಕಾರದಲ್ಲಿ ಊರಿಂದ ಬರುವ ದಾರಿಯಲ್ಲಿ ಗೊರವ ಕರೆದ ಪಂಗಡಯೆನುತ್ತಿರಲು, ವೇದಾಗಮೋಕ್ತದಿಂದ ಅವರವರ ಮತವಂ ಖಂಡಿಸಿ, ದಾಡಾಬಂಧನವಾಗಿ ಭಂಗಿಸಿ ಪೂರ್ವದ ಪುರಾತನರು ಸಮಸ್ತಸಮಯಮಂ ಸಂಹರಿಸಿದುದಂ ಪೇಳಲು ಸೋತು ತಲೆವಾಗಿ ಕಪಟದಿಂದಲಿಂತೆಂದರು. ಅಂದು ಕರೆದ ಶಿವನು ಇಂದು ಕರೆದೆನೆನಲಾ ರಣಭೈರವದೇವ ನುಡಿಸುವೆನಲು, ಅಂತಾಗಲೆಂದು ಶರಣರು ಸಹವಾಗಿ, ವಾದಿನಿವಹಗೂಡಿ ಸೋಮೇಶನಾಲಯಕ್ಕೈತಂದು, ಕರೆದು ನುಡಿ ದೇವಾ, ಎನ್ನೊಳಿರುಳೆಂದಂತೆ ಎನಲು, ನನ್ನಸು ನನ್ನಾಚಾರ ನನ್ನಸಮಯ ಸಮುದ್ಧರಣ ಭೈರವದೇವ 1ನನ್ನ1 ಕರೆದುದುಂಟೆಂದು ನುಡಿಯಲು, ಭುವನವೆಲ್ಲಾ ಜಯಜಯವೆಂದು ಕೀರ್ತಿಸಿ ಶರಣರ ಮಱೆಹೊಕ್ಕು ಪರಸಮಯದ ಮತವಡಗಿತ್ತು. ಬಸವಣ್ಣ, ನಂಬ್ಯಣ್ಣ, ದಾಸಯ್ಯ ವಾಗೀಶಯ್ಯ ಮೊದಲಾದ ಪುರಾತನರು ಲಿಂಗವ ನುಡಿಸಿದುದಕಿಂದ, ಭೈರವದೇವ ಲಿಂಗವ ಮಾತನಾಡಿಸಿದುದತ್ಯದ್ಭುತಾದ್ಭುತವೆಂದು ಸಮಸ್ತ ಶರಣರು ಕೊಂಡಾಡಿದರೆಂಬುದೇ ಹಾಂಗೆ ಸೋಮೇಶನುಂಟೆಂದ ಪವಾಡವು.

ಅಂದಿಗೆ ತಿಂಗಳು ತುಂಬಲು ಭೈರವಾಂಕನು ಭುವನದೊಳಷ್ಟದಿಕ್ಕಿನೊಳಗುಳ್ಳ ಸದ್ಭಕ್ತ ಶರಣಾಳಿಗಳಿಗೆ, ವಿಭೂತಿವೀಳ್ಯ ಬಿನ್ನವತ್ತಳೆಯಂ ಕಳುಹಿ ಕರೆಸಿ ಬರಲವರಿನಿದಿರ್ಗೊಂಡು ಸತ್ಕರಿಸಿ ಶಿವಗಣಾನಂದಾಬ್ಧಿ ಸಂಭ್ರಮಸುಖದೊಳೋಲಾಡುತ್ತಿರಲು ಅನಿತಱೊಳು ಶಿವನು ಭೇರೀನಾದ ಪೂಮಳೆ ಪ್ರಮಥರ ಸಂದಣಿಯಿಂದೆ, ಪ್ರಸನ್ನವಾಗಲು ಅಡಿಗೆಱಗಿದ ಭೈರವದೇವನ ಪಿಡಿದೆತ್ತಿ ಸಂತೈಸಿ ಸತ್ಕರಿಸಿ ಮಡದಿಸಹಿತ ಪುಷ್ಪಕದೊಳಗಿಟ್ಟು ದೇವಗಣದುಂದುಭಿ 2ಜಯಜಯರವರಿಂದ2 ಕೈಲಾಸಕ್ಕೆ ಕೊಂಡೊಯ್ದು, ಶ್ರೀಗುರುನಂದೀಶಂಗೆ ತೋಱಿ ಬೀಱಿ ಶರಣ ಭೈರವಂಗೆ ಶಂಕರನು, ನಿತ್ಯಾನಂದ ನಿಜಸುಖವನಿತ್ತುದನು **ಕಿಕ್ಕೇರಿಯಾರಾಧ್ಯ ನಂಜುಂಡೇಶ**ನೆಂಬ ಶಿವಕವೀಶ್ವರನು ವಸ್ತುಕವರ್ಣಕದಿಂದ ನವರಸಾರ್ಥ ಹದಿನೆಂಟ ಶೃಂಗಾರಯುಕ್ತವಾಗಿ ಕರ್ನಾಟಕಕಾವ್ಯ ಪ್ರಬಂಧಮಂ ಪೇಳಿದನೆಂಬುದೇ ಭೈರವೇಶ್ವರನ ಕಾವ್ಯದ ಕಥಾ ಗರ್ಭದ ಸೂಚನೆಯೆಂದಱಿವುದು.

1. ನಂ ನಾ (ಗ) 2. ರವದಿಂ ೨ ಯ ಜಯಜಯೆಂದು (ಗ)

## ||ಇಂತೀ ಕಥೆಯ ಗರ್ಭದ ಸೂತ್ರಾರ್ಥದ ವಿಸ್ತಾರವೆಂತೆಂದಡೆ||

## 'ಶ್ರೀಮದನೇಕಲೋಕಜನಕಂ'ಎಂಬುದಕ್ಕೆ ಕಥೆ

ಶ್ರೀಮತ್ಪರಮೇಶ್ವರನ ರಜೋಗುಣದಿಂದ ಬ್ರಹ್ಮನುದಯಿಸಿದ. ಆ ಬ್ರಹ್ಮಸಿಂದ ಖಿಳದೇವದಾನವ ಮಾನವಾದಿಗಳ ಪ್ರಥಮಸೃಷ್ಟಿಕ್ರಮ. ಆದಿಬ್ರಹ್ಮನ ನೇತ್ರಾದಿ ನವ ದ್ವಾರದಲ್ಲಿ ಮರೀಚ್ಯಾದಿ ನವಬ್ರಹ್ಮರು ಪುಟ್ಟಿದರು. ಅತ್ರಿ ವಸಿಷ್ಠ ಧರ್ಮದೇವತೆ ಪುಟ್ಟಿತ್ತು. ಮರೀಚ್ಯಾದಿ ವಸಿಷ್ಠಾಂತ್ಯಮಾದ ನವಬ್ರಹ್ಮರುಗಳಿಂದ ಜಗದ ಸೃಷ್ಟಿ ಯಾಯಿತ್ತು. ಮತ್ತಾ ಮರೀಚಿಗೆ ಕಶ್ಯಪ ಬ್ರಹ್ಮನಾದ. ಆತಂಗೆ ದಕ್ಷಬ್ರಹ್ಮನ ಪುತ್ರಿ ಯರಾದರು. ಹದಿಮೂಱು ಸ್ತ್ರೀಯರು. ಅದಿತಿ, ದಿತಿ, ದನುವೆ, ಕಾರಿ,[1] ಅನಾಯು, ಸಂಹಿತೆ, ಮುನಿ, ಪ್ರವಾಹಿ, ಅರಿಷ್ಟೆ, ವಿನುತೆ, ಕಪಿಲೆ, ಕದ್ರುವೆ, ಕ್ರೋಧೆಯರೆಂಬ ಹದಿಮೂಱು ಸ್ತ್ರೀಯರು. ಅದಿತಿಗೆ ಧಾತೃ ಮೊದಲಾದ ವಿಷ್ಣುಕಡೆಯಾದ ದ್ವಾದ ಶಾದಿತ್ಯರು, ಇಂದ್ರಾದಿ ಮೂವತ್ತುಮೂಱುಕೋಟಿ ದೇವತೆಗಳು ಪುಟ್ಟಿದರು. ಮತ್ತಾ ಸೂರ್ಯನಾರಾಯಣಂಗೆ ವೈವಸ್ವತಮನು ಜನಿಸಿದನು. ಅವನಿಗೆ ಇಕ್ಷ್ವಾಕ ಮೊದಲಾದ ಪರಂಪರೆಯಿಂದ ರಾಮ, ಲಕ್ಷ್ಮಣ, ಭರತ, ಶತ್ರುಘ್ನರು, ಕಡೆಯಾದ ಸಮಸ್ತ ಸ್ತ್ರೀವರ್ಗ ಜನಿಸಿತ್ತು. ಮತ್ತೆ ವೈವಸ್ವತ ಮನುವಿನ ಪುತ್ರಿಯರಾದ ಈಳೆ ಎಂಬಾಕೆಗೆ ಚಂದ್ರಸುತನಾದ ಬುಧಂಗೆ ಪುರೂರವ ಜನಿಸಿದ. ಆತಂಗೆ, ಆಯುವೆಂಬಾತ ಮೊದಲಾಗಿ, ಪಾಂಡವರಲ್ಲಿ ಜನಮೇಜಯ ಕಡೆಯಾದ ಸಕಲ ಕ್ಷತ್ರಿಯ ಜಾತಿ ಜನಿಸಿತ್ತು. ಮತ್ತೆರಡನೇ ದಿತಿಗೆ, ಐವತ್ತಾಱುಕೋಟಿ ರಾಕ್ಷಸರು ಜನಿಸಿದರು. ಅವರೊಳಗೆ ಹಿರಣ್ಯಕಶ್ಯಪುವಿಗೆ ಪ್ರಹ್ಲಾದ, ಸಂಹ್ಲಾದ, ಅನುಹ್ಲಾದ, ಶಿಬಿ, ಬಾಷ್ಕಲ ರೆಂಬೈವರು ಮಕ್ಕಳು. ಅವರೊಳಗೆ ಪ್ರಹ್ಲಾದಂಗೆ ವಿರೋಚನ, ಕುಂಭ, ನಿಕುಂಭ ರೆಂಬ ಮೂವರು ಮಕ್ಕಳು. ಅವರೊಳಗೆ ವಿರೋಚನಂಗೆ ಬಲೀಂದ್ರನಾದ. ಆ ಬಲೀಂದ್ರಂಗೆ ಬಾಣಾಸುರ ಮೊದಲಾದ ಶತಕುಮಾರಕರು ಜನಿಸಿದರು. ಬಳಿಕ ಮೂಱನೆಯ ದನುವೆಂಬಾಕೆಗೆ ನಾಲ್ವರು ಕ್ರೂರದಾನವರು ಪುಟ್ಟಿದರು. ನಾಲ್ಕನೆಯ ಕಾರಿಯೆಂಬಾಕೆಗೆ ನಿವಾತ ಕವಚಾಸುರರು ಪುಟ್ಟಿದರು. ಐದನೆಯ ಅನಾಯುವೆಂಬಾ ಕೆಗೆ ವೃತ್ರಾಸುರ ಮೊದಲಾದ ನಾಲ್ವರು ಮಕ್ಕಳು ಪುಟ್ಟಿದರು. ಬಳಿಕಾಱನೆಯ ಸುಹಿತೆ ಎಂಬಾಕೆಗೆ ರಾಮ ಮೊದಲಾದ ನಾಲ್ವರು ಮಕ್ಕಳು ಪುಟ್ಟಿದರು. ಏಳನೆಯ ಮುನಿ ಎಂಬಾಕೆಗೆ ನಕ್ಷತ್ರಂಗಳು ಕೆಲವಾ ಗಾಂಧರ್ವರುಗಳು ಪುಟ್ಟಿದರು. ಎಂಟನೆಯ ಪ್ರವಾಹಿ ಎಂಬಾಕೆಗೆ ಚಿಂತಾಮಣಿ ಪರುಷದಕಣಿ ಸಕಲಲೋಹಂಗಳು ಏಳು ಹೆಣ್ಣು ಮಕ್ಕಳು ಹತ್ತು ಗಂಡು ಮಕ್ಕಳು ಪುಟ್ಟಿದರು. ಬಳಿಕ ಒಂಭತ್ತನೆಯ ಅರಿಷ್ಟೆಗೆ ಪತ್ತು ಅಪ್ಸರ ಸ್ತ್ರೀಯರು, ತುಂಬುರ ಮೊದಲಾದ ನಾಲ್ವರು ಗಂಡುಮಕ್ಕಳು ಪುಟ್ಟಿ

1. ರ (ಗ)

ದರು. ಬಳಿಕ ಹತ್ತನೆಯ ವಿನತೆಗೆ ಗರುಡ, ಅರುಣ, ವಜ್ರ, ಸಿಡಿಲು, ವರುಣಾದಿ ಜಲದೇವತೆಗಳು ಪುಟ್ಟಿದರವರಲ್ಲಿ, ಸಿಡಿಲು ಗರುಡನೊಡಹುಟ್ಟಿದರಿಂದೆ ಸರ್ಪಗೆ ವೈರಿಯಾಯಿತ್ತು. ಜಲದೇವತೆಗಳೊಡಹುಟ್ಟಿದಕಾರಣದಿಂ, ಮಳೆಗಳಾಗುವಲ್ಲಿ ಬಂದು ಗರ್ಜಿಸಿ ವ್ಯವಹರಿಸುತ್ತಿರ್ಕುಂ. ಬಳಿಕ ಹನ್ನೊಂದನೆಯ ಕಪಿಲೆಯೆಂಬಾಕೆಗೆ ಅಮೃತಮುಂ ಗೋವುಗಳುಂ, ಬ್ರಾಹ್ಮಣರುಂ, ಪುಟ್ಟಿದರು. ಬಳಿಕ ಹನ್ನೆರಡನೆಯ ಕದ್ರುವಿಗೆ, ಅನಂತ, ತಕ್ಷಕ, ವಾಸುಕಿ ಮೊದಲಾದ ಸಾವಿರ ನಾಗರ್ಕಗಳು ಪುಟ್ಟಿದರು. ಬಳಿಕ ಹದಿಮೂಱನೆಯ ಕ್ರೋಧೆಗೆ ಸಮಸ್ತ ಸರ್ಪಂಗಳುಂ ಲೋಕಬಾಧಕರಾದ ಕೆಲಂಬರು ಕ್ರೂರಾತ್ಮರುಂ ದ್ವಾದಶಪುತ್ರಿಯರುಂ, ಅವರೊಳಗೆ ಭದ್ರಮುದ್ರೆಯೆಂಬಾಕೆಗೆ ಐರಾವತ ಜನಿಸಿತು. ಸಿತೆ ಎಂಬವ1ಳಲ್ಲಿ1 ಉಳಿದ ದಿಗ್ಗಜಂಗಳು ಜನಿಸಿದವು. ಮಾತಂಗಿಯಲ್ಲಿ, ಮಿಕ್ಕ ಗಜಂಗಳುದಿಸಿದವು. ಗಾಂಧರ್ವೆಯಲ್ಲಿ ಕುದುರೆಗಳುದಿಸಿದವು. ಸಾರ್ದೂಲೆಯಲ್ಲಿ ಸಿಂಹಂಗಳುದಿಸಿದವು. ಹರಿಯೆಂಬಾಕೆಗೆ ವಾನರಂಗಳು, ಮೃಗೆಯಲ್ಲಿ ಉಳಿದ ಮೃಗಂಗಳು. ಮೃಗಮದೆಯಲ್ಲಿ ಕರಡಿಗಳು ಚಮರೀಮೃಗಂಗಳುಂಟಾದವು. ಸುರಸೆಯಲ್ಲಿ ಸರ್ಪಜಾತಿಗಳು, ನಲೆಯೆಂಬಾಕೆಗೆ ಪುಷ್ಪವಿಲ್ಲದೆ ಫಲವಾಗುವ ಅಶ್ವತ್ಥಾದಿ ವೃಕ್ಷಂಗಳು, ಕುಹಿಯೆಂಬಾಕೆಗೆ ಪುಷ್ಪಫಲಂಗಳನುಳ್ಳ ಮರಂಗಳುದಿಸಿದವು. 2ವಿಂದೆ2 ಎಂಬಾಕೆಗೆ ಲತೆ, ತೃಣ, ನಾನಾಗುಲ್ಮ ತೃಣಾದಿಗಳುದಯವಾದವು. ಇಂತಿವೆಲ್ಲವು ಮರೀಚಿಯ ಸಂತಾನವು. ಬಳಿಕ ಭೃಗುವಿಗೆ, ಕವಿ ಎಂಬ ಮಗನಾದನು. ಆತನಿಗೆ ಶುಕ್ರನುದ್ಭವಿಸಿ ದೈತ್ಯರಿಗೆ ಗುರುವಾಗಿರ್ಪನು. ಬಳಿಕ ಆಂಗೀರಸಗೆ ಬೃಹಸ್ಪತಿ ಜನಿಸಿ ಸುರರಿಗೆ ಗುರುವಾಗಿರ್ಪನು. ಬಳಿಕ ಪುಲಸ್ತ್ಯನಿಗೆ ವಿಶ್ವಾವಸು ಪುಟ್ಟಿದನು. ಆತಂಗೆ ಕುಬೇರನು ಕಿನ್ನರರು ಜನಿಸಿದರು. ಪುಲಸ್ತ್ಯಸುತನಾದ ವಿಶ್ವಾವಸುವಿಂಗೆ ರಾಕ್ಷಸ ಪುತ್ರಿಯರಾದ ಕೈಕಸೆ, ಪುಷ್ಪೋತ್ಕಟೆ ಎಂದೆಂಬೀರ್ವರು. ಅವರಿಗೆ ಕೈಕಸೆಯೆಂಬಾಕೆಗೆ ರಾವಣ, ಕುಂಭಕರ್ಣ, ವಿಭೀಷಣರೆಂಬ ಮೂವರು ಮಕ್ಕಳುಂ, ಪುಷ್ಪೋತ್ಕಟೆಯೆಂಬಾಕೆಗೆ ಖರದೂಷಣ, ತ್ರಿಶಿರ, ಶೂರ್ಪಣಖಿಯೆಂಬ ಮೂವರು ಮಕ್ಕಳುಂ, ಬಳಿಕ ಪುಲಹಂಗೆ ಕಿಂಪುರುಷಜಾತಿಯುಂ ವ್ಯಾಘ್ರಾದಿ ಮೃಗಗಳುಂ ಜನಿಸಿದವು. ಬಳಿಕ ಕತ್ರುವಿಂಗೆ ಸೂರ್ಯಾಗ್ನಿ ತೇಜಸ್ಸನ್ನುಳ್ಳ ಕೆಲವು ಋಷಿಗಳುದಯಿಸಿದರು. ಬಳಿಕಾ ದಕ್ಷಬ್ರಹ್ಮಂಗೆ ಐವತ್ತು ಪುತ್ರಿಯರುದಯಿಸಿದರು. ಅವರೊಳಗೆ ಕೀರ್ತಿ, ಲಕ್ಷ್ಮಿ, ಧೃತಿ, ಮೇಧೆ, ಪುಷ್ಟಿ, ಶ್ರದ್ಧೆ, ಕ್ರಿಯೆ, ಬುದ್ಧಿ, ಲಜ್ಜೆ, ಮತಿ ಎಂಬ ಹತ್ತು ಮಕ್ಕಳನೆ ಬ್ರಹ್ಮನ ಕಲ್ಪಜನಿತರಾ ಧರ್ಮದೇವತೆಗಳಿಗೆ ಕೊಟ್ಟನು. 3ಅದಿತಿ ಮೊದಲಾದ ಪದಿಮೂಱು ಮಕ್ಕಳನೆ ಮೊದಲು ಹೇಳಿದ ಕಶ್ಯಪ ಬ್ರಹ್ಮನಿಗೆ ಕೊಟ್ಟನು. ಅಶ್ವಿನಿ ಮೊದಲಾದ, ರೇವತಿ ಕಡೆಯಾದ ಇಪ್ಪತ್ತೇಳು ಮಕ್ಕಳನೆ ಚಂದ್ರನಿಗೆ ಕೊಟ್ಟನು. ಬಳಿಕಾ ಧರ್ಮದೇವತೆಗೆ ಶಮು,

1. ಏಳಿಗೆ (ಗ) 2. ವಿಶೋಧೆ (ಗ) 3. ದಿ (ಗ)

ಕಾಮ, ಹರುಷರೆಂಬ ಮೂಱು ಮಕ್ಕಳು. ಶಮಂಗೆ ಪ್ರೀತಿ, ಕಾಮಂಗೆ ರತಿ, ಹರುಷಂಗೆ ಆನಂದಿನಿಯರೆಂಬ ಸ್ತ್ರೀಯರುಗಳು. ಅವರು ಜಗತ್ತಿನ ಧರ್ಮಂಗಳಿಗೆ ಸಹಾಯಿಗಳಾಗಿರ್ಪರ್. ಬಳಿಕಾ ಅತ್ರಿಗೆ, ದೂರ್ವಾಸ, ದತ್ತಾತ್ರೆಯ, ಚಂದ್ರರೆಂಬ ಮೂವರು ಸುತರು. ಚಂದ್ರಂಗೆ ಬುಧನು ಜನಿಸಿದನು. ಬಳಿಕಾ ವಸಿಷ್ಠಂಗೆ ಶಕ್ತಿ ಪರಾಶರ, ವ್ಯಾಸ, ಶುಕಾದಿ ಋಷಿಸಂತಾನಮುದಿಸಿತ್ತು. ಇದು ನವಬ್ರಹ್ಮರಿಂದಾದ ಜಗತ್ಸೃಷ್ಟಿ ಕ್ರಮವು. ಮತ್ತಾ ಬ್ರಹ್ಮಂಗೆ ಪ್ರಜಾಪತಿ ಪುಟ್ಟಿದಂ. ಆತಂಗೆ ಧರ, ಧ್ರುವ, ಸೋಮ, ಅಪ, ಅನಿಲ, ಅನಲ, ಪ್ರತ್ಯೂಷ, ಪ್ರಭಾಸರೆಂಬಷ್ಟವಸುಗಳು ಜನಿಸಿದರು. ಅವರೊಳಗೆ ಧರಂಗೆ ದ್ರುಹಿಣನೆಂಬ ಮಗನು. ಧ್ರುವಂಗೆ ಕಾಲನೆಂಬ ಮಗನು. ಸೋಮಂಗೆ ಸುವರ್ಚನೆಂಬ ಮಗನು. ಅಪಂಗೆ ಶಾಂತನೆಂಬ ಮಗನು. ಅನಿಲಂಗೆ ಪುರೋಚನನೆಂಬ ಸುತನು. ಅನಲಂಗೆ ಜ್ಯೋತಿ ಎಂಬ ಸುತನು. ಪ್ರತ್ಯೂಷಂಗೆ ದೇವಲಮಹಾಮುನಿ ಎಂಬ ಸುತನು. ಪ್ರಭಾಸಂಗೆ ಬೃಹಸ್ಪತಿಯ ಒಡ ಹುಟ್ಟಿದಳಾದ ಯೋಗಸಿದ್ಧಿಯೆಂಬ ಸತಿಯುತಿಯಲ್ಲಿ ವಿಶ್ವಕರ್ಮಜನಿಸಿ ದೇವತೆಗಳ ಬಡಗಿಯಾದನು. ಮತ್ತಾ ವಿಶ್ವಕರ್ಮನ ಸುತೆ ವಡಬೆಯಲ್ಲಿ ಸೂರ್ಯ, ಸೂರ್ಯಂಗೆ ಅಶ್ವಿನೀದೇವತೆಗಳು ಹುಟ್ಟಿದರು. ಬಳಿಕಾ ಅಶ್ವಿನೀದೇವತೆಗಳಿಂದ ಗುಹ್ಯಕರೆಂಬ ದೇವ ಜಾತಿಯುಂ ಸಕಲ ಔಷಧಗಳೆಲ್ಲಾ ಜನಿಸಿದವು. ಬಳಿಕಾ ಬ್ರಹ್ಮಂಗೆ ಧಾತ ವೆಂದು ವಿಧಾತೃವೆಂದು ಈರ್ವರು ಮಕ್ಕಳು. ಅವರು ಈ ಲೋಕದ ಪುಣ್ಯಪಾಪಂಗಳಲ್ಲಿ ನಡೆಸುತ್ತಿರ್ಪರು. ಅವರಿಗೆ ಲಕ್ಷ್ಮೀ, ಜ್ಯೇಷ್ಠೆ ಎಂದು ಈರ್ವರು ಒಡಹುಟ್ಟಿದರು. ಅವರೊಳಗೆ ಲಕ್ಷ್ಮಿಗೆ ಜಾತ್ಯಶ್ವಂಗಳುದಿಸಿದುವು. ಜ್ಯೇಷ್ಠಾದೇ।ವಿಗೆ। ಶಶ್ರಾದೇವಿ ಯೆಂಬ ಮಗಳಾದಳು. ಅವಳಿಗೆ ಗೌಡಿ ಪೈಷ್ಟೆ ಮಾಧ್ವಿ ಎಂಬ ತ್ರಿವಿಧಸುರೆ ಪುಟ್ಟಿ ದುದಾ ಸುರೆಯಿಂದ ಅಧರ್ಮ ಜನಿಸಿದನು. ಆತಂಗೆ ಭಯನೆಂದು ಮಹಾಭಯ ನೆಂದು ಅಂತಕನೆಂದು ಈ ಮೂವರು ಸುತರು, ಮತ್ತೆ ಕೆಲಂಬು ಹೆಣ್ಣುಮಕ್ಕಳು ಪುಟ್ಟಿದರು. ಅವರಿಂದಲೆ ಕ್ರೌಂಚ ವಾಯಸ ಹದ್ದು ಗಿಡುಗ ಹಂಸೆ ಗಿಳಿ ಕೋಗಿಲೆ ಚಕ್ರವಾಕ 2ಕೇಕಿ2 ಬಕಾದಿ ನಾನಾ ಪಕ್ಷಿಜಾತಿ ಪುಟ್ಟಿತೆಂದು ತಿಳಿವುದು. ಹಿಂದೆ ಹೇಳಿದ ದೇವದಾನವ ಮಾನವಾದಿ ಸಚರಾಚರವು ಎಂಭತ್ತುನಾಲ್ಕುಲಕ್ಷ ಜೀವರಾಶಿ ಗಳು ಶಿವನ ರಜೋಗುಣದಿಂದ ಹುಟ್ಟಿದ ಬ್ರಹ್ಮನು ನವಬ್ರಹ್ಮರಿಂದ ಅನಂತ ಸೃಷ್ಟಿ ಯಾಯಿತ್ತೆಂದು ಇದುಕಾರಣ ಅನೇಕ ಲೋಕಜನಕ ಬ್ರಹ್ಮನು, ಎಂದು ಶ್ರೀಗುರು ನಂದೀಶ್ವರನು ಸನತ್ಕುಮಾರನಿಗೆ ನಿರೂಪಿಸಿ3ದುದು3

## "ಹರಿಮುಖ್ಯ ಅಮರಾಳಿಸೇವಿತಂ" ಎಂಬುದಕ್ಕೆ ಕಥೆ

ಶಿವನ ಸಭಾಶೃಂಗಾರವೆಂತೆಂದು ಬೃಹದ್ರಥಂ ಕೇಳಲು ವಸಿಷ್ಠ ಪೇಳಿದನು: ಶಿವನ ಕೈಲಾಸದ ಎಂಟುದಿಕ್ಕಿನಲ್ಲಿ ಅಷ್ಟಭೈರವರು ತಮ್ಮತಮ್ಮ ಆಯುಧಶಕ್ತಿ ಋ

1. ವಿ ಯೆಂಬವಳಿಗೆ (ಗ) 2. ಕೀರ (ಕ) 3 ದರು (ಗ)

ನನುಮತರಾಗಿ ಅನಂತಕೋಟಿ ಭೈರವರಿಂ ಕಾದಿರ್ಪರು. ಮತ್ತಂ ಇಂತು ತಮ್ಮ ನೆನಹುಮಾತ್ರದಿಂ ಸಕಲವಿಘ್ನಂಗಳಂ ನಿವಾರಿಸುವ ಅಷ್ಟಭೈರವರ ಕಾವಲಂ ಕಳೆದೊಳಪೊಕ್ಕು ನೋಡೆ, ಕಣ್ಗೆ ಮಂಗಳವಾಗಿ ಮನಕ್ಕೆ ಮನೋಹರಮೆನಿಸಿ ನುಡಿಗೆ ನವೀನವಾಗಿ ಮಯಮಾಂಡವ್ಯ ವಿಶ್ವಕರ್ಮಾದಿ ಶಿಲ್ಪಿಗಳ ಕಲ್ಪನೆಗಳಂ ಕೀಳ್ಪಡಿಸಿ ಮಂಜುಳಮಯರಂಜನೆವೆತ್ತು ತರತರಂಗೊಂಡು ಮೆಱೆದ ಚಿಂತಾಮಣಿಗೆಲಸದ ಕರುವಾಡಕೊಟ್ಯನುಕೋಟಿಗಳಳವಟ್ಟು ಸುವರ್ಣಕಲಶಂಗಳಿಂದೆಸೆವಸಂಖ್ಯಾತ ಮಹಾಗಣಂಗಳ ಮಂದಿರಂಗಳಿಂ ಸಾಲ್ಗೊಂಡೊಪ್ಪುವ ಸೋಮ ಸೂರ್ಯವೀಥಿ ಸಹಸ್ರಂಗಳಿಂದಪರಿಮಿತವಾದ ವೀಥಿಗಳಿಂ, ಕಸ್ತೂರಿಯ ಸಾರಣೆಗಳಿಂ, ಮುತ್ತಿನರಂಗವಲ್ಲಿಗಳಿಂ, ತಳಿರತೋರಣ ಮಕರತೋರಣ ಮುಕುರತೋರಣ ಗುಡಿತೋರಣಾದಿ ರಚನೆಗಳಿಂ, ವೃಷಭ ಧ್ವಜಪತಾಕೆಗಳಿಂ ಕುಸುಮವೃಷ್ಟಿಗಳಿಂ, ತಳಿಗೆತೋರಣ ಧೂಪಧೂಮಂಗಳಿಂ, ವೇದಾಗಮಶಾಸ್ತ್ರಘೋಷಂಗಳಿಂ, ನಾನಾವಾದ್ಯ ಧ್ವನಿಗಳಿಂ, ಸಂಚರಿಪ ಸಕಲ ಗಣೇಶ್ವರರ ಸಂದಣಿಗಳಿಂ ಶೃಂಗಾರಲಾವಣ್ಯ ಸುಕುಮಾರತೆಗಳ ಶರೀರಂ ಬಿಡದೆಡೆಯಾಡುತ್ತಿರ್ದ ರುದ್ರಗಣಿಕೆಯರಿಂ, ಸಕಲಭೋಗಪರಿಕರಂಗಳಿಂ ಸಂಪನ್ನಮಾಗಿರ್ಪುದರಿಂ ಅತ್ಯಾಶ್ಚರ್ಯ ಅತ್ಯದ್ಭುತ ಅತಿಕೌತುಕ ಅತಿವಿಚಿತ್ರ ಅತಿಶೋಭನ ಅತಿರಮ್ಯದತಿನೂತನ ಅತಿವಿಶಾಲಮಾಗಿರ್ಪುದಾ ಪುರದ ಮಧ್ಯಪ್ರದೇಶದಲ್ಲಿ ಮಹಾದೇವನರಮನೆ ಪಂಚವಿಂಶತಿಕೋಟಿಯೋಜನ ವಿಸ್ತಾರವದಕ್ಕೆ ಚತುರ್ದ್ವಾರಂಗಳದಱಲ್ಲಿ ಪೂರ್ವದಿಕ್ಕಿನ ದ್ವಾರದ ಗೋಪುರವೆ ಋಗ್ವೇದಮಯವಾಗಿ ಲಕ್ಷಯೋಜನ ವಿಶಾಲೋನ್ನತವಾಗಿಧವಳಾಕಾರವಾಗಿರ್ಪುದಾಬಾಗಿಲಂ ನಾಲ್ಕರ್ಬುದ ಕೂಷ್ಮಾಂಡ ಗಣೇಶ್ವರರೊಂದುಗೂಡಿ ವೇತ್ರಹಸ್ತನಾದ ನಂದೀಶ್ವರಂ ಕಾಯ್ದಿರ್ಪಂ ಬಳಿಕ ದಕ್ಷಿಣ ದಿಕ್ಕಿನ ದ್ವಾರದ ಗೋಪುರವೆ ಯಜುರ್ವೇದಮಯವೆನಿಸಿ ಲಕ್ಷಯೋಜನ ವಿಶಾಲೋನ್ನತಮಾಗಿ ನೀಲವರ್ಣವಾಕಾರಮಾಗಿರ್ಪುದಾ ಬಾಗಿಲನಸಂಖ್ಯಾತರೋಮಜಗಣೇಶ್ವರರು ಸಹಿತವಾಗಿ ವೀರೇಶ್ವರಂ ಕಾಯ್ದಿರ್ಪಂ ಬಳಿಕಾ ಪಶ್ಚಿಮದಿಕ್ಕಿನ ದ್ವಾರದ ಗೋಪುರವೆ ಸಾಮವೇದಮಯವಾಗಿ ಲಕ್ಷಯೋಜನವಿಶಾಲೋನ್ನತ[1]ಮಯವಾಗಿ[1] ಶುಭ್ರಾಕಾರಮಾಗಿರ್ಪುದಾ ಬಾಗಿಲನಗಣಿತರುದ್ರಗಣಂಗಳೊಡಗೂಡಿ ನೀಲಲೋಹಿತಕಾಯ್ದಿರ್ಪಂ. ಬಳಿಕಾ ಉತ್ತರದಿಕ್ಕಿನ ದ್ವಾರದ ಗೋಪುರವೆ ಅಥರ್ವಣವೇದಮಯವಾಗಿ ಲಕ್ಷಯೋಜನವಿಶಾಲೋನ್ನತಮಯವಾಗಿ ಕುಂಕುಮವರ್ಣದಾಕಾರಮಾಗಿರ್ಪುದಾ ಬಾಗಿಲನಪರಿಮಿತ ಪ್ರಮಥಗಣಸಮೇತನಾಗಿ ಮಹಾಕಾಳಗಣೇಶ್ವರಂ ಕಾಯ್ದಿರ್ಪಂ. ಬಳಿಕಾ ನಾಲ್ದೆಸೆಯಬಾಗಿಲನೊಳಪೊಕ್ಕು ನೋಡಲು ದಿಟ್ಟಗಚ್ಚರಿದೋಱೆ ವರ್ಣನೆಗಳನುಪಮವಾಗಿ ಸರ್ವೇಶ್ವರನ ಸಭಾಮಂಟಪಂ ಪರಿಶೋಭಿಸುತ್ತಿಹುದದಱ ನಟ್ಟನಡುವೆ ಕೋಟಿ

1. ಮೆನಿಸಿ (ಗ)

ಸೂರ್ಯ ಪ್ರಕಾಶಮಂ ಕೀಳ್ಪಡಿಸುವ ದಿವ್ಯಸಿಂಹಾಸನವು ಒಂದು ಲಕ್ಷಯೋಜನ ವಿಶಾಲೋನ್ನತಮಾಗಿ ರಂಜಿಸುತ್ತಿಹುದು. ಆ ಸಿಂಹಾಸನಾಗ್ರದಲ್ಲಿ ಗುಣತ್ರಯಾತೀತನಾದ ಪ್ರಣವದರ್ಥಮಾದ ಬ್ರಹ್ಮಾದಿ ತ್ರಿಮೂರ್ತಿಗಳಿಂ ಧ್ಯೆಯರ್ಮಾನನಾದ ತನಗೊಂದು ಸ್ವತಂತ್ರಧ್ಯಾನವಿಲ್ಲದ ತ್ರಿಮೂರ್ತಿಗಳ ಮಧ್ಯದಲ್ಲಿ ತೂರ್ಯನಾದ ಘೃತಕಾಠಿಣ್ಯದಂತೆ ಸಚ್ಚಿದಾನಂದಾತ್ಮಕ ಬ್ರಹ್ಮಸಾಕ್ಷಾತ್ಸಾಕಾರವಾದ ಶಿವ ರುದ್ರ ಮಹಾದೇವ ಮಹಾಲಿಂಗ ಮಹಾಭಸ್ಮಾದಿ ಪರ್ಯಾಯಸಂಜ್ಞಿತನಾದ, ಸೃಷ್ಟ್ಯಾದಿ ಪಂಚಕೃತ್ಯವಾದ ಸತ್ಯಕಾಮ ಸತ್ಯಸಂಕಲ್ಪಾದಿ ಕಲ್ಯಾಣಮಣಿ ಸಿಂಧುವಾದ ಸಕಲದೇವತಾಶಿಖರಂಗಳಿಗೆ ಸಮುದ್ರಸ್ಥಾನೀಯನಾದ ಸ್ವಸ್ವರೂಪಾನುಸಂಧಾನಪ್ರಮೋದದಿಂ ನರ್ತನಶೀಲನಾದ, ಸರ್ವಾಂತರ್ಯಾಮಿಯಾದ, ಸರ್ವಕಾರಣನಾದ, ಮಾಯಾ।ವಿಯಾದಿಯಾ1ದ, ಸ್ಮರಣ ಮಾತ್ರದಿಂದಖಿಳಪಾಪಕ್ಷಯಮುಂಮಾಡಿ ಭೋಗಮೋಕ್ಷಪ್ರದನಾದ ಶಾಂಭವ ಶಿವನಾದೊಡೆ ಸ್ಫಟಿಕವರ್ಣಮಯಶರೀರದಿಂ ಚಂದ್ರಾರ್ಧಮಂಡಿತವಾದ ಮಸ್ತಕದಿಂ, ಪ್ರಸನ್ನವದನದಿಂ, ಅನಂತಕೋಟಿಮಣಿದರ್ಪಣದಿಂ, ಲಾವಣ್ಯದಿಂ, ತ್ರಿಣೇತ್ರದಿಂ, ನೀಲಗ್ರೀವದಿಂ, ವರದಾಭಯಕರದ್ವಯದಿಂ, ಉಮಾಸಮೇತವಾದ ವಾಮಾಂಗದಿಂ, ಪೊ2ದದುಟ್ಟ2ವ್ಯಾಘ್ರಚರ್ಮಾಂಬರದಿಂ, ಮೃದುಪಾದಪದ್ಮದಿಂ ಕಟಕಮಕುಟಕೇಯೂರರುಂಡಮಾಲಾದಿ ಸರ್ವಾಭರಣಾನಂದ ಪುಷ್ಪಾದಿಗಳಿಂದಲಂಕೃತನಾಗಿ, ಮಹೇಶ್ವರನೊಪ್ಪುತಿರಲಾ ಸಿಂಹಾಸನದ ಕೆಳಗೆ ಎಡಬಲದಲ್ಲಿ ಕುಳ್ಳಿರ್ದ ಗುಹಗಣಪ ಸ್ಕಂದ ವೀರಭದ್ರರಿಂ ಸೂಳಱಿದಿಕ್ಕೆಲದೊಳಿಕ್ಕುವ ಚಾಮರ ಸೀಗುರಿಕಾಱರಿಂ ಕೊಂಡಾಡುವ ಚಂಡಕೀರ್ತಿಗಳಿಂ, ನುತಿಸುವ ಸಕಲವೇದಶಾಸ್ತ್ರಂಗಳಿಂ, ಪೊಗಳುವ ಮುನಿಜನಂಗಳಿಂ, ಕೈವಾರಿಸುವ ಮನುಮುನಿಗಳಿಂ, ಪೊಱಮಡುವ ಹರಿಯಜೇಂದ್ರಾದಿ ದೇವಶ್ರೇಷ್ಠರಿಂ ಪರಸುವ ಪ್ರಸೂತಿಕೂತಿಖ್ಯಾತಿ ಧೃತಿ ಸಂ3ಭೂಪತಿ ಪ್ರೀತಿ ಕ್ಷಮೆ ಸನ್ನತಿ ಅನಸೂಯೆ ದೇವಮಾತೆಯರುಂಧತಿಯ4ರೆಂಬೇ!ಕಾದಶ ಪತಿವ್ರತೆಯರಿಂ, ಮುದ್ದಿಸುವ ಭ5ಕ್ತಿಕಾಂತೆಯ5ರಿಂ, ಕರೆಕರೆದು ಸಮ್ಮುಖಂಗೈದ ಸಾವಿತ್ರ್ಯಾದಿಮಂತ್ರಶಕ್ತಿಯರಿಂ, ಪರಿಪರಿದು ಪರಿಚರ್ಯಂಗಳಂಮಾಳ್ಪ ಸಿರಿಸರಸ್ವತಿ ಶಚೀದೇವಿಯರಿಂ, ಪಾಡುವ ತುಂಬುರನಾರದಾದಿಗಳಿಂ ನರ್ತಿಸುವ ರಂಭಾದಿದೇವ ಗಣಿಕೆಯರಿಂ, ಪರಿವೇಷ್ಟಿಸಿರ್ದ ರುದ್ರಗಣ ಪ್ರಮಥಗಣ ದೇವಗಣ ಭಕ್ತಮಹಾಗಣಂಗಳಿಂ, ಕಿಕ್ಕಿಱುಗಿರಿದು ಕೋಳಾಹಳಂ ಬೆರಸಿ ಮಿಗೆ ಮಂಗಳತರವಾಗಿರ್ಪುದಲ್ಲಿ, ನಂದೀಶ್ವರ ಭೃಂಗೀಶ್ವರ ಮಹಾಕಾಳ ಕಿರೀಟಿ ಘಂಟಾಕರ್ಣ ಗಜಕರ್ಣ ಮೊದಲಾದ ಸಕಲದೇವತಾಸುರರಿಂದ ನಾಲ್ಕುದಿಕ್ಕಿನವೋಲಗಮೆಸೆಗುಂ. ಇಂತು ಪೇಳ್ದ ಶಿವಲೋಕದ ಸಭಾಮಧ್ಯದಲ್ಲಿ ಸಕಲ ಪ್ರದನಾಗಿ, ಸರ್ವೇಶ್ವರನಾದ 6 ಶಿ6ವನು ಒಪ್ಪುತ್ತಿರ್ದನೆಂದು ಬೃಹದ್ರಥನಿಗೆ ವಸಿಷ್ಠನು ಪೇಳಿದನು.

1. ವಿಯಾ(ಗ, 2. ದ್ದುದುಷ್ಟ (ಕ) 3. ಭೃ [ಗ] 4. ರುಂಧ[ಗ] 5. ಕ್ತಿಯ[ಗ] 6. ಸಾಂಬಶಿ[ಗ]

## "ಕಾಮಮದಪ್ರಹಾರಿ" ಎಂಬದಕ್ಕೆ ಕಥೆ

ಪಂಪಾಕ್ಷೇತ್ರದ ಹೇಮಕೂಟಪರ್ವತದಲ್ಲಿ ಶಿವನು ಸ್ವಾತ್ಮಾನಂದಲೀಲೆಯಿಂ ತಪಸ್ಸನಾಂತಿರಲು, ದೇವತೆಗಳು ತಾರಕನಭಯಕಂಜಿ, ಶಿವನ ತಪಕೆ ವಿಘ್ನವಂ ಮಾಡೆಂದು ಮನ್ಮಥನ ಕಳುಪಲವನು, ನವನಾರೀಕುಂಜರವೆಂಬಾನೆಯನೇಱಿ¹. ಪಂಚನಾರೀತುರಂಗಸಹ ಕಬ್ಬಿನ ಬಿಲ್ಲಿಗೆ ತಾವರೆಯನೂಲಹೆದೆ ಮಲ್ಲಿಗೆ, ನೈದಿಲು, ಕಮಲ, ಅಶೋಕೆ ತಳಿರು, ಮಾವಿನಪಲ್ಲವೆಂಬೈದು ಬಾಣಗಳಂ ಪಿಡಿದು, ಶಿವನ ಸಮೀಪಕ್ಕೆ ಬಂದು, ಬಿಲ್ಲನೇಱಿಸಿ, ಹದಿನಾಱು ಸಾವಿರವರುಷ ಗುರಿಯ ನೋಡಿ, ಇನ್ನೆನ್ನಪ್ರಾಣಹೋದರೆಯುಬಿಡೆನೆಂದೆಸೆಯಲು, ಆ ಬಾಣಗಳೆಡಗಡೆಗೊಂದು ಬಲಗಡೆಗೆಂದೊಂದು ಹಿಂದೊಂದು ಪಾದದಮುಂದೊಂದು ಬಿದ್ದವು. ಒಂದುಬಾಣ ಪ್ರದಕ್ಷಿಣವ ಬರಲು ಅಷ್ಟರೊಳಗೆ ಶಿವನು ನೊಸಲ್ಗಣ್ಣ ತೆಱೆದು ಕಾಮನ ಸುಡುತಲವನ ಮೆಟ್ಟಿ ನಾಟ್ಯವಾಡಲವ ನುತಿಸಲು ಭಸಿತವನಿಟ್ಟು ನಿಂದನು. ಬಳಿಕ ರತೀದೇವಿ ಶೋಕಿಸುತ್ತಿರಲು ಪಾರ್ವತಿ ಅಂಜಬೇಡ, ನಿನ್ನಗಂಡನ ಪ್ರಾಣದಾನವ ಕೊಡುವೆನು ತಪವ ಮಾಡೆನಲು, ಗಂಡನ ಪ್ರಾಣವ ಪಡೆವೆನೆಂದು ರತೀದೇವಿ ತಪವಮಾಡುವಾಗ, ಶಂಬರನೆಂಬ ರಕ್ಕಸ ಕೊಂಡೊಯ್ಯಲು, ಬಳಿಕ ಮುನಿಗಳು ಲೋಕೋತ್ಪತ್ತ್ಯಂತರಿಸುತದೆ ಮನ್ಮಥನ ಪ್ರಾಣವಕೊಡಿಯೆಂದು ಶಿವನಿಗೆ ಬಿನ್ನೈಸಲು, ಶಿವನು ಕೇಳದಂತೆ ಸುಮ್ಮನಿರಲು, ರತೀದೇವಿಗೆ ಗಿರಿಜೆ ಕೊಟ್ಟಭಯದಿಂದ ಪಾರ್ವತಿಯ ತಪಕ್ಕೆ ಶಿವನು ಮೆಚ್ಚಿ ಬೇಡೆನಲು, ಕಾಮನಿಗೆ ಪ್ರಾಣದಾನವನಿತ್ತು ಎನ್ನ ಮದುವೆಯಾಗೆನಲು, ಗಿರಿಜೆಯ ಬಿನ್ನಹವಂ ಲಾಲಿಸಿ, ಕಾಮನ ಪ್ರಾಣವಕೊಡಲು, ಕಾಮನೆದ್ದಂದಿಂದ ಮನಸಿಜನೆಂಬ ನಾಮವಾಯಿತು. ಶಂಬರಾಸುರನ ಕೊಂದು ರತೀದೇವಿಯಂ ತಂದನು.

## "ಲಿಂಗದಂಘ್ರಿ ಪೂಜಾ ಮಹಾಚಿತ್ತವುನ್ನತ ಗುಣಾಂಬುಧಿ" ಎಂಬುದಕ್ಕೆ ಕಥೆ

ಕಲ್ಯಾಣದಲ್ಲಿ ಬಸ1ವೇಶ್ವರ1ನು ಬಿಜ್ಜಳನು ಚಾರಿಯಹೋಗಿ ಬರುವಾಗ, ಬೇವಿನಪುಷ್ಪದ ಪರಿಮಳವ ಕಂಡು ಅರಸು ನಿಂದು, ಬೇವಿನಕುಸುಮದ ಪರಿಮಳವ ಬಸವೇಶ್ವರ ನಿನ್ನಲಿಂಗಕ್ಕೆ ಅರ್ಪಿಸು ಎನಲು ನಾವು ನಮ್ಮಭಾವಲಿಂಗಕ್ಕೆ ಸಮರ್ಪಿಸಿದೆವು ಎನೆ ಇಲ್ಲವೆಂದು ಕೊಂಡೆಯರು ಸಹವಾಗಿ ಹಾಸ್ಯವಮಾಡಲು, ಉಂಟೆಂದು ಭಂಡಾರಿ ನುಡಿಯಲು, ದೃಷ್ಟವೇನು ಎನಲು, ಎಲ್ಲ ಲಿಂಗದಗುಡಿಯಲ್ಲಿ ಬೇವಿನ ಪುಷ್ಪದ ಪೂಜೆಯ ಬಿಜ್ಜಳಂಗೆ ತೋಱಿಮೆಱೆದರು. ಶರಣರಚಿತ್ತವು ಲಿಂಗದಲ್ಲಿ 2ಲೀನ2ವಾಗಿ ಭಕ್ತರು ನೆನದಂತೆ ಶಿವನು ಪೂಜೆಗೊಂಬನೆಂದು ಪಾಲ್ಕುರಿಕೆ ಸೋಮೇಶ್ವರನು ಸೂಳ ಸಾಮಾತ್ಯನಿಗೆ ನಿರೂಪಿಸಿದರು.

---

1. ವಣ್ಣ (ಗ) 2. ತಲ್ಲೀಯ (ಗ)

## " ಭೈರವದೇವನಂ ಕೀರ್ತಿಸುವವನೆ ಮುಕ್ತಿಮೂಲಿಗಂ " ಎಂಬುದಕ್ಕೆ ಕಥೆ

ರಾಜಶಕ್ಕುರನೆಂಬ ಭಟ್ಟನು, ಮಾಳವದೇಶದಿಂದ ಬಿಜ್ಜಳನ ಸಭೆಗೆ ಬರಲು, ನೇತ್ರ ನಾಸಿಕ ಕರ್ಣ ಕರಚರಣಂಗಳು ಏನುಕಾರಣವಿಲ್ಲವೆಂದು ಕೇಳಲು, ಆ ಭಟ್ಟನು ತನ್ನ ಪೂರ್ವವೃತ್ತಾಂತಮಂ ಪೇಳಿದನು. ಎಲೈ ಬಿಜ್ಜಳರಾಯ, ನನಗೆ ಮಾಳವದೇಶದ ರಾಜ ವೀ1ರಬಲ1 ನೆಂಬುವನು ತನ್ನ ಸಪ್ತಾಂಗರಾಜ್ಯವನಿತ್ತು ನನ್ನ ಪದ್ಯದ ಶೋಭಿತಕ್ಕೆ ಮೆಚ್ಚಿ ತನ್ನ ಪಂಕ್ತಿಯಲ್ಲಿ ಉಣ್ಣು ಎಂದನು. ನಾನುವೊಲ್ಲೆನು ಎಂದೆನಲು, ಸರ್ವರ ಹೊಗಳುವ ಭಟ್ಟನು ನೀನು ಹೊಗಳಿ ಹೊಟ್ಟೆಯ ಹೊರೆವವ, ನೀನೆಂತಧಿಕ2ವಾದೆ ಎಂದು ಕೇಳಲು2 ಶಿವನು ತ್ರಿಪುರವಸಂಹರಿಸುವಲ್ಲಿ ಚಂಡಕೀರ್ತಿಯು ಹರಿಯ ಜರಸಾಹಸವ ಕಂಡು, ಅವರ ಮಱೆದು ನುತಿಸಲು ಶಿವನು ಕೋಪಿಸಿ ಧರೆಗೆಪೋಗೆಂದು ಕಳುಪಲು ಶರಣರ ಕೀರ್ತಿಸೆಂದು ನೇಮಿಸಿದರು. ನಾವು ಅಗ್ರಜರು ಒಲ್ಲೆವೆನೆ ಮಾಳವ ರಾಜ ಮುನಿದು ಅವಯವವ ಕತ್ತರಿಸಿದನೆನೆಕೇಳ್ದು ಇತ್ತ ಬಿಜ್ಜಳನೆಂದನು. ಬಸವಣ್ಣ ನಿಮ್ಮಭಕ್ತ3ರ ಕೀರ್ತಿಸಿದವರು ಸರ್ವಾಂಗಸುಖಿಗಳಾಗುವರೆಂಬುದು ಸಟೆಯೊ ದಿಟವೊ? ಎನೆ, ಶಿವಗಣಂಗಳ ಹಾಡಿದವರು ನೋಡಿದವ4ರು ಮುಟ್ಟಿದವರು ಮುಕ್ತ4ರೆಂದು ಬಿಜ್ಜಳಗೆ ಪೇಳಲು ಮಱುದಿನ ಬಿಜ್ಜಳಂ ಚಿಂತಿಸೆ ಮಂಚಣ್ಣನು ಅರಸು ನೋಡುವಂತೆ ಆ ಭಟ್ಟನಿಗೆ ಜಂಗಮವೇಷವ ಧರಿಸಿ ಬಸವಣ್ಣನಿಗೆ ತೋಱಸೆನಲು ಹಾಂಗೆಯೆ ಮಾಡಿದರೆ ಸರ್ವಾಂಗದ ಮುಸುಕನಿಟ್ಟು ಕೃತಕದಿಂದ ತೋಱಲು ಬಸವಣ್ಣ ವಂದಿಸಲು, ಭೂಪ ನೋಡೆಂದು ಮಂಚಿ ಹಾಸ್ಯವಂ ಮಾಡಲು ಬಸವಣ್ಣನವಂಗವಯವಮಂ ಕೊಟ್ಟು ನಿಜಭಕ್ತನಂ ಮಾಡಿ ವೇದಪಾಠವನೋದಿಸಲು ಕಂಡು ಸರ್ವಜನರು ಶರಣರ ಕೊಂಡಾಡಿದರು ಮುಕ್ತರೆಂಬುದ ಕಂಡೆವೆಂದು ತನ್ನ ನಿಯೋಗವೆರಸಿ ವಂದಿಸಿದನು ಬಿಜ್ಜಳನು.

## "ಶ್ರೀವರನೇತ್ರ ರಾಜೀವಾಂಕ 5ಪಾದರಾಜೀವ5" ಎಂಬುದಕ್ಕೆ ಕಥೆ

ಆದಿಯಲ್ಲಿ ನಾರಾಯಣನು ಸ್ಥಿತಿಕರ್ತನಾಗುವುದಕ್ಕೆ ಶಿವನ ಕೃಪೆಯಿಂದ ಸಮುದ್ರದ ಸುಳಿಯನೆ ಚಕ್ರವಂ ಮಾಡಿತ್ತು. ಶರಧಿಯ ಶಬ್ದವಂ ಶಂಖವಂ ಮಾಡಿತ್ತು. ಅದಱಿಂದ ವಿಷ್ಣು ರಾಕ್ಷಸರ ಜೈಸುತ್ತಿರಲು ತನ್ನ ಭಕ್ತನಾದ 6ಕ್ಷುಪನಿಗೆ6 ಹಿತವಾಗಿ ದಧೀಚಿ ಋಷಿಯ ಮೇಲೆ ಚಕ್ರವ ಬಿಡಲು ಆ ಋಷಿ ಚಕ್ರವನೊರಸಿಬಿಟ್ಟನು. ಅದಱಿಂದ ಬಲುಹು ಮುಱಿದು ನಾರಾಯಣನು ಚಕ್ರಧರನೆಂಬ ಹೆಸರು ಸಟೆಯಾಯಿತ್ತುಯೆಂದು ರಾಕ್ಷಸರು ದೇವತೆಗಳ ಬಾಧಿಸುವಾಗ ಹರಿಯು ಚಕ್ರವ ಪಡೆಯಬೇಕೆಂದು

---

1. ರಂನೆ (ಕ) 2. ಎನೆ [ಕ] 3. ರಾ (ಗ) 4. ರುಮು (ಗ) 5. ರಾಜೀವಾರಿ (ಗ) 6. ಷಪಂ (ಗ)

ಹಿಮಗಿರಿಯಲ್ಲಿ ತಪವಮಾಡುತ್ತ ಸಹಸ್ರನಾಮದಿಂದ ಸಹಸ್ರಕಮಲವನ[1]ರ್ಪಿ[1]ಸುತ್ತಂ ದಿನಂಪ್ರತಿಯಿಂದ ಪೂಜಿಸುತ್ತಿರಲು, ಶಿವನು ಇವನ ನಿಷ್ಠೆಯ ನೋಡಬೇಕೆಂದು ನಿಯಮವಂ ತಪ್ಪಿಸಿ, ಒಂದು ಕಮಲವಂ ಬಯಲುಮಾಡಲು, ಇದೇ ಕಮಲವೆಂದು ನಯನವ ಪಾದಕ್ಕರ್ಪಿಸಲು ಶಿವನು ಮೆಚ್ಚಿ, ಹತ್ತುಸಾವಿರ ಸೂರ್ಯಕಾಂತಿಯ ನುಳ್ಳ, ಜಲಂಧರನ ಕೊಲ್ಲುವುದಕ್ಕೆ ನಿರ್ಮಿತದ ಸುದರ್ಶನ ಚಕ್ರವನು ಕೊಟ್ಟು, ರಾಕ್ಷಸರ ಜೈಸೆಂದು ಮತ್ತೆ ನಯನವ ಕೊಟ್ಟು ಇಂದುಮೊದಲಾ ಚಕ್ರಧರನೆಂಬ ಹೆಸರು, ಕಮಲಾಕ್ಷನೆಂಬ ಹೆಸರು ನಿನಗೆ ಕುಂದದೆ ಇರಲಿ ಎಂದು ಶಿವನು ನಿರೂಪಿಸಿದನು.

## "ಶೃತಿಗೆ ವಾದೀಶರೊಳು ಶೃತಿಗೆಯರಸಕೊಲ್ದು ಶೃತಿಯೊಳೆಲಂ ಕೃತಗೆಯ್ದು" ಎಂಬುದಕ್ಕೆ ಕಥೆ

ಶಿವನ ಈಶಾನ್ಯಮುಖದಿಂದ ಸಾಮವೇದವು ಪುಟ್ಟಿತ್ತು. ಅದಱಿಂದ ಮುನ್ನೂಱಿಪ್ಪತ್ತೆರಡು ರಾಗ ಅಱುವತ್ತು ಗೀತವು ಪ್ರಬಂಧ ನೂಱೊಂದು ತಾಳಮೊದಲಾದ ಸಂಗೀತ ರಾಗಂಗಳುದಯಿಸಲು, ಎಂಟು ಪುರುಷ ರಾಗ, ಇಪ್ಪತ್ತನಾಲ್ಕು ಸ್ತ್ರೀ ರಾಗಂಗಳು, ಅವಱಲ್ಲಿ ಎಂಟು ಪುರುಷರಾಗಂಗಳು ನಂದೀಶ್ವರಾದಿ ಪ್ರಮಥಗಣಂಗಳು ಪಾಡುವರು. ಧನ್ಯಾಸಿ ಭೂಪಾಳಿ ಮಂಗಳ ಕಾಸಿ ಮಲಹರಿ ಲಲಿತೆ ಈ ಇಪ್ಪತ್ತೆಂಟುರಾಗವ ದೇವತೆಗಳು ಪಾಡುವರು. ದೇಶಾಕ್ಷಿ ನಾರಾಯಣಿ ವಸಂತ ಮಾಳವ ಶ್ರೀ ದೇವಗಾಂಧಾರಿ ಈ ಇಪ್ಪತ್ತೆಂಟುರಾಗವನು ಹಾಹಾ ಹೂಹೂ ಎಂಬ ಹನ್ನೆರಡುಲಕ್ಷ ಗಂಧರ್ವರು ಪಾಡುವರು. ಗುಂಡಕ್ರಿಯು ಮಾಧವಿ ಗುರ್ಜರಿ ರಾಮಕ್ರಿಯ ಸೌರಾಷ್ಟ್ರ ಈ ಇಪ್ಪತ್ತೆಂಟು ರಾಗವನು ಋಷಿಗಳು ಪಾಡುವರು. ವರಾಳಿ ಆಹರಿ ಫಳ ಮಂಜರಿ ದೇವಗುಪ್ತಿ ಕುರಂಜಿ ಈ ಇಪ್ಪತ್ತೆಂಟು ರಾಗವನ್ನು ಯಕ್ಷರುಗಳು ಪಾಡುವರು. ನಾಟಿ ಸಾಳಂಗ ಬಹುಳಿ ಬಂಗಾಳಿ ಈ ನಾಲ್ಕುರಾಗವಾದಿಯಾದ ಮೂವತ್ತೆರಡು ರಾಗವನು ನಂದೀಶ್ವರಾದಿಯಾದ ಪ್ರಮಥರು ಪಾಡುವರು. ವಸಂತರಾಗವೂ ಅಱಿಸುವಾಗ ಅದನ್ನು ವಸಂತಪೂಜೆಯ ಶಿವನಿಗೆ ಮಾಡಿದಲ್ಲದೆ ಆ ರಾಗವ ಏಳುಮಾಡಬಾರದೆಂದಱಿದು ವಸಂತಪೂಜೆಯ ಮಾಡಿ ವಸಂತರಾಗವನು ಮುನಿ ಯಕ್ಷ ರಾಕ್ಷಸರು ಗರುಡ ಗಂಧರ್ವರು ಪ್ರಮಥಗಣಂಗಳು ಪಾಡುತ್ತಿಹರು. ಇಂತೀರಾಗಂಗಳು ಆ ಉಮಾಕ್ಷರಮಿಶ್ರದಿಂದ ಓಂಕಾರನಾದ ಘೋಷದಿಂದ

1. ರ್ಚಿ (ಗ)

ಕಂಠ ಶಿರಸ್ಸು ನಾಸಿಕ ಹೃದಯ ಮುಖ ತಾಲುಗೆ ಪೂರ್ವಾಂಗವೆಂಬವಱಲ್ಲಿ ಷಟ್ಸ್ವರ ಜನನಸ್ಥಾನಂಗಳಂ ತಿಳಿದು ಮಯೂರಧ್ವನಿ ವೃಷಭಧ್ವನಿ ಸಿಂಹಧ್ವನಿ ಕೋಕಿಲ ಧ್ವನಿ ಅಜಧ್ವನಿ ಅಶ್ವಧ್ವನಿ ಮದಗಜಧ್ವನಿ, ಇಂತೀ ಸಪ್ತಸ್ವರದಿಂದ ಇಪ್ಪತ್ತೆರಡು ಶ್ರುತಿಗಳಾದವೆಂದಱಿದು ತುಂಬುರರು ನಾರದರು ಋಷಿಗಳು ದೇವತೆಗಳು ಯಕ್ಷರು ಗಂಧರ್ವರು ಪ್ರಮಥಗಣಂಗಳಾದಿಯಾದ ನರರು ಸುರನಾಗರ್ಕಳಾದಿ ಯಾಗಿ ಪಾಡುತ್ತಿರಲು, ಹಾಹಾ ಹೂಹೂ ಎಂಬ ಗಂಧರ್ವರ ರಾಗವಂ, ತಂದನ ತಾನಾ, ಎಂಬವರು ಕಲಿತು ರಾಗದಲ್ಲಿ ನಾನು ಹೆಚ್ಚೆಂದು ವಾದವಂ ಮಾಡಿಕೊಂಡು, ಹನುಮಂತನ ಬಳಿಗೆ ಬರಲು ಕಲ್ಲುಗುಂಡ ಕರಗಿಸಿ, ತಾಳವಂ ಮಡಗಿ ತೆಗೆದುಕೊಳ್ಳಿ ಎನಲು, ಇಬ್ಬರು ಗುಂಡ ಕರಗಿಸಿ, ತಾಳವ ಮಡಗಿ ತಾಳವಂ ತೆಗೆದುಕೊಂಡರು. ಅವ ರಿಬ್ಬರು ಸಮವೆಂದು ವಾದವಂ ಬಿಡಿಸಿ, ಹನುಮಂತನು ಅವರಿಗೆ ಮೆಚ್ಚಿ ಮೊದಲು ರಾಗವಂ ಪಾಡುವಾಗ ನಿಮ್ಮ ಹೆಸರ ನೆನೆದು ತಂತನದನತಾನಾ, ತಂದನಾನಾ, ತಾನಾ ನಾ ಎಂದು ರಾಗವಂ ಪಾಡಿ, ಎಂದು ವರವನಿತ್ತು ಶಿವನಂ ಪಾಡಿಯೆಂದು ಪೇಳಲು, ಪಾಡುತ್ತಿರಲು ಮಿಂಚುಮೆಚ್ಚಿ ಆ ಹನುಮಂತನಿತ್ತ ವರವೆ ಇರಲಿಯೆಂದು ವರವನಿ ತ್ತನು. ರಾಗಕ್ಕೆ ಶಿವನೆ ಆದಿಯಾದ ಕಾರಣದಿಂದ ಅನಾಹತಸ್ವರವಿಡಿದು ಆಆಆ ಎಂದು ಪಾಡುತ್ತಿಹರು. ಬಳಿಕ ತಂದನಾನ ತಾನಾನ ಎಂದು ರಾಗಕ್ಕೆ ಮೊದಲಾಯಿತ್ತು. ಇತ್ತ ಹನುಮಂತನು, ವೀರಭದ್ರೇಶ್ವರನಿಂದುಪದೇಶವಂ ಪಡೆದು, ಶಿವನಂ ಪೂಜಿಸಿ, ಪಾಡುತ್ತಿರಲು, ಶಿವನು ಹನುಮಂತನ ರಾಗಕ್ಕೆ ಮೆಚ್ಚಿ ನಂದಿಯನೇಱಿ ನಮಗೆ ರಾಗವಂ ಕೇಳಿಸುಬಾರೆಂದು ಕರೆಯಲು, ಸದ್ಧರ್ಮಗುರು ನಂದೀಶ್ವರನ ಮೇಲೆ ನಾನು ಏಱಲೊಲ್ಲೆನೆನಲು, ಶಿವನಂ ಹನುಮಂತನು ತನ್ನ ಭುಜದಮೇಲೆ ಮೂರ್ತಮಾಡಿಸಿ ಕೊಂಡು ರಾಗವಂ ಮಾಡಲು ಆಡುವರ ಕಾಲು ಹಾಡುವರ ಮುಖವಂ ನೋಡಬೇ ಕೆಂದು ನಮ್ಮಿತ್ತ ಮುಖವಾಗಿ ಪಾಡು ಎನೆ, ಪಾಡುತ್ತಿರ್ದ ಹನುಮಂತನು ಲಿಂಗ ಪೂಜೆಗೆ ಹೋದೆಪೆನೆನಲು ಶಿವನು ಬೇಡ ನಮಗಿದೇ ಶಿವಪೂಜೆ ಎನಲು, ತ್ರಿಕಾಲ ಶಿವ[1] ಪೂಜೆಯಂ ಮಾಡೆಂದ ಗುರುವಿನಾಜ್ಞೆಯಂ ಮೀಱಲಾಗದೆಂದು ಪೋಗಲು ಶಕ್ತಿಪೀಠದಿಂದೆ ಗೋಳಕ ಬಯಲಾಗಲು ಹನುಮಂತನು ತನ್ನ ಶ್ರೀಗುರು ವೀರಭದ್ರೇ ಶ್ವರನ ನೆನೆಯಲು ಬಂದುರಿಗಣ್ಣ ತೆಱೆದಱಿಸುತ್ತಿರಲು ತೃಣಾದಿ ಬ್ರಹ್ಮಾಂತ್ಯಮಾದ ಲೋಕಾಧಿಲೋಕವೆಲ್ಲ ದಗ್ಧವಾಗಲು, ಶಿವನು ಬಂದು ಸಂತೈಸಿ ಲೋಕವರಕ್ಷಿಸಿ ಒಬ್ಬಶರಣನಿಗೆ ಲೋಕವೆಲ್ಲಂ ಸಂಹರಿಸುವರೆಯೆನೆ ಅನಂತಕೋಟಿ ಬ್ರಹ್ಮಾಂಡಗಳು ಒಬ್ಬ ಶರಣನ ಒಂದು ರೋಮಕ್ಕೆ ಸರಿಯಲ್ಲವೆಂದು ನುಡಿದ ವೀರಭದ್ರನ ಭಕ್ತಿಗೆ ಮೆಚ್ಚಿ ಲಿಂಗವಂ ಪೀಠಕೆ ಬರಿಸಿ ಗೋಳಕವಂ ಬಲಿದು ಲಿಂಗಪೂಜೆಯಂ ಮಾಡೆಂದು ಶಿವನು ವೀರಭದ್ರೇಶ್ವರನು ಪೇಳಲು ಹನುಮಂತನು ಸಮುದ್ರಮಧ್ಯದಲ್ಲಿ ಮೂರ್ತಂ

1. ಲಿಂಗ (ಗ)

ಗೈದು ಲಿಂಗವಂ ಪೂಜಿಸಿ ಇಪ್ಪತ್ತೈದು ಪದ್ಯದಿಂದೆ ಪಾಡಲು, ರಾಗದ ಸವಿಗೆ ಮೆಚ್ಚಿ ಶಿವನ ತನುವೊಲೆಯಲು ಮಹಾಶೇಷನ ಶಿರಬಾಗಲು ಈ ವಾರ್ತೆಯಂ ತಕ್ಷಕರಾಜನ ಪುತ್ರರಾದ ಅಶ್ವತರ ಕಂಬಳರೆಂಬೀರ್ವರು ಕೇಳಿ, ಉಗ್ರತಪಸ್ಸಿನಲ್ಲಿರುತ ಶಿವನ ಕೀರ್ತಿಸಿ ರಾಗವಂ ಮಾಡುತ್ತಿರಲು, ಶಿವಂ ಮೆಚ್ಚಿ ಬೇಡಿ, ಬೇಡೀವೆನೆನಲು ನಮ್ಮ ರಾಗವನೆ ನಿಮ್ಮ ಕರ್ಣಕುಹರದೊಳು ಸದಾಕಾಲದಲ್ಲಿಯು ಧರಿಸು ನಮ್ಮ ತನುವನೆ ನಿಮ್ಮ ಕರ್ಣಮೂಲದಲ್ಲಿ ಆಭರಣವಾಗಿ ಧರಿಸಿ ಎನಲು, ಶಿವನು ಅಶ್ವತರ ಕಂಬಳರಂ ಕರ್ಣ ಕುಂಡಲವಾಗಿ ಧರಿಸಿದನು.

## "ಅಭ್ರಜೀವನ ಜೂಟ" ಎಂಬುದಕ್ಕೆ ಕಥೆ

ಆದಿಯಲ್ಲಿ ಪರಶಿವನ ವಾಮದೇವಮುಖದಿಂದ ಜಲವು ಜನಿತವಾಗಿ ಪಿಂಡ ಬ್ರಹ್ಮಾಂಡಗಳುತ್ಪತ್ತ್ಯಕ್ಕೆ ಕಾರಣವಾಗಿರುತ್ತುಂ, ಮತ್ತನೇಕಕೋಟಿ ಬ್ರಹ್ಮಾಂಡಗಳಲ್ಲಿ ತೀರ್ಥ ನದಿ ಸಮುದ್ರಂಗಳಾಗಿ ಮತ್ತೆಯು ಕುಕ್ಕುಟಾಂಡ ಮಧ್ಯವಾದ ಭೂಲೋಕ ದಲ್ಲಿ ನವಭಾಂಡದೊಳಗೆಯು ಇಪ್ಪತ್ತೆರಡು ನದಿಯು ಅಱುವತ್ತೆಂಟು ತೀರ್ಥಂಗ ಳಾಗಿ ಲವಣಾದಿ ಸಪ್ತಸಮುದ್ರಂಗಳಾಗಿ ಹದಿನಾಲ್ಕು ಭುವನದಲ್ಲಿಯು ಕೂಪ ನದಿ ತಟಾಕ ಶರಧಿಗಳಾಗಿ ತೀರ್ಥಸ್ವರೂಪಿನಿಂದನಂತಾತ್ಮರುಗಳಿಗೆ ಮೋಕ್ಷಕ್ಕೆ ಸಾಧನ ವಾಗಿರುತ್ತುಂ, ಇಂತಿವೆಲ್ಲವಕ್ಕೆ ಆದಿಯಾದುದೇ ವಿರಾಟಮೂರ್ತಿಯ ಪಾದ. ಚೈತನ್ಯ ದಲ್ಲಿ ವಾಯು, ವಾಯುವಿನ ಮೇಲೆ ಅನಂತಕೋಟಿ ವಿಶಾಲವುಳ್ಳ ಸುವರ್ಣ, ಕರ್ಪರ ಅದರೊಱೊಳಗೆ ಭೈರವಣವೆಂಬ ಜಲವು ಅದಱಮೇಲೆ ಕಮಲವಾದಿಶಕ್ತಿ ಕೂರ್ಮ ಗಜ ಫಣೀಂದ್ರನ ಶಿರದಲ್ಲಿರ್ಪ ಬ್ರಹ್ಮಾಂಡಮಧ್ಯದಲೊಪ್ಪುವ ಜಂಬೂದ್ವೀಪದ ರಜ ತಾದ್ರಿಯಲ್ಲಿ ಶಿವನು ಸಕಲೈಶ್ವರ್ಯದಿಂದ ಮೂರ್ತಂಗೆಯ್ದಿರಲು, ದೇವಿಯರು ಸರಸದ ನೆವದಿಂದ ತನ್ನ ಕರದ ಬೆರಳಿಂದ ಶಿವನ ಕಣ್ಗಳಂಮುಚ್ಚಲು ಜಗಕ್ಕೆ ಕತ್ತಲೆಯಾಗಲು ಶಿವನು ನೊಸಲ್ಗಣ್ಣಂ ತೆಱೆಯಲು ದೇವಿಯರ ಕರದಬೆರಳು ಬೆವರಲು ಹತ್ತುಬೆರಳು ಬ್ದಿದುರಲು, ಪ್ರಳಯ ಜಲವಾಗಿ ಹರಿದು ಲೋಕವಂ ಮುಸುಕಲು ಜಲದ ಹೆಚ್ಚು ಕುಂದಿಗೆ ವಿಷ್ಣುಕರ್ತನಾಗಿರ್ಪ ಅಧಿಕಾರವಂ ಮಿಾಱಲು ವಿಷ್ಣು ಕಂಡು ಶಿವಂಗೆ ಬಿನ್ನೈಸಿದನು. ನನ್ನಾಜ್ಞೆಯಂ ಮಿಾಱಿ ಜಲಪ್ರಳಯ ಬಂತೆಂದು ಪೇಳಲು ಅಷ್ಟ ರೊಳಗೆ ಹರಿಯಜೇಂದ್ರ ಮೊದಲಾದ ಲೋಕಾಧಿಲೋಕವೆಲ್ಲ ಜಲಮಯವಾಗಿ ತೇಲಿ ಮುಳುಗುತ್ತಿರಲು, ಶಿವನ ಸದ್ಧರ್ಮವೆ ಮೂರ್ತಿಯಾದ ವೃಷಭೇಂದ್ರಂ ನೋಡಿ ಪ್ರಳ ಯವಾದ ಪ್ರಾಣಿಗಳಂ ರಕ್ಷಿಸುವ ಕೃಪೆಯಿಂದ ಶೃಂಗವೇ ಆದಿಯಾದ ಕೆಱಗೊಳಗವೆ ಅಂತ್ಯವಾದ ಅಂಗದವಯವಂಗಳಲ್ಲಿ ಪಾರ್ವತೀ ಪರಮೇಶ್ವರ ಪ್ರಮಥರು ಮುಖ್ಯ ವಾದ ಹರಿಯಜೇಂದ್ರಾದಿ ಸಚರಾಚರಾದಿಗಳನೆಲ್ಲವನು ತನ್ನ ಬಾಲದಂಡದಲೆತ್ತಿ ರಕ್ಷಿ ಸುವ ಕಾಲದಲ್ಲಿ ಜನ್ಹುಕಋಷಿಯು ಗಿರಿರಾಜನು ಶಿವನ ಮಹಾಜ್ಞಾನಚಿತ್ತ1ವನೆ ತನ್ನ ಸುತೆ1ಯೆಂದು ಕಲ್ಪಿಸಿ ಶಿವಂಗಿತ್ತನು. ಶಿವನ ಪರಮಶಾಂತಿಯನೆ ಎ2ನ್ನಕ2ನ್ನಿಕೆ

1. ನೆನ್ನ ಸತ್ಯೆ (ಕ) 2. ನ್ನಸುತೆಕ (ಗ)

ಯೆಂದು ಕಲ್ಪಿಸಿ, ಶಿವನಿಗೆ ಕೊಡುವೆನೆಂದು ತಪವಿರಲು, ಶಿವನ ಶಾಂತಿ ನಿರ್ಮಳವೆರಡು ಕನ್ನಿಕೆಯಾಗಲು ಜನ್ಹುಕಮುನಿಯ ಸುತೆ ಗಂಗೆಯನು ಇನ್ನು ಲೋಕವ ಪ್ರಳಯವನೆಯ್ದಿಸಬೇಡ ನಿಲ್ಲು ಎಂದು ನಿಲ್ಲಿಸಿ ಮುನ್ನಿನಂತೆ ಲೋಕಂಗಳನುಂಟುಮಾಡಿ ಜನ್ಹುಕಮುನಿಯ ಭಕ್ತಿಗೆಯು ಹರಿಯು ಬಿನ್ನಹದಿಂದಲು ಧರ್ಮಮೂರ್ತಿಯಾದ ವೃಷಭೇಂದ್ರನ ಕೊರಳು ಮೊದಲಾದ ಸ್ಥಾನದಲ್ಲಿ ಅಡಗಿ ಅಱುವತ್ತೆಂಟುಕೋಟಿ ತೀರ್ಥಸ್ವರೂಪಾದ ಜಲಕನ್ನಿಕೆಯನೆ ಮಲ್ಲಿಗೆಯ[1]ರ[1]ಳಂತೆ ಜಟಾಮಕುಟದಲ್ಲಿ ಧರಿಸಿ ಗಂಗಾಧರನಾದ ಶಿವನು.

## "ಶುಭ್ರಾಂಶು ಸಕಲಂಕ ಬಿಭೃತೆ" ಎಂಬುದಕ್ಕೆ ಕಥೆ

ಆದಿಯಲ್ಲಿ ಪರಶಿವನು ಜಗತ್ಸೃಷ್ಟ್ಯರ್ಥವಾಗಿ ಅಷ್ಟತನುಗಳನುಂಟುಮಾಡುವಂದು ಮನಸ್ಸಿನಿಂದ ಚಂದ್ರಪುಟ್ಟಿ ಷೋಡಶಕಲಾಭರಿತನಾಗಿ ರಾತ್ರಿಯಲ್ಲಿ ಪ್ರಕಾಶವಾಗಿರ್ಪ ಕೃತ್ಯವಂ ನಡೆಸುತ್ತಂ ಮೇರುವಂ ಬಳಸಿ ಬರುತಿರಲಾಗಿ, ಇತ್ತ ಆದಿಬ್ರಹ್ಮನ ಪುತ್ರನೆನಿಸುವ ದಕ್ಷಬ್ರಹ್ಮನು ಪಾರ್ವತೀದೇವಿ ತನಗೆ ಪುತ್ರಿಯಾಗಬೇಕೆಂದು ತಪವಂ ಮಾಡಿ ಶಿವನಿಂದೆ ಪಡೆದು ಶರ್ವಾಣಿಯಂ ಶಿವಂಗಿತ್ತು ಇನ್ನುಳಿದ ಸಮಸ್ತ ಪುತ್ರಿಯರ ಮೂವತ್ತುಮೂಱು ಕೋಟಿ ದೇವತೆಗಳಿಗಿತ್ತು ಅವರೆಲ್ಲ ದಕ್ಷಬ್ರಹ್ಮಂಗೆ ಅಳಿಯರಾಗಿರಲು ಅಶ್ವಿನಿಯಾದಿಯಾಗಿ ರೇವತಿ ಅಂತ್ಯವಾದ ಇಪ್ಪತ್ತೇಳು ಪುತ್ರಿಯರಂ ಚಂದ್ರನು ಮದುವೆಯಾಗಿರುತ್ತುಂ ಅವರೊಳಗೆ ರೋಹಿಣಿ ಎಂಬವಳೊರ್ವಳವಳ ಕೂಡೆ ಸ್ನೇಹದಿಂದಿರ್ದು ಉಳಿದ ಸ್ತ್ರೀಯರನುದಾಸೀನವಂ ಮಾಡಲು ಅವರು ತಂದೆಗೆ ಪೇಳಲು ದಕ್ಷಬ್ರಹ್ಮನು ಚಂದ್ರನ ಕ್ಷಯರೋಗಿಯಾಗೆಂದು ಶಪಿಸಲು ಚಂದ್ರನ ಕಳೆ[2]ಗಳರೆಯಾಗ[2]ಲು ಆದಿಬ್ರಹ್ಮಂಗೆ ಪೇಳಲು ಅವನು ನಿನ್ನ ಕಳೆಗಳಂ ಶಿವನು ಕೊಟ್ಟಾನೆನಲು ಆಗ ತಪವಂ ಮಾಡಿ ಶಿವನಂ ಬೇಡಿಕೊಳ್ಳಲು ಹದಿನಾಱು ಕಳೆಯಂ ಕೊಡುವಾಗ ಬ್ರಹ್ಮವಿಷ್ಣ್ವಾದಿಗಳು ಶಿವ[3]ನೊಡನೆ[3] ಬಿನ್ನೈಸಿದರು. ದಕ್ಷನ ಶಾಪವು ಚಂದ್ರಂಗೆ ಶಿವನಿಂದ ನಿವೃತ್ತಿಯಾಯಿತೆಂದು ಕುಱುಹಾಗಿ[4]ಪ್ಪಂತೆ ಹದಿನೈದು [4] ಕಳೆಯ ಚಂದ್ರನಿಗಿತ್ತು ಒಂದು ಕಳೆಯ ನೀವು ಧರಿಸಿಯೆಂದು ಬಿನ್ನೈಸಲು ಧರಿಸಿದಂ. ಆ ದಿನವೇ ಅಮಾವಾಸ್ಯೆಯಾಗಿ ಚಂದ್ರನು ಕಾಣಲಿಲ್ಲ. ಲೋಕವೊಳಗೆ ಹದಿನೈದು ಕಳೆಯಂ ಚಂದ್ರನಿಗಿತ್ತು ರಾತ್ರಿಯಲ್ಲಿ ಪ್ರಕಾಶವಾಗಿರ್ಪ ಕೃತ್ಯವನೆಂದಿನಂತೆ ನಡೆಸಿ, ಎಂದು ಬ್ರಹ್ಮನಿಗೆ ಪೇಳಿ ಶಿವನು ತನ್ನ ಲೀಲೆಯಿಂದ ಚಂದ್ರಜೂಟನೆನಿಸಿದನು.

## "ಧಾತೃಪಂಚಮ ಶಿರಃ ಪಾತ್ರ" ಎಂಬುದಕ್ಕೆ ಕಥೆ

ಆದಿಯಲ್ಲಿ ಬ್ರಹ್ಮನು ಶಿವನ ರಜೋಗುಣದಿಂದ ಪುಟ್ಟಿ ಶಿವಾಜ್ಞೆಯಿಂದ ನವಬ್ರಹ್ಮರ ಪೆತ್ತು ಕುಕ್ಕುಟಾಂಡವನೊಡೆದು ಎಂಬತ್ತುನಾಲ್ಕುಲಕ್ಷ ಸಚರಾಚರ

1. ಸ (ಗ) 2. ರೆಯು (ಗ) 3. ಗೆ (ಗ) 4. ಪ್ಪತೆಂಬ (ಕ)

ವನೆಲ್ಲವಂ ರಚನೆಯುಂ ಮಾಡಿ. ಶಿವನಿಂದ ಕಲ್ಪಿತವಾದಂಡವುಂ ಬ್ರಹ್ಮಾಂಡವೆಂಬ ಪೆಸರಾಗಿರುತ್ತು ನವಕೋಟಿ ಬ್ರಹ್ಮರಿಂದೆ ಪದ್ಮಮುದ್ರೆಯಿಂದ ಒಪ್ಪೈಸಿಕೊಳುತಂ ಅಱುವತ್ತುನಾಲ್ಕು ಶೀಲಗುಣವುಳ್ಳಾತನಾಗಿವೊಪ್ಪುತ್ತು ಸತ್ಯಲೋಕದಲ್ಲಿ ಸಕಲೈಶ್ವರ್ಯದಿಂದಿರುವಲ್ಲಿ ನವಬ್ರಹ್ಮರ್ನೆರೆದು ನೀನೆ ಬ್ರಹ್ಮವೋ ಪರಬ್ರಹ್ಮವುಂಟೋಯೆಂದು ಕೇಳಲು ಅಹಂಬ್ರಹ್ಮವೆಂದುಲಿಯಲು ಸತ್ಯಲೋಕದಲ್ಲಿರ್ದು ಅಸತ್ಯವಂ ನುಡಿಯಲು ಸಾಱೆವೇದಂಗಳು 1 ಬೇಡ ನಿನಗೆ ಕರ್ತೃ ಉಂಟು1 ಎನಲು ಕೇಳದೆ ಮಿಾಱೆ ನುಡಿಯಲು ವೇದದ ಶಿರಸ್ಸಿನ ಓಂಕಾರ ಪ್ರಣವನೇ ಕಾಲಭೈರವ ಮೂರ್ತಿಯಾಗಿ ಎಡದ ಕರದುಗುರಿಂದ ಶಿರವ ಪಱಿದು ಹೋಳುಮಾಡಿ ಒಂದು ಭಾಗವಂ ಸಮುದ್ರದಲ್ಲಿರಿಸಿ, ಒಂದು ಭಾಗವಂ ಪಾತ್ರೆಯಾಗಿ ಪಿಡಿದು ಭಿಕ್ಷಕ್ಕೆ ಇಂದ್ರಾದಿ ದಿಕ್ಪಾಲಕರ ಪಟ್ಟಣದಿಂದ ವೈಕುಂಠಕ್ಕೆ ನಡೆದು ಹರಿಯ ಶಿರದ ರುಧಿರವ ಸುರಿಯಲು ಹರಿಗೆ ಬೆಸನಿತ್ತು ಪಾಂಡವರಿಂ ಕೌರವರ ನುಡುಹಿ ಕರದ ಪಾತ್ರೆಗೆ ಆ ಆಹಾರವಂ ಮಾಡುತ್ತಂ ಶಿವನನುಜ್ಞೆಯಿಂದ ಹರಿಮಾಡಿದನು. ಕರ್ಪುರವುಂಡುದಲ್ಲದೆ ಭಿಕ್ಷುಕನುಣಲಿಲ್ಲವೆಂದು ವೇದಂಗಳು ಕೀರ್ತಿಸಿದವು. ಬ್ರಹ್ಮನ ಶಿರಃಪಾತ್ರೆಯನು ನಿತ್ಯತೃಪ್ತ ಶಿವನು ಲೀಲೆಗೆ ಪಿಡಿದನೆಂದು ಸೂತಮುನಿ ನೈಮಿಷಾರಣ್ಯದ ಸನಕಾದಿಮುನಿಗಳಿಗೆ ಪೇಳಿದನು.

## "ಪನ್ನಗಜನ್ನ ಸೂತ್ರ" ಎಂಬುದಕ್ಕೆ ಕಥೆ

ದಾರುವನಾಶ್ರಯದ ಮುನಿಗಳು ತಪದಗರ್ವದಿಂ ಶಿವನು ಸತಿಯರ ಜಡೆಯ ಮೇಲೆ ತೊಡೆಯ ಮೇಲೆ ಧರಿಸಿರ್ಪನು. ಸ್ತ್ರೀಲಂಪಟನೆಂದು ಮನದಲ್ಲಿ ಗರ್ವಿಸಲು ಶಿವನದನಱಿದು ಕೋಟಿಕಂದರ್ಪರಂ ಗೆಲ್ವ ರೂಪಂ ಧರಿಸಿ ಭಿಕ್ಷಾಟನ ಮೂರ್ತಿಯಾಗಿ ಹೋಗಲು ಋಷಿ ಪತ್ನಿಯರೆಲ್ಲ ಕಾಮಿಸಿ ಉಟ್ಟುಡಿಗೆ ಜಾಱಲು ಋಷಿಗಳ ತಪ ಕೆಡಲು, ಹರನದೃಶ್ಯವಾಗಲು ಕುಟಿಲಸಿದ್ಧನೆಂದವರು ಯಜ್ಞದಿಂದ ಕೊಂದಪೆವೆಂದು ಹುಲಿ, ಕರಡಿ, ಸಿಂಹ, ಆನೆ, ಉರಗಾಗ್ನಿಯಪಸ್ಮಾರಾದಿಗಳಂ ಪಡೆದು ಹರನ ಕೊಲ್ಲೆಂದು ಕಳುಪುವಲ್ಲಿ ಮೊದಲು ಶೇಷನಂ ಕಳುಪಲು ಯಜ್ಞ ಬಂದು ರುದ್ರನ ಮುಂದೆ ನಿಂದಿರಲು, ಏನು ಬಂದೈಎನಲು, ಮುನಿಗಳ ಕೃತಕವಂ ಸರ್ಪ ಪೇಳಲು, ಅವರುಕಳುಹಿದಂತೆ ಮಾಡೆನಲು, ಉರಗರಾಜ ಹೊಡೆಗೆಡೆದು ವಂದಿಸಿ, ಹರನೆ ನಿಮ್ಮ ಲೀಲೆಗೆ ಬ್ರಹ್ಮಾಂಡವೆಂಬ ಭಾಂಡದಲ್ಲಿ ಸಪ್ತಸಮುದ್ರಂಗಳೆಂಬುದಕವಂ ಪೊತ್ತು ತೊತ್ತಾಗಿಪ್ಪೆನು. ಮುನ್ನ ನಿಮ್ಮ ಕೋವಳವಾ2ಗಿಪ್ಪೆನು ನಿ2ಮ್ಮಾಜ್ಞೆಯಿಂದೆ ಹರಿಗೆ ತಲ್ಪವಾಗಿರ್ದೆನು. ಸಮುದ್ರಮಥನದಲ್ಲಿ ತೆಗೆನೇಣಾಗಿ ನೊಂದೆನು. ತ್ರಿಪುರಸಂಹಾರದಲ್ಲಿ ನಿಮ್ಮ ರಥಕ್ಕೆ ಹೊರಜಿಯಾಗಿ ಬಿಲ್ಲಿಗೆ ನಾರಿಯಾಗಿರ್ದೆನು. ನಾಗಲೋಕದ

---

1. ನಿನಗೆ ಬೇಡ ಕರ್ತನುಂ ಟು (ಗ) 2 ಗಿನಿ (ಗ)

ರಸೆನಿಸಿಕೊಂಡು ಬಾಯಲ್ಲಿ ಬಲ್ಲಿದನಾಗಿ ಶಾಸ್ತ್ರಜ್ಞನಾಗಿರ್ದನು. ಪಾರ್ವತೀದೇವಿಯು ಕಿರುಬೆರಳ್ಗೆ ಮುದ್ರೆಯುಂಗುರವಾದೆನು. ನಿಮ್ಮ ಉರದಮೇಲೆ ಎನ್ನ ಹಾರವಾಗಿ ಧರಿಸಿದಡೆ ನಾನು ಕೃತಾರ್ಥನಪ್ಪೆನೆಂದು, ಬಿನ್ನೈಸಲು ಸರ್ಪರಾಜನ ಭಕ್ತಿಗೆ ಮೆಚ್ಚಿ ಶಿವನು ಯಜ್ಞದಲ್ಲಿ ಹುಟ್ಟಿದ ಪನ್ನಗನಂ ಹಾರವಾಗಿ ಧರಿಸಿದಕಾರಣ ಯಜ್ಞಸೂ1ತ್ರವೆಂದನು ಪ1ನ್ನಗಜನ್ನಸೂತ್ರವೆಂದು ಹೆಸರೊಂದಾಯಿತ್ತು. ನಿಷ್ಕಲ ಪರಶಿವನು ದಾರುವನಾಶ್ರಯದ ಮುನಿಗಳಿಂದ ಬಂದ ವಿಘ್ನಗಳೆಲ್ಲವನು ಆಯುಧವಾಗಿ ಆಭರಣವಾಗಿ ಧರಿಸಿದನು. ಶೇಷನ ಭಕ್ತಿಗೆ ಮೆಚ್ಚಿ ಉಪವೀತವಾಗಿ ಧರಿಸಿದನು. ನಿರಾಳಪರಶಿವನ ಆದಿಶೈವನೆಂದು ಕುಱುಹಿಡಬಾರದು. ವೇದಾಗಮ ಪುರಾಣಶಾಸ್ತ್ರಾತೀತನಾದ ಶಿವನ ವಸ್ತ್ರಾಭರಣಾನುಲೇಪನದಲ್ಲಿ ಎಱಕವಿಲ್ಲದ ನಿರ್ಲೇಪಕನ ಸಾಕಾರನೆಂದು ಕುಱುಹಿಡಿಬಾರದೆಂದು ಗೌತಮಋಷೀಶ್ವರನ ಕೊಡೆ ಶಿವನು ಶಂಭುಭಟ್ಟನಾಗಿ ಬಂದು ವಾದಿಸಿದಲ್ಲಿ ಉತ್ತರವಂ ಕೊಟ್ಟು ವಾದವಂ ಖಂಡಿಸಿದನು.

## " ಕಿನ್ನರಪತಿಮಿತ್ರ " ಎಂಬುದಕ್ಕೆ ಕಥೆ

ಕಿನ್ನರರಿಗೆ ಒಡೆಯನಾದ ಕುಬೇರನು ಬ್ರಹ್ಮಾಂಡದೊಳವಳಯದೊಳಗೆ ಉತ್ತರದಿಕ್ಕಿಗೊಡೆಯನಾಗಿ ರಾಕ್ಷಸರ ಭೀತಿ ದೇವತೆಗಳಿಗೆ ತಟ್ಟದಂತೆ ಕಾಯ್ದುಕೊಂಡಿರುತ್ತಳಕಾಪುರವೆಂಬ ಪಟ್ಟಣಾಧೀಶ್ವರನಾಗಿ ರಾಜಾಧಿರಾಜನಾಗೊಪ್ಪುತಿರಲಾತನ ಪಟ್ಟಣಕ್ಕೆ ವಳತವಾಗೊಪ್ಪುವ ಪಟ್ಟಣಗಳು ಗಾಂಧರ್ವ ಚಿತ್ರ ಶೋಭೆಪ್ರಮುದೆ, ಚಿತ್ರಾವತಿ ಎಂಬೈದು ಪಟ್ಟಣಗಳು ಕುಬೇರನ ಮಹೋದಯವಳಿತದ ಪಟ್ಟಣಗಳು. ಆ ಕುಬೇರನಂ ಓಲೈಸುವವರು ಚಿತ್ರಧರನು ಸಾರದೆ ತುಂಬುರರು ಕರ್ಮದೇವತೆಗಳು ಗುಹ್ಯಕರು ಇವರು ಸಹವಾಗಿ ಕುಬೇರನು ಶಿವನ ಹಡಪವಂ ಪಿಡಿದು ಕಾಳಂಜಿಯಂ ಪೊತ್ತು ಹರನ ಸೆಱಗನೊರಸಿ ಪಿಡಿದು ಸಾವಧಾನ ಮಝುಭಾಪು ಜೀಯ ಎನುತ್ತಿರಲು, ಒಂದಾನೊಂದುವೇಳೆ ಕಾಲಸಂಹಾರನಾದ ಪರಶಿವನು, ಜಗತ್ಸಂಹಾರವಾದ ನಾಟ್ಯವನಾಡುವಲ್ಲಿ ಭೂವ್ಯಾಕಾಶ ಒಡೆದು ಚಂದ್ರಸೂರ್ಯ ನಕ್ಷತ್ರಂಗಳುದುರುತ್ತಿರಲು, ಭುಜತಾಗಿ ದಶದಿಕ್ಕು ಹೊಡೆಗೆಡೆಯಲು, ನೃತ್ಯದುದ್ರೇಕದಿಂದ ಲೋಕವೆಲ್ಲ ಸಂಹಾರವಾಗಿ ಹರಿಯಜೇಂದ್ರಾದಿಗಳೆಲ್ಲ ಮಱಿದೊಱಗಿ ಮರಣವಾಗಲು ಅನಂತಕೋಟಿ ಬ್ರಹ್ಮಾಂಡಂಗಳೊಡೆದು ಹುಡಿಯಾಗುತ್ತಿರಲು ಪ್ರಮಥರಾನಂದದಿಂದ ನೋಡಿ ನುಡಿಸುವಾಗ, ಕುಬೇರನು ಭೂಕಂಪಿತದಿಂದ ಬಿದ್ದುರುಳುತ್ತ ಹೊರಳುತ್ತ ನರಳುತ್ತೇಳುತ್ತಂ ಎಡದಕೈಯಿಂದ ಹಡಪ ಬಲದಕೈಯಿಂದ ಸಗ್ಗಳೆಯಂ ಪಿಡಿದು ಬಿಡದೆ ಶಿವಾಶಿವಾ ! ಹರಹರಾ! ಮೃಡಾಯ ಮೃಡಾಯ ಎಂಬ ನುಡಿಗೇಳಿ ಶಿವನು ನಾಂಟ್ಯವನುಡುಗಿ ನಗುತ್ತಂ, ಕೈಪಿಡಿದೆತ್ತಿ ಮನ್ನಿಸಿ ಮೈದಡಹಿ, ತನ್ನ

1· ತ್ರಿಪ (ಗ)

ಭಂಡಾರದಾಧಿಪತ್ಯವನಿತ್ತು, ಹರಿಯಜೇಂದ್ರಾದಿ ಮೊದಲಾದವರಿಗೆ ಭೋಗಸಾಧನವಂ ಕೊಡುವುದಕ್ಕೆ ನೀನೆ ಕರ್ತನಾಗಿ ನನ್ನಸಖನಾದ ಕುಬೇರ ನೀನು ಸುಖದಿಂದಿರೆಂದೂ ಶಿವನು ಪೇಳಲು ಆ ಹಡಪ ಗಿಂಡಿಯಂ ಪಿಡಿದು ಓಲೈಸುತ್ತಿರ್ದನು.

## "ಸುರಪಥ1ದುರ್ಗ1ಳನುರುಹಿದನೆಂಬುದಕ್ಕೆ ಕಥೆ"

ತಾರಕಾಸುರನ ಮಕ್ಕಳಾದ ವೀರ, ವಿದ್ಯುನ್ಮಾಲಿ, ಕಮಲಲೋಚನ ಎಂಬುವರು ತಾರಕನಿಂದಧಿಕಪದವ ಪಡೆದಪೆವೆಂದುಗ್ರತಪವಂ ಮಾಡುವಾಗ ಲೋಕಾಧಿಲೋಕವೆಲ್ಲ ತಪದಜ್ವಾಲೆಯಿಂದುರಿವುತ್ತಿರಲಾಗ ಬ್ರಹ್ಮನು ಶಿವನಪ್ಪಣೆವಿಡಿದು ಬಂದು ರಕ್ಕಸರ ನಿಮಗೇನುಬೇಕೆಂದು ಕೇಳಲು, ನಮಗೆ ನಿತ್ಯೈಶ್ವರ್ಯಭೋಗವಂ ಕೊಡೆಂದು ಬೇಡಲು, ನನಗೆ ನಿತ್ಯೈಶ್ವರ್ಯವಿಲ್ಲ ನಿಮಗೆಂತುಕೊಡುವೆನೆನಲು, ಹಾಂಗಾದರೆ ಬಲ್ಲಿದಭೋಗಸಾಧನದ ಮೂಱುಪುರಂಗಳಂ ರಚಿಸಿಕೊಡು ಎನಲು ರಕ್ಕಸರ ಬಡಗಿಯಾದ ಮಯನಿಗೆ ಪೇಳಿ ಬ್ರಹ್ಮನು ಪೋಗಲು ಇತ್ತ ಮಯನು ಭೂಮಿಗೆ ಅಂತರದಲ್ಲಿ ಕಬ್ಬುನದಪುರ ಬೆಳ್ಳಿಯಪುರ ಚಿನ್ನದಪುರಂಗಳಂ ಮಾಡಿ, ಮೂಱನು ಒಂದುಗೂಡಿ ಕೀಲನೊಂದುಮಾಡಿಕೊಡಲು, ಆ ಮೂಱುಪುರದಲ್ಲಿ ಮೂವರು ಇರುತ್ತಿರಲು, ಆಗ ಮಯನು ರಕ್ಕಸರಿಗೆಂದನು. ನೀವು ಬ್ರಹ್ಮನ ನಿತ್ಯೈಶ್ವರ್ಯವಂ ಬೇಡುತ್ತಿದ್ದೀರಿ. ನೀವು ಲಿಂಗವಂ ಧರಿಸಿ ಪೂಜಿಸಿದೊಡೆ ನಿಮಗೆ ಬೇಡಿದ ಪದವಾದೀತೆನಲು, ಹಾಂಗಾದಡೆ ನಮಗೆ ಲಿಂಗವಂ ಧರಿಸೆನಲು ಮಯನು ಕಬ್ಬುನದ ಲಿಂಗವಂ ಮಾಡಿ ಶುಕ್ರಾಚಾರ್ಯಂಗೆ ಕೊಡಲು, ರಕ್ಕಸರಿಗೆ ಲಿಂಗವನಿತ್ತು ಶುಕ್ರಾಚಾರ್ಯ ಗುರುವಾದನು. ಇತ್ತ ಈ ಮೂವರು ರಕ್ಕಸರು ಶಿವನ ಕೃಪೆಯಂ ಪಡೆದು ಕಾಮಧೇನು ಕಲ್ಪವೃಕ್ಷ ಮೊದಲಾದ ಭೋಗಸಾಧನವಂ ಪಡಕೊಂಡು ಸುಖದಲ್ಲಿರುವಾಗ ಹರಿಯಜೇಂದ್ರಾದಿ ಅಷ್ಟದಿಕ್ಪಾಲಕರು ಮೊದಲಾದವರು ಆ ರಕ್ಕಸರು ಹೇಳಿದ ಸೇವೆಯಂ ಮಾಡದಿರಲು ತಮ್ಮ ತ್ರಿಪುರಸಹವಾಗಿ ಹೋಗಿ ಬ್ರಹ್ಮವಿಷ್ಣ್ವಾದಿಗಳ ಸದೆಬಡಿದು ಅವರ ಕೈಯಿಂದ ಸೇವೆಯಕೊಳ್ಳುತ್ತಿರಲು, ಬ್ರಹ್ಮನು ಮುಂಮುಗೆಟ್ಟು ಅಳವಳಿದು ಚಿಂತಿಸುತ್ತಿರಲು ಹೀಂಗೆ ದಿವ್ಯಸಹಸ್ರವರ್ಷ ಸೇವೆಗೆಯ್ಯುತ್ತಿರಲು, ಆಗ ಬ್ರಹ್ಮವಿಷ್ಣ್ವೇಂದ್ರಾದಿಗಳು ಈ ತ್ರಿಪುರದ ರಕ್ಕಸರ ಬಾಧೆ ಬಹಳವೆಂದು ಶಿವನಿಗೆ ಬಿನ್ನೈಸಿ ಮೊಱೆಯಿಡುತ್ತ ಕಣ್ಣೀರುಗಳಗಱೆವುತ್ತಿರಲು ನೋಡಿ ಭಸಿತ ರುದ್ರಾಕ್ಷಿ ಲಿಂಗವಂ ಧರಿಸಿದವರಂ ನಾನು ಕೊಲ್ಲುವುದಕ್ಕಾರೆನು ಎನಲು ನೀವೆ ಕಾದಿಕೊಲ್ಲಿ ಎಂದು ಶಿವನು ಬ್ರಹ್ಮ ವಿಷ್ಣ್ವಾದಿಗಳಿಗೆ ಪೇಳಲು ಆಗ ಬ್ರಹ್ಮ ವಿಷ್ಣ್ವಾದಿ ದೇವರ್ಕಳೆಲ್ಲರು ಮಾರಣಯಜ್ಞವಂ ಮಾಡಲು ಭೂತ ಪ್ರೇತ ಬ್ರಹ್ಮರಾಕ್ಷಸಂಗಳಂ ಪುಟ್ಟಿಸಿ, ತ್ರಿಪುರದವರ ಮೇಲೆ ಕದನಕ್ಕೆ ಕಳುಹಲು[1]

---

1. ದುರ್ಗಗ (ಕ)

ಭೂತಗಳು ಪೋಗಿ ರಕ್ಕಸರಂಗದ ಮೇಲೆ ಭಸಿತರುದ್ರಾಕ್ಷಿ ಲಿಂಗವಂ ಕಂಡು ಹೇ
ಬಂದು ನಮ್ಮ ಕಯ್ಯಲ್ಲಿ ತ್ರಿಪುರದವರಂ ಕೊಲ್ವುದಾಗದೆಂದು ವಿಷ್ಣು ಮೊದಲಾ
ವರಿಗೆ ಪೇಳಲು ಬಳಿಕ ನಾರಾಯಣ ನಾರದನ ಕೂಡಿಕೊಂಡು ಹೋಗಿ ತ್ರಿಪುರದ
ಕುಳಿತುಕೊಂಡು ಹರಿಮಣ್ಣಾನೆ ಚಿನ್ನವಮಾಡಿ ತೋಱುತ್ತಂ, ನಾರದಂ ಹಳೇ
ಅರುವೆಗಳನೆ ಚೀನಿ ಚೀನಾಂಬರವಂ ಮಾಡಿ ತೋಱುತ್ತಂ, ಕಪಟದಿಂದ ಕುತ
ಬೋಧೆಗಳಿಂದ ಮೂಱುಪುರದವರ ಲಿಂಗಧಾರಣವಂ ಬಿಡಿಸಿ ಶಿವನಪ್ಪಣೆಯಿಂದ
ಬುದ್ಧಿಮೋಹಿಯೆಂಬ ತಮ್ಮ ಬೌದ್ಧನಂ ಮಡಗಿ ಹರಿನಾರದರು ಪೋಗಿ ಮಾ
ಸರೋವರದಲ್ಲಿ ಕೊರಳುದ್ದ ನೀರಿನಲ್ಲಿ ನಿಂದು, ಶಿವಧೋ ಎಂದು ಮೊಱೆಯಿಡ
ಶಿವನು ಕೇಳಿ ನಂದೀಶ್ವರನಂ ಕಳುಹಲು ಬಂದು ಏಕೆ ಮೊಱೆಯಿಟ್ಟಿರೆಂದು ಕೇಳ
ನಂದೀಶ್ವರನಡಿಗೆ ವಂದಿಸಿ ಬಿನ್ನೈಸಿದರು. ರಾಕ್ಷಸರು ಲಿಂಗವಂಬಿಟ್ಟರಿನ್ನಾದ
ಹರನು ರಕ್ಕಸರ ಕೊಲ್ಲಬಾರದೆ ಎನಲು, ನಂದೀಶ್ವರಂ ಮರಳಿಬಂದು ದೇವರಿಗೆ
ಪರಿಯಂ ಪೇಳಲು ಆ ನುಡಿಗೆ ಶಿವನು ರಥವಂ ನಿರ್ಮಿಸೆಂದು ಪೇಳಲು, ಬಳ
ಬ್ರಹ್ಮಾದಿದೇವರ್ಕಳು ವಿಶ್ವಕರ್ಮನಂ ಕರೆಸಿ ಭೂಮಿಯೇ ರಥ, ಚಂದ್ರ-ಸೂರ್ಯ
ಗಾಲಿಗಳು, ವಿಂಧ್ಯಗಿರಿಯೆ ಅಚ್ಚು, ಕೇಸರಗಿರಿಯೆ ಈ ಸುಕ್ಷಣಮುಹೂರ್ತಗ
ಕೀಲು, ವೇದಂಗಳೆ ಕುದರೆಗಳು, ಬ್ರಹ್ಮನೆ ಸಾರಥಿ, ದಾನ ದಂಡ ಸಾಮ ಭೇದಂ
ಚಬುಕು, ಇಂತು ರಥ ಮುತ್ತೈದೆಯಾಗಲು ಅತ್ತ ಶಿವನು ಮಹಾಮೇರುವೆ ಬಿಲ್ಲ
ಶೇಷನೆ ಹೆದೆ, ಸಿರಿಯೊಡೆಯನೆ ಗಣೆ, ವಾಯುವೆ ಹಿಳುಕು, ಗರುಡನೆ ಗರಿ, ಅಗ್ನಿ
ಅಲಗು ಇಂತಾದ ಬಿಲ್ಲಂಪಿಡಿದುಕೊಂಡು ಶಿವನು ರಥವನೇಱಲು ಆ ರಥ
ಭೂಮಿಯಲ್ಲಿಳಿದು ನಾಗಲೋಕವಂ ಸಾರಲು, ವಿಷ್ಣು ನಂದೀಶ್ವರನಂ ಕೂತ
ಸ್ತೋತ್ರವಂ ಮಾಡಿ ಪ್ರಸನ್ನತ್ವಮಂ ಪಡೆದು ಹರಿ ವೃಷಭರೂಪಿನಿಂದ ರಥವನೆ
ವಾಗ ಶಿವನು ಸಾಮರ್ಥ್ಯವಂ ಕೊಡಲು ಮೇಲಕ್ಕೆ ತಂದನು. ಬಳಿಕಾ ರಥ
ಶಿವನೇಱಿ ನಡೆದು ತ್ರಿಪುರದ ಹತ್ತಿರದಲ್ಲಿ ನಿಲ್ಲಿಸಿ ಅಲ್ಲಿ ಶಿವನು ಬಿಲ್ಲಕೊಪ್ಪಿಗೆ ನೆ
ದಾಶನಣಗಿ ಮುಗುಳುನಗೆಯಿಂದ ತ್ರಿಪುರವಂ ನೋಡಲು ದಿವ್ಯಸಹಸ್ರವರ
ನೋಡುವಾಗ ಜಲಬಿಂದುಗಳುಗುತ್ತಿರಲು ನೊಸಲಕಣ್ಣು ಕಿಡಿ ಪೋಗಿ ತ್ರಿಪುರ
ಸುಡಲು ಆಗ ವಿಷ್ಣು ಅಗ್ನಿಗಳು ಅಂಬುಕಣೆಯಾಗಿ ವ್ಯರ್ಥವಾದೆವಲಾ ಎನೆ
ಶಿವನಾಗ ಬಿಲ್ಲನೇಱಿಸಿ ಎಸೆಯಲು ತಿಗುರಿಯಂತೆ ತಿರುಗುವ ಮುಪ್ಪುರದ ಕೀ
ಕಳಚಿ ಉರಿದುಬಿದ್ದವು. ಅನೇಕ ರಕ್ಕಸರು ದಗ್ಧವಾದರು. ಮೂಱುಪುರದಲ್ಲಿದ
ಶಿವಭಕ್ತಿಯಂ ಬಿಡದೆ ಇದ್ದವರು ಪತಣಮಯೋಗಿ ಏಕಶೀಲ ವಿರಕ್ತ ಇವ
ಮೂವರು ವಿಷ್ಣುವಿನ ಮಾಯೆಗೆ ಒಳಗಾಗದೆ ಚಿಂತಿಸುವಲ್ಲಿ ಶಿವನು ಸ್ವಪ್ನ
ಭಕ್ತಿಯಂ ಬಿಡದಿರಿ ನಿಮಗೆ ಕೇಡಿಲ್ಲವೆನೆ, ಹರಿಯ ಮಾಯೆಗೆ ಒಳಗಾಗದ ಕಾ
ಉಳಿದು ಬಂದು ಶಿವನಿಗೆ ನಮಸ್ಕರಿಸಲು ನಿಮಗೇನುಬೇಕೆನಲು ಪುರಹರನೆ ನಿ
ಕೈಲಾಸದಂತಃಪುರದ ಬಾಗಿಲಲಿ ನಿಮ್ಮ ಕೀರ್ತಿಸುತಯಿರ್ದಹೆವೆನಲು ಅವರು ಬೆ

ದಂತೆ ಮಡಗಿಕೊಂಡನು. ತ್ರಿಪುರವಸುಟ್ಟಮೇಲೆ ದೇವತೆಗಳೆಲ್ಲರು ಪಶುಪತಿಗೆ ಹೊಡಗೆಡದು ವಂದಿಸಿ ಕೀರ್ತಿಸಿ ಸುಖದಲ್ಲಿರ್ದರು.

## "ಕಾಲಸಂಹರನೆಂಬುದಕ್ಕೆ ಕಥೆ"

ಶಿವರಹಸ್ಯದಲ್ಲಿ ಜೈಮಿನಿಗೆ ದೂರ್ವಾಸ ಒರೆದನು. ಶಿವನು ತನ್ನ ಭಕ್ತರಿಗೆ ಗೆಲವಂಕೊಟ್ಟು ಮನ್ನಿಸಿ ಕಾಲಕಾಮರ ಸಂಹರಿಸಿದುದಃನಾ ಪೇಳ್ವಡೆ ಶಕ್ತನಲ್ಲವೆಂದು ಪೇಳುತ್ತಿರ್ದನು. ಶ್ವೇತನೆಂಬುವನು ಮುನ್ನ ಭುವನದಲ್ಲಿ ಪಂಕಜಪುರವೆಂಬ ಪಟ್ಟಣದೊಳು ಸರ್ವಪಾಪಾಧಿಕಾರಿಯಾಗಿ ನಡೆದೊಂದು ಕುಸುಮದ ದೆಸೆಯಿಂದ ರಂಭೆಯ ಭೋಗಕ್ಕೆ ಪೋಗೆ ರಂಭೆಯೆಂದಳು. ಒಂದು ಕುಸುಮವ ಶಿವಗೆಂದು ನೆನೆದ ಮಾತ್ರಕ್ಕೆ ಒಂದಿರುಳು ನನ್ನ ಭೋಗವಾಯಿತ್ತು. ನೀನು ಇಂದು ನನ್ನ ಭೋಗದಲ್ಲಿರ್ದು ನಾಳೆ ಕುದಿವ ನರಕಾಬ್ಧಿಯೊಳು ಬೀಳ್ವುದಂನೋಡಲಾರೆ. ನೀನು ಭಸಿತರುದ್ರಾಕ್ಷಿಗಳಂ ಧರಿಸಿ ಅಱಿಯೆ ಶಿವಪೂಜೆಗೆಯ್ದಡೆ ನನ್ನಂಥಾ ಸ್ತ್ರೀಯರನಂತ ಭೋಗಿಸಲುಂಟೆಂದು ಬೋಧಿಸಿ ಲಿಂಗದ ಗುಡಿಗೆ ಒಡಗೊಂಡು ಬಂದು ಲಿಂಗಪೂಜೋಪಕರಣವನೀಯಲು ರಾಜಋಷಿಯಾದ ಶ್ವೇತನು ಇತರೇತರವಂ ಮಱೆದು ಶಿವಮಂತ್ರಯುಕ್ತನಾಗಿ ಶಿವಪೂಜೆಗೆಯ್ಯುತ್ತಿರಲು, ಬೆಳಗಾಗಿ ಯಮಭಟರು ಬಂದು ರಂಭೆಯಿಂದ ಶ್ವೇತನಂ ಕಂಡಂಜಿ ಪೋಗಿ ಕಾಲನಿಗೆ ಪೇಳಲ್ಕೇಳಿ ಯಮನು ತನ್ನ ಭಟರುಸಹವಾಗಿ ವಾಹನವನೇಱಿಕೊಂಡು ಬಂದು ಆಯುಧವಂ ಪಿಡಿದು ನಿಂದು ಹೊಂಕರಿಸಿ ಕರೆಯಲು ಶಿವನ ಭವನವಂ ಪೊಗಲಂಜಿ ಪಾಶವಂ ಕೊರಳಿಗೆ ಬೀಱಿ ಸೆಳೆಯಲು ಪಾಶದೊಳಗೆ ಸಿಲ್ಕಿ ಶ್ವೇತಂ ಕಾಲನೊಡನೆ ನುಡಿದನು. ಎಲೆ ಕಾಲಹರನ ಪೂಜೆಗೆಯ್ವನ್ನಕ್ಕ ಸೈರಿಸು ಶಿವಪೂಜೆಯಿಲ್ಲದೆ ನಾನಾವಭೋಗವನು ಭೋಗಿಸೆನು ಎನೆ, ನಿನ್ನ ನುಡಿಯನು ಕೇಳಲು ಹಿರಿಯರಿಗೆ ಯೋಗ್ಯವಲ್ಲ. ವೃದ್ಧ ಬಾಲತ್ವವಂ ಬಯಸುವಂತೆ ಹಲವು ಬಾಣ ಕಾಗಿದರೆಯು ಸಾಯರು ರಜ್ಜುತಾಗಿದರೆ ಸಾವರು ಕಾಲ ತುಂಬಿದವರೆಂದು ಯಮ ನುಡಿಯಲು, ಶಿವಪೂಜೆ ನನಗೆ ಪ್ರೀತಿಯಲ್ಲದೆ ಪಾಪಿರಾದಿಭೋಗವು ನನಗೆ ಪ್ರೀತಿಯಿಲ್ಲವು. ಇದು ಸತ್ಯವಾದರೆ ಶಿವನು ನನಗೆ ಕೃಪೆಯಾಗಲಿ ಅಲ್ಲದೊಡೆ ಬೇಡವೆಂದು ಶ್ವೇತ ನುಡಿಯಲು, ಪಾಪಿಕೋಪಿಗಳ ಜಪತಪಮಂತ್ರಂಗಳು ನಿನ್ನಂ ರಕ್ಷಿಸಲಱಿಯವು ಎನಲು, ಸತ್ಯರಿಗೆ ಶಿಕ್ಷಿಸುವುದು ನಿನಗೆ ಸಲ್ಲದೆನಲು, ಅನಂತಚಕ್ರವರ್ತಿಗಳು ಸಾವಿರದೇವೇಂದ್ರರು ಗಂಗೆವಾಳುಕ ಬ್ರಹ್ಮವಿಷ್ಣ್ವಾದಿಗಳಂ ನಾನು ಶಿಕ್ಷಿಸೆನೆಂದು ಯಮ ನುಡಿಯಲು, ಮೂಱುಲೋಕದೊಳಗೆ ಹರಭಕ್ತರಿಗೆ ನಿನ್ನಶಿಕ್ಷೆ ಸಲ್ಲದು, ಹರಭಕ್ತರಿಗೆ ಬ್ರಹ್ಮವಿಷ್ಣ್ವಾದಿಗಳ ಶಿಕ್ಷೆಯಿಲ್ಲ. ನಿನ್ನ ತೊಲಗಿಸುತ್ತಿದೇನೆ, ಶಿವಾಜ್ಞೆಯಿಂದ ಶಿವಭಕ್ತರು ಸ್ವರ್ಗವಾಗಲಿ ನರಕವಾಗಲಿ ನಿಜಮೋಕ್ಷವಾಗಲಿಯೆಯ್ದುವರೆಂದು ಧಿಕ್ಕರಿಸಿ ಶ್ವೇತ ನುಡಿಯಲು ಕಾಲನೆಂದನು. ಮೂಱುಲೋಕದಲ್ಲಿಯು

ಕರ್ತ ಭರ್ತ ಹರ್ತ ಪೂಜ್ಯ ನಾನ1ಲ್ಲದಿ1ಲ್ಲವೆಂದುಗ್ರದಿಂದ ಪಾಶವ ಸೆಳೆಯಲು ಚಲನೆಯಿಲ್ಲದೆ ಶ್ವೇತನು ಹರಹರಾ ಎಂದು ನೆನೆಯಲ್ಕೆ ಹರನು ಹೂಂಕಾರದಿಂ ಮಹಾ ರೌದ್ರದಿಂದೆ ಗರ್ಜಿಸುತ್ತಂ ಕಾಲನಂ ದಹನವ ಮಾಡಿ ಸಂಹರಿಸಿ ಶ್ವೇತನಂ ಕಾಯ್ದು ಸಂತೈಸಿ ತನ್ನ ಭಕ್ತರ ಕ್ಷೇಮ ತನ್ನದೆಂದು ಶ್ವೇತಂಗೆ ಗಣಾಧಿಪ ಪದವಿಯನಿತ್ತನೆಂದು ದೂರ್ವಾಸ ಜೈಮಿ2ನಿ ಗೊ2ರೆದನು ಎಂದು ಸೂತಮುನಿಗಳಿಗೆ ಪೇಳ್ದನು.

## " ಕರಿದಾನವನ ಸೀಳ್ದವನೆಂಬುದಕ್ಕೆ ಕಥೆ "

ಸುವಿಷ್ಣುವೆಂಬ ಮುನಿಯು ಅರಣ್ಯದಲ್ಲಿ ತಪ3ವಂಗೆಯ್ಯುತ್ತಿ3ರಲು ದೇವಸ್ತ್ರೀಯರು ತಪದ ನಿಷ್ಠೆಯಂ ನೋಡಬೇಕೆಂದು ಆತನ ಸ್ತ್ರೀಯಂತೆ ಬಂದು ಕೂಡಲು, ಕೃತಕವೆಂದು ಮುನಿಯರಿದು ಪರನಾರಿಯ ಕೂಟದಿಂದ ಬಿಂದು ಚಲನೆಯಾಗ ಬಾರದೆಂದು ವೀರ್ಯವಂ ಹುಲ್ಲಮೇಲೆ ಬಿಡಲು ಅದಂ ಕಾಡೆಮ್ಮೆ ಮೇಯಲು ಅದರಿಂದ ಮಹಿಷಾಸುರನು ಪುಟ್ಟಿದನು. ಆತಂಗೆ ಗಜಾಸುರನೆಂಬ ಮಗನಾದನು. ಒಂಭತ್ತುಸಾವಿರಗಾವುದ ಶರೀರ4ದುದ್ದ ತೋರವುಳ್ಳಾತನಾಗಿ4 ಪುಟ್ಟಿ ಅವನು ನಡೆವಾಗ ಮಡಗಳು ತಾಗಿ ತರುಗಿರಿಗಳು ನುಚ್ಚುನುರಿಯಾಗುವುವು. ಅವನ ಬಾಲ ಸುಂಡಿಲವು ತಾಗಿ ಹಿಂದು ಮುಂದು ಅನೇಕ ಪರ್ವತಂಗಳೊಡೆದು ಹುಡಿಯಾಗಿ ಸಮಸ್ತ ಪ್ರಾಣಿಗಳಿಗೆ ಮರಣವಾಗಿ ಅವನುಸುರುಬಿಡಲು ನದಿಗಳ ನೀರು ಸಾವಿರಗಾವುದ ಹಾರಿ ಪ್ರಳಯಜಲದಮಳೆಯಂತೆ ಬೀಳಲು ಅವನ ಶರೀರವು ಕಾರ್ಗತ್ತಲೆಯಂತೆ ಭಯಂಕರವಾಗಿ ದೇವ ದಾನವ ಮಾನವರ ಬಾಧಿಸುತ್ತಿರಲು, ಅವನ ಭಯಕಂಜಿ ಮುನಿಗಳು ಕಾಶಿಗೆಹೋಗಿ ಅಡಗಿರಲು, ಅಲ್ಲಿಗೆಯು ಗಜಾಸುರನರಿಸುತ್ತ ಬರಲು ಆಗ ದೇವತೆಗಳು ಮನುಮುನಿಗಳು ಗಜಾಸುರ ಇಲ್ಲಿಗೆ ಬಂದನೆಂದು ಶಿವನಿಗೆ ಹೊಡೆಗೆಡದು ಮೊರೆಯಿಡುತ್ತ ಶಿವಧೋ ಎನಲು ಕೇಳಿ, ಹರನು ಆ ಗಜಾಸುರನ ತ್ರಿಶೂಲದಿಂದಿರಿದೆತ್ತಿ ಸೀಳಿ ಪಿಡಿಯಲದು ಬ್ರಹ್ಮಾಂಡವೆಂಬ ಸತ್ತಿಗೆಗೆ ತ್ರಿಶೂಲವೆಂಬ ಕಾವಹಾಕಿದಂತೆ ಒಪ್ಪುತ್ತದೆಯೆಂದು ದೇವತೆಗಳು ನುತಿಸಲು ಮತ್ತವನ ನೆಲಕ್ಕೆತ್ತಿಕ್ಕಿ ನಾಟ್ಯವನಾಡಲು ಅವ ಸ್ತೋತ್ರವಂ ಮಾಡಲು ಮೆಚ್ಚಿ ಅವನ ದೇಹವನೆ ಕೃತ್ತಿವಾಸೇಶ್ವರನೆಂಬ ಲಿಂಗವಂ ಮಾಡಲು ಆ ತ್ರಿಶೂಲವನೆಟ್ಟಸ್ಥಾನವ ಪುಣ್ಯತೀರ್ಥಕೊಳನಂ ಮಾಡಿ ಅವನ ನುತಿಗೊಲಿದು ಚರ್ಮವಂ ಪೊದ್ದು ಬಳಿಕಾ ಜಾತ್ರೆಯವರಿಗೆ ಮಾಡಿದ ಬೋನವನೊಂದುಕಾಗೆ ಕಚ್ಚಿಕೊಂಡು ಹಾರಲು ಅದನು ಮತ್ತೊಂದು ಕಾಗೆ ಕಂಡು ಕೊಳದಲ್ಲಿ ಬಿದ್ದು ಹಂಸೆಗಳಾಗಲು ಅದು ಹಂಸತೀರ್ಥವೆಂದು ಹೆಸರಾಯಿತು. ಅಲ್ಲಿ ಸ್ನಾನಪಾನವಂ ಮಾಡಿದವರಿಗೆ ಮುಕ್ತಿಯಾಗಲೆಂದು ಗಜಾಸುರ ಬೇಡಿಕೊಂಡನು.

---

1. ಲ್ಲವೆಂದುದಿ (ಗ) 2. ನಿಮುಷಿಗೊ (ಕ) 3. ವಿ (ಗ) 4. ಉದ್ದವುಳ್ಳಾತನಾಗಿ ಪರಾಕ್ರಮವುಳ್ಳಾತನಾಗಿ (ಗ)

## " ಇಂದಿರೆ ವಾಣಿ1 ಯರುಂಧತ್ಯಾದಿ ನಾ 1ರೀವೃಂದಮಾತರಯೋಗಿಣಿಯರು ವಂದಿತ ಪಾದಾರವಿಂ2ದಸೇವಿತೆ" 2ಎಂಬುದಕ್ಕೆ ಕಥೆ

ರಜತಾದ್ರಿಯಲ್ಲಿ ಶಿವನು ಸಿಂಹಪೀಠದೊಳ್ಮೂರ್ತಂಗೆಯ್ದಿರುವಲ್ಲಿ ಎಡಬಲದಲ್ಲಿ ಬ್ರಹ್ಮ ವಿಷ್ಣು ಕೋಟಿಗಳ್ ನೆರೆದು ಓಲೈಸುತ್ತಂ, ನರ ಸುರ ಗರುಡ ಗಂಧರ್ವ ಯಕ್ಷ ರಾಕ್ಷಸ ಮನು ಮುನಿ ದೇವ ಕನ್ನಿಕೆಯರ್ ಪ್ರಮಥಗಣ ತಿಂಥಿಣಿಯಿಂ ವೇದಾದಿ ವೇದಂಗಳ್ಕೀರ್ತಿಸುವ ಜಯಜಯಘೋಷದಿಂದೊಪ್ಪುತಿರ್ಪಾಸಮಯದಲ್ಲಿ, ಶಿವ3ನು ಗುಪ್ತವಾಗಿ ಗ3ಣೇಶ್ವರನ ಕರೆದು, ಪಾರ್ವತಿಯ ಅಂತಃಪುರದಲ್ಲಿ ಪ್ರಸ್ತುತವೇನು ನೋಡಿಬಾ4ಯೆಂದು ಕಳುಹಲ್ಕೋ4ಗಿ ಭವಾನಿಯ ಭವನಮಂ ಪೊಕ್ಕು ನೋಡು ವಾಗ ಗಣೇಶ್ವರನ ಕಣ್ಗೆ ರುದ್ರಾಣಿಯ ಓಲಗದ ಸಭೆ ನವರಸವಂ ಬೀಱುತ ಕಣ್ಗೆ ಅದ್ಭುತವಾಗಿ ತೋಱಿತ್ತು. ತರತರವಿಡಿದು ಓಲೈಸುವ ಸತಿಯರ ಮಧ್ಯದಲ್ಲಿ ದೇವಿ ಸಿಂಹಪೀಠದ ಹಂಸತಲ್ಪದಮೇಲೆ ಗಿರಿಜಾಂಬಿಕೆ ಮೂರ್ತಂಮಾಡಿರಲು ಲಾವಣ್ಯದ ರಾಶಿ ಮೂರ್ತಿಯಾದಂತೆ ಇರಲು, ದೇವಿಗೆ ಸಿರಿದೇವಿ ಸೀಗುರಿಯನಿಕ್ಕಲು, ಭಾರತಿ ಚಾಮರವಂ ಧಾಳಿಸಲು, ಮೇನಕೀದೇವಿ ಪಾರ್ವತಿಯ ಮೆಲ್ಲಡಿಯನೊತ್ತಲು, ಖೇಚರ ಸ್ತ್ರೀಯರು ಬೀಸಣಿಗೆಯ ಬೀಸಲು ಶಚೀದೇವಿ ಮುಡಿಯನಲಂಕರಿಸಲು, ಯಕ್ಷರ ಸ್ತ್ರೀಯರು ಗಂಧಕದಂಬವನೀಡಲು, ಪುಷ್ಪದತ್ತನಸ್ತ್ರೀಯರು ಕುಸುಮವಂ ಮುಡಿಸಲು, ಧವಳಾಂಗಿ ಮೊದಲಾದ ನವಗ್ರಹರ ಸ್ತ್ರೀಯರು ಮಡಿವರ್ಗವನುಡಿಸಲು, ಸೂರ್ಯನ ಸತಿ ಪದಕವಮಲವಂ ಪಿಡಿದು ನಿಂದಿರಲು, ರೋಹಿಣೀದೇವಿ ತಿಲಕವನಿಡಲು, ವೀರ ಲಕ್ಷ್ಮಿ ಜಯಲಕ್ಷ್ಮಿಯರು ಕೈಮುಗಿದು ನಿಂದು ಪ್ರಸ್ತಾವವಂ ಬಿನ್ನೈಸಲು, ರಂಭೆ ಊರ್ವಶಿಯರು ನೃತ್ಯಕ್ಕೆ ನಿಂದಿರಲು, ಕಿನ್ನರರ ಸತಿಯರು ಸಮ್ಮುಖವಂ ಬಿಡಿಸಲು, ನಾಗಸತಿಯರು ಸಭೆಯ ಸೇರುವೆವಿಡಿದು ನಿಲಿಸಲು, ರತೀದೇವಿ ರೋಹಿಣೀದೇವಿ ಅಂತಃ ಪುರದಸೇವೆಯೊಳಿರಲು, ಗಾಂಧರ್ವರ ಸ್ತ್ರೀಯರು ಗಾನವಂ ಕೇಳಿಸಲು, ರುದ್ರಕನ್ನಿಕೆ ಯರು ಸೋಬಾನವಂ ಪಾಡಲು, ಮುದ್ರಿಸಿದ ಭಂಡಾರದಲ್ಲಿರ್ದ ಆಭರಣವಂ ಕುಬೇರನ ಸತಿ ತಂದಿಡಲು, ವನಲಕ್ಷ್ಮಿ ಚಂದನವನಿಡಲು, ವರುಣನಸತಿ ಪನ್ನೀರಗಿಂಡಿಯಂ ಪಿಡಿಯಲು, ವಾಯುವ್ಯನ ಸತಿ ಕುಸುಮಪರಿಮಳವನಿಡಲು, ಅಗ್ನಿಯಸ್ತ್ರೀಯರಡಿ ಗೆಯಮಾಡಲು, ರವಿಯ ಸತಿ ಜ್ಯೋತಿಯಂ ಪಿಡಿಯಲು, ಚೌಷಷ್ಟಿಯೋಗಿಣಿಯರು ವಂದಿಸಿ ಕೊಂಡಾಡಲು, ಸಾವಿತ್ರಿಯೊಳು ಮಾತನಾಡುತ್ತ, ಗಾಯಿತ್ರಿಯೊಳು ಸರಸ ವಾಡುತ್ತ, ಅರುಂಧತಿಗೆ ಕೃಪೆಮಾಡುತ್ತಂ, ಸಪ್ತಮಾತೃಕೆಯರು ಕೈಮುಗಿದು ಬೆಸನ ಹಾರೈಸು4ತ್ತಿರಲು, ಕಾರಿಕಾಲಮ್ಮೆ ಚೋಳದೇವಿ ಚಂಗಳವ್ವೆ ನಂಬಿಯಕ್ಕ ಮೊದ ಲಾದವರ ತಿಂಥಿಣಿಯಲೊಪ್ಪುವುದಂ ಗುಪ್ತಗಣೇಶ್ವರಂ ಕಂಡು ಮರಳಿ ಶಿವ5ನೆಡೆಗೈದಿ5

1. ರುಂಧತಿನ್ನಾ (ಗ) 2. ದೇರಿವೇ (ಗ) 3. ನುಗ (ಗ) 4. ಯೆನಲು ಪೋ (ಗ) 4 ರು (ಗ) 5. ನಡಿಗೆಱಗಿ (ಕ)

ಮಂದಿಸಿ, ದೇವಿಯರಿಗೆ ಅನಂತಕೋಟಿ ಸ್ತ್ರೀಯರು ಮಂದಿಸಿ ಸೇವೆಗೈವ ಸಂದಣಿ ಬಹಳವೆಂದು ಪೇಳಲ್ಕೇ1 ಳಿ ನಸುನ1 ಗುತ ಶಿವನು ಮಾದವಿಕಟ್ಟೆ ಆದಿಯಾದ ಕೇಕರಾಕ್ಷಿ ಬಹ್ಮಕುಕ್ಷಿ ಅಂತ್ಯವಾದ ಅಱುವತ್ತುನಾಲ್ಕುಯೋಗಿಣಿಯರಂ ಕರೆದು, ಶಿವನು ಕಾಶಿ2ಯೊಳು 2ದಿವೋದಾಸ5ನು ಆತನಸ3ತಿ ಲೀಲಾವತಿಯನು ಕಪಟವ ಬೋಧಿಸಿ ಕಾಶಿಯಿಂದ ಹೊಱಡಿಸಿ, ಎಂದು ಕಳುಹಲು, ಅವರು ಅಲ್ಲದುದ ಅಹುದು ಮಾಡುತ್ತ ಕಣಿಯಂ ಹೇಳುವರಂತೆ ಕಪಟವಂ ಬೋಧಿಸುತ್ತ ಬರಲು, ಅದಂ ಕೇಳದೆ ಲಿಂಗನಿಷ್ಠಾಯುಕ್ತರಾಗಿ ಭಕ್ತಿವಿಡಿದು ಪೂಜಿಸಿ ದಿವೋದಾಸನು ಸತಿಸಹ ಕೈಲಾಸಕ್ಕೆ ಹೋದರು. ಬಳಿಕ ಶಿವನು ಕಾಶಿಯಲ್ಲಿ ಬಂದು ನಿಂದನು. ಅಱುವತ್ತುನಾಲ್ಕು ಯೋಗಿಣಿಯರೈತಂದು ಪಾರ್ವತಿಗೆ ಮಂದಿಸಿ ಎಂದಿನಂತೆ ಸೇವೆಯಂ ಮಾಡುತಿರ್ದರು.

## " ಶಿವಾನಂದ ಸಿಂಧೇಂದುಶಿವೆ " ಎಂಬುದಕ್ಕೆ ಕಥೆ

ಪಾಲ್ಕುಱಿಕೆ ಸೋಮಾರಾಧ್ಯರು ವಾದಮಂ ಖಂಡಿಸುತಿರ್ದರು. ಪರಶಿವ ನೆಂಬ ಸಮುದ್ರದಲ್ಲಿ ಬ್ರಹ್ಮವಿಷ್ಣ್ವೇಂದ್ರಾದಿ ಸಚರಾಚರ ಪ್ರಾಣಿಗಳೆಂಬ ತುಂತುರ್ವ ನಿಗಳ್ ನೊರೆತೆರೆಗಳ್ಬುದ್ಬುದಾದಿಗಳು ಅಲ್ಲಿಯೆ ಪುಟ್ಟಿ ಅಲ್ಲಿಯೆ ಅಡಗುತ್ತಿಹವು. ಚಂದ್ರನ ಕಂಡಡೆ ಸಮುದ್ರ ಹೆಚ್ಚುತ್ತಿಹುದು. ಸಖತ್ವವುಂಟಾದಕಾರಣ ಕೋಟಿ ಚಂದ್ರಪ್ರಕಾಶವನು ಮೀಱಿ ತೋಱುವ ಮುಖವನುಳ್ಳ ಪಾರ್ವತಿಯ ಕಂಡಡೆ ಪರಶಿವ ನೆಂಬ ಸಮುದ್ರಕ್ಕೆ ಜಗತ್ಸೃಷ್ಟಿಯನುಂಟುಮಾಡುವ ಲೀಲೆಯೆಂಬ ಭರತ ಹೆಚ್ಚು ವುದು. ಶಿವಭಕ್ತಿಸಂಪುಟದಿಂದ ಅನಂತಕೋಟಿಬ್ರಹ್ಮಾಂಡಗಳುದಯಿಸಿದವು. ಶಿವಶಕ್ತಿಗಳಿಂದ ಸಕಲ ಸುಖಭೋಗಮೋಕ್ಷಂಗಳುಂಟಾಗುತ್ತಿಹವು. ನಿತ್ಯಾನಂದ ನಿಜಮೋಕ್ಷವೆಂಬ ಸಮುದ್ರವ ಹೆಚ್ಚಿಸುವುದಕ್ಕೆ ಜ್ಞಾನ, ಶಕ್ತಿಯೆಂಬ ಚಂದ್ರನೇ ಕಾರಣವೆಂದು ಪಾಲ್ಕುಱಿಕೆಯ ಸೋಮಾರಾಧ್ಯರು ನುಡಿಯಲು, ಶಂಖಚಕ್ರ ಸಹಪುಟ್ಟಿದ ಚಕ್ರಪಾಣಿರಂಗನು ಹರಿಯು ನಾಭಿಯಲ್ಲಿ, ಗಂಡನು ಕಾಲಲ್ಲಿ ಹೆಣ್ಣನು ಹೆತ್ತನೆನಲು, ಅದು ಸ4ಟಿ4ಯೆಂದು ಸ್ವಚ್ಛಂದಲಲಿತಭೈರವಿಯಲ್ಲಿ ಶಿವ ನೆಂಬ ಸಮುದ್ರದಲ್ಲಿ ಬ್ರಹ್ಮವಿಷ್ಣ್ವೇಂದ್ರಾದಿ ದೇವತೆಗಳೆಂಬ ಜಲಚರಪ್ರಾಣಿಗಳು ದಯಿಸಿದವೆಂಬುದನುಂಟುಮಾಡಿ ತೋಱಲು ಸೋತು ಭಂಗಿತನಾಗಿ ಅಡಿಗೆಱಗಿದನು. ಓಬಳಕ್ಕೆ ಹೋಗುವಲ್ಲಿ ಶ್ರೀಗಿರಿಯ ಶಿಖರವ ತಾನು ನೋಡಬಾರದೆಂದು ಮಱೆ ಮಾಡಿಕೊಂಡು ಪೋಗುತಿರಲು ನಯನವೆರಡು ಪೋದುವು. ಹರಿಯು ನುತಿಸಿ ಕೇಳಲು ಮಲ್ಲಿಕಾರ್ಜುನ ಕೊಟ್ಟಪನೆನಲು ಮಲ್ಲಿಕಾರ್ಜುನಂಗೆಱಗಿ ಒಂದು ನಯನವನಿತ್ತು ಇನ್ನೊಂದು ನಯನವ ಪಾಲ್ಕುಱಿಕೆ ಸೋಮಾರಾಧ್ಯರು ಕೊಟ್ಟಾ[illegible] ಲು

---

1. ಳಿನ (ಗ) 2. ಯೊಳು (ಕ) 3. ನಸ (ಕ) 4. ತ್ಯೆ (ಕ)

ಮರಳಿಬಂದು ವಂದಿಸಲು ಅವನ ನಯನವಂ ಕೊಟ್ಟು ಚತುರ್ಮುಖ ಬಸವರಸರಿಂ ದೀಕ್ಷೆಯಂ ಕೊಡಿಸಿರಲು ಅವನು 'ವೀರಭದ್ರವಿಜಯವಂ' ಪೇಳುವಲ್ಲಿ ಹರಿಯು ಸಮವಾಗಿ ವೀರಭದ್ರನ ಕೂಡೆ ಕಾದಿದನೆನಲು ಹಿಂದಳಜಿದ್ದು ಬಿಡದೆಯೆಂದು ಜಱಿಯಲು ಶರಭದಂಡಕವಂ ಪೇಳಲು ಒಪ್ಪಿಗೊಂಡರು. ಬಳಿಕವನು ಪಾರ್ವತೀಶ್ವರನ ನುತಿಸುವಲ್ಲಿ ಅರ್ಧನಾರೀಶ್ವರನ ಸ್ತೋತ್ರವಂ ಮಾಡಿದನು.

## "ಹರನಕ್ಷಿಯಿಂದೊಗೆದು ವೀರೇಶ ಹರಿಯಜದಕ್ಷರ ಸಂಹರಿಸಿದ ನೆಂಬುದಕ್ಕೆ ಕಥೆ"

ಆದಿಬ್ರಹ್ಮನ ಮಗನೆನಿಸಿದ ದಕ್ಷಬ್ರಹ್ಮನು ಮಾನಸಸರೋವರದಲ್ಲಿ ಹನ್ನೊಂದು ಸಾವಿರ ವರುಷ ತಪವಂ ಮಾಡಲು, ಆಗ ಶಿವನು ಮೆಚ್ಚಿ ಬೇಡು ಎನಲು ಹರಿವಿರಿಂಚ್ಯಾದಿ ದೇವತೆಗಳಿಂದ ಓಲೈಸಿಕೊಂಬ ಪದವಿಬೇಕೆನಲು ಶಿವನು ಹಾಂಗೆಯಾಗಲಿ ಎಂದು ಪೋಗಲು ಬಳಿಕ ದಕ್ಷಬ್ರಹ್ಮನು ವಿಶ್ವಕರ್ಮನಂ ಕರೆಸಿ ನವರತ್ನ ಖಚಿತವಾದ ದಕ್ಷಪುರವೆಂಬ ಪಟ್ಟಣವಂ ಕಟ್ಟಿಸಿ ಅ1ಲ್ಲೆಲ್ಲರ ಕೈಗಳಿಂ ಓ1ಲೈಸಿಕೊಳ್ಳುತ್ತಿ 2ರ್ದನು.2 ಮತ್ತೆ ಶಿವನಿಂದ ನಾಲ್ವತ್ತು ಸಾವಿರ ಹೆಣ್ಣು ಮಕ್ಕಳಂ ಪಡೆದಿರಲು ಅವರು ಗಂಗಾತೀರದಲ್ಲಿ ತಪವಂ ಮಾಡುತ್ತಿರಲು ಆಗ ನಾರದ ಬಂದು ಏಕೆ ತಪವಂ ಮಾ3ಡುತ್ತೀ3ರಿ? ಎನಲು ನಮಗೆ ದೇವಪದವಿಬೇಕೆನಲು, ಅದು ಏತಕ್ಕೆ ಮೋಕ್ಷವಂ ಪಡೆಕೊಳ್ಳಿ ಎಂದು ಪೇಳಿ ನಾರದ ಹೋಗಲು, ಅವರು ಅದನೊಲ್ಲದೆ ದೇವ ಪದವನೆ ಪಡೆದುಕೊಳಲು, ಬಳಿಕ ದಕ್ಷಂಗೆ ನಾಸಿನಿ ಪ್ರಸೂತಿ ವೇದವಲ್ಲಿ ವೈರಿಣಿ ಎಂಬ ನಾಲ್ವರು ಸತಿಯರು. ವೈರಿಣಿಯ ಪುತ್ರಿಯರು ವಿಶ್ವೆ ಸಾಧ್ಯೆ ಸಂಕಲ್ಪೆ ಮುಹೂರ್ತೆ 4 ಅರುಂಧತಿ ಅಂಬೆ ಜಾನಿ ಭಾನಾ 4 ವಸುವೆ ಎಂಬ ಇವರನ್ನು ಧರ್ಮಮುನಿಯೆಂಬುವನಿಗೆ ಮದುವೆಯಂ ಮಾಡಿದನು. ಮತ್ತೆ ತನ್ನ ಮಕ್ಕಳಾದ ದಿತಿ ಅದಿತಿ ದನುವೆ ಜಿತ್ವೆ ಅರಿಷ್ಟೆ ಸುರಭಿ ಸುರಸೆ ವಿನುತೆ ಕದ್ರುವೆ ಕ್ರೋಧೆ ತಾಮ್ರೆ ಈಳೆ ಎಂಬಿವರಂ ಕಶ್ಯಪಬ್ರಹ್ಮನಿಗೆ ಮದುವೆಯಂ ಮಾಡಿದನು. ಮತ್ತೆ ದಕ್ಷನು ತಪವಂ ಮಾಡುವಾಗ ಇನ್ನೇನುಬೇಕು ಎಂದು ಶಿವನು ಕೇಳಲು ಇನ್ನೊಬ ಮಗಳಂ ನನಗೆ ಕೊಟ್ಟು ಆ ಸುಕನ್ನಿಕೆಯಂ ನೀವೆ ಮದುವೆಯಾಗಿಯೆಂದು ಬೇಡಿಕೊಳ್ಳಲು ಹಾಗಾಗಲಿಯೆಂದು ಶಿವನು ಕೈಲಾಸಕ್ಕೆ ಹೋಗಿ ದೇವಿಯ ದಕ್ಷಂಗೆ ಮಗಳಾಗು 5ಹೋಗೆಂ5ದು ಕಳುಹಲು ಅಂಬಿಕೆ ಕಾಳಿಂದಿನೀನದಿಯಲ್ಲಿ ಪದ್ಮ ಪತ್ರದಮೇಲೆ ಶಂಖರೂಪಾಗಿರಲು ಅದ ದಕ್ಷನು ಸ್ನಾನಕ್ಕೆ ಬಂದು ಕಂಡು ತೆಗೆದು

---

1. ಲ್ಲಿವೆಲ್ಲರಕೈಯ್ಯವಾ (ಗ) 2. ದರ್ (ಗ) 3. ಡೀ (ಗ) 4. [ಅರುಂಧತಿ ಲಂಘಾ ಜಾಮೀ ಭಾನು ?] 5. ಎಂ (ಕ)

ಕೊಳಲು, ಅದು ಶಿಶುರೂಪಾಗಿರಲು, ತನ್ನ ಸತಿಯಾದ ವೇದವಲ್ಲಿಗೆ ಕೊಡಲು, ಆಕೆ ಹರುಷದಿಂದ ಸಾಕಲು, ಐದನೆಯ ವರುಷದಲ್ಲಿ ದೇವಿ ತಪವಂ ಮಾಡುವಾಗ ಶಿವನು ಮುನಿರೂಪಾಗಿ ಸಮೀಪಕ್ಕೆ ಬಂದು, ಎಲೈ ಕನ್ನಿಕೆ, ನೀನೇಕೆ ತಪವಂ ಮಾಡೀಯೆನಲು ನನಗೆ ಶಿವನು ಗಂಡನಾಗಬೇಕೆಂದು ತಪವಂ ಮಾಡುತಿದೇನೆ ಎನಲು, ಎಲುವ ಧರಿಸಿದನ, ತೊವಲ ಹೊದ್ದನ, ಸುಡುಗಾಡೊಳಿರುವನ ಮದುವೆಯಾಗಿ ಏನು ಸುಖವನುಂಡಹೆ ಎನ್ನ ಮದುವೆಯಾಗಬಾರದೆ? ಎನಲು, ಕಿವಿಯ ಮುಚ್ಚಿ ಈ ಮುದಿತಪಸಿಯ ನೂಂಕಿಯೆನಲು ಅಷ್ಟರೊಳು ಶಿವಂ ನಿಜರೂಪದೋಱಲು, ಆಗ ದೇವಿ ನಮಸ್ಕರಿಸಲು ಆಗ ದ1ಕ್ಷಬ್ರಹ್ಮ ಬಂ1ದೆಱಗಿ ಇಬ್ಬರನು ಮನೆಗೆ ಕರೆದೊಯ್ದು ಶಾಸ್ತ್ರೋಕ್ತಧಾರೆಯನೆರೆಯಲು, ದೇವಿಗೆ ಹೇಳದೆ ಶಿವನು ಕೈಲಾಸಕ್ಕೆ ಪೋಗಲಿತ್ತ ದೇವಿ ಮತ್ತೆ ತಪವಂ ಮಾಡುತ್ತಿರಲು, ಆಗ ಶಿವನು ಪ್ರಮಥಗಣಂಗಳುಸಹ ಬಂದು ವೃಷಭೇಶ್ವರನ ಮೇಲೆ ಕುಳ್ಳಿರಿಸಿಕೊಂಡು ಕರೆದೊಯ್ಯಲು ಬಳಿಕ ದಕ್ಷ ನನ್ನ ಮಗಳ ರುದ್ರ ಕ2ದ್ದೊ2ಯ್ದನೆನಲು, ಆಗ ವಿಷ್ಣುವೊದಲಾದ ದೇವರ್ಕಳು ತಮ್ಮ ಸತಿಯ ಶಿವನು ತಾವು ಒಯ್ದರೆ ನೀನೇಕೆ ನಿಂದಿಪೆಯೆಂದು ಹೇಳಲು, ಬಳಿಕ ದಕ್ಷನು ಎಲ್ಲಾ ಅಳಿಯರನು ಮಕ್ಕಳನು ನೋಡಬೇಕೆಂದು ಪೋಗಲು ಅವರೆಲ್ಲರು ಇದುರುಗೊಂಡು ಮನ್ನಿಸಲು, ಕೈಲಾಸಕ್ಕೆ ಗಿರಿಜೇಶನ ನೋಡಬೇಕೆಂದು ಪೋಗಲು, ಬಾಗಿಲಲ್ಲಿ ನಂದೀಶ್ವರನು ತಡೆದು ಬಿಡಲು ಶಿವನ ಓಲಗದಲ್ಲಿ ಪೋಗಿ ನಿಂದಿರಲು, ಶಿವನು ದಕ್ಷನತ್ತ ನೋಡದೆ ಸುಮ್ಮನಿರಲು ಎಲ್ಲಾ ಅಳಿಯರು ಮನ್ನಣೆಯ ಮಾಡಿದರು; ಈ ಗೊರವ ಬಾಗಿಲಲ್ಲಿ ತಡೆಸಿದ· ನನ್ನತ್ತ ನೋಡಲಿಲ್ಲವೆಂದು ಕೋಪದಿಂದ ತಿರಿಗಿಬಂದು ಯಜ್ಞವಂ ತೊಡಗಿದನು. ಭಾಗೀರಥಿಯ ತೀರದಲ್ಲಿ **ಕನಖಲ**ವೆಂಬ ಕ್ಷೇತ್ರವಿರಲು, ಸಾವಿರಗಾವುದ ವಿಶಾಲವುಳ್ಳ ಯಾಗಶಾಲೆಯುಂ ವಿಶ್ವಕರ್ಮನಿಂದ ಕಟ್ಟಿಸಿ ಅದಱ ಮಧ್ಯದಲ್ಲಿ ರತ್ನಖಚಿತವಾದರ ಮನೆಯುಂ ಕಟ್ಟಿಸಿ, ಮತ್ತೆ ಪತ್ರಾವಳಿಯ ಹೊಲಿವರು ಮೂವತ್ತುಸಾವಿರ, ಅಡಿಗೆಯ ಮಾಡುವರು ಮೂವತ್ತುಸಾವಿರ, ನೀಡುವರು ಮೂವತ್ತುಸಾವಿರ, ಇನ್ನೂಱು ಗಾವುದ ದು3ದ್ದ ಯಜ್ಞಕುಂಡವಂ ತೆಗೆಸಿ, ಅತ್ತಿ ಆಲ ಅರಳಿ ಬೇವು ಮುತ್ತುಗ ಉತ್ತರಣಿ ಎಕ್ಕೆಗಳೆಂಬ ಕಟ್ಟಿಗೆಗಳನೊಟ್ಟಿಸಿ ತುಪ್ಪ ವೊದಲಾದ ಹದಿನೆಂಟು ಹವಿಸ್ಸುಗಳಂ ಹಾಕಿ ಬೆಂಕಿಯುಂ ಪುಟಮಾಡಿ, ಹರಿಬ್ರಹ್ಮಯಿಂದ್ರಾದಿ ದೇವತೆಗಳು ಬಂದು ಯಜ್ಞವ ಮಾಡುತ್ತಿರಲು ಬಳಿಕ ನಾರದಮುನಿ ಕೈಲಾಸಕ್ಕೆಹೋಗಿ ಮಹಾದೇವಂಗೆ ಕೈಮುಗಿ3ದು ಸಾಷ್ಟಾಂಗವೆಱಗಿ ದ3ಕ್ಷ ನಿಮ್ಮನು ಬಿಟ್ಟು ಯಜ್ಞವಂ ಮಾಡುತ್ತಹನೆ ಎಂದು ಬಿನ್ನೈಸಲು, ಇತ್ತ ದಧೀಚಿ ವೊದಲಾದ ಋಷಿಗಳು ಯಜ್ಞಕ್ಕೆ ಬಂದು ಯಜ್ಞಕ್ಕೆ ಕರ್ತೃವಾದ ಶಿವನೆಲ್ಲಿ? ಎಂದು ಕೇಳಲು,ಯಜ್ಞಕ್ಕೆ ವಿಷ್ಣುವೇ ಕರ್ತೃ ಎನಲು ಭೃಗು ದಧೀಚಿ ವೊದಲಾದ ಋಷಿಗಳು ಕೋಪದಿಂದ ಎಲೆ ದಕ್ಷ, ನಿನ್ನಯಜ್ಞ ನಿನಗೆ

1. ಕ್ಷ ಬಂ (ಗ) 2. ರದೊ (ಗ) 3. ದುದ (ಗ)

ವಿಘ್ನವಾಗಲಿ, ಎಂದು ರೌದ್ರದಿಂದ ಶಪಿಸಿ ಹೋಗಲು ಈ ವಾರ್ತೆಯಂ ದೇವಿಯರ್ ಕೇಳಿ ನಾನು ಯಜ್ಞವಂ ನೋಡಬೇಕೆಂದು ಶಿವನಂ ಕೇಳಲು, ಕರೆಯದೆ ಹೇಂಗೆ ಹೋದಹೆ ಬೇಡವೆನಲು, ಮಂದಬುದ್ಧಿ1ಯಾದ1 ದಕ್ಷನಿಗೆ ಬುದ್ಧಿಯಂ ಪೇಳುವೆನೆಂದು ಶಿವನಪ್ಪಣೆವಿಡಿದು ಹನ್ನೆರಡುಕೋಟಿ ರುದ್ರಕನ್ನಿಕೆಯರಿಗೆ ಕರ್ತೃವಾದ ನಂದೀಶ್ವರನ ಸ್ತ್ರೀ ಸೂಯಸೋದೇವಿ ಸಹವಾಗಿ ಮಾಲಿನಿ ಸುಮಾಲಿನಿಯರಿಂದ ಸತ್ತಿಗೆಯಂ ಪಿಡಿಸಿಕೊಂಡು, ನಂದಿನಿ ಕಮಲಿನಿಯರಿಂದ ಚಾಮರವ ಢಾಳಿಸಿಕೊಳ್ಳುತ್ತ ಸುಶಿ2ನಿ2ಯಿಂದ ರತ್ನಖಚಿತವಾದ ಹಾವುಗೆಯಂ ಹಿಡಿಸಿಕೊಂಡು ಪುಷ್ಪಕವನೇಱಿ ಯಜ್ಞಕ್ಕೆ ಬಂದು ಪುಷ್ಪಕವನಿಳಿದು ದಕ್ಷನ ಮುಂದೆ ನಿಲಲು, ದಕ್ಷನೆಂದನು. ನೀನೇಕೆಬಂದೆ? ನಿನ್ನಗಂಡನಮಂಗಲನು,ಕೊರಳಲ್ಲಿ ಎಲುವಕಟ್ಟಿಕೊಂಡು ಶ್ಮಶಾನದಲ್ಲಿ ಇರುತಿಹನು, ಆದುಕಾರಣ3ವೇ ನಿನ್ನನು3 ಕರೆಯಲಿಲ್ಲವೆನಲು, ಹರನ ನಿಂದಿಸಿದಡೆ ಶಿರ ಹೋದೀತು ವೃಥಾ ಉರಿದು ಕೆಡಬೇಡವೆನಲು, ಮತ್ತೆಯು ನಿಂದಿಸಲು, ಗರ್ವದಿಂದ ನೀನು ಶಿವನಿಂದೆಯಂ ಮಾಡಿದೆಯಲಾ ನಿನಗೆ ಕುಱಿದಲೆಯಾಗಲಿ, ನಿನ್ನ ಸಮಯವು ಹರಭಕ್ತಿಗೆ ವಿರುದ್ಧಗ4ಳಾಗಿ ಕೆಟ್ಟುಹೋಗಲಿ4ಎಂದು ಶಪಿಸಿ ನಿರ್ವಯಲಾಗಿ ಕೈಲಾಸಕ್ಕೆಯ್ದಿ ದಕ್ಷ ಸೊಕ್ಕಿಐದಾನೆ ಆವನಿಗೆ ಶಿಕ್ಷೆಯಂ ಮಾಡಬೇಕೆನಲು, ಆಗ ಹರನು ಕೋಪದಿಂ ನೋಡಲು ಅಗ್ನಿಲೋಚನದಿಂದ ವೀರಭದ್ರದೇವರು ಪುಟ್ಟಿದರು. ಸಾವಿರ ಶಿರಸ್ಸು ಎರಡುಸಾವಿರತೋಳು ಮೂಱುಸಾವಿರ ಕಣ್ಣು ಕೆಂಜೆಡೆಗಳಿಂದ ಖಡ್ಗಖೇಟ ಮೊದಲಾದಾಯುಧಂಗಳಿಂ ಪುಟ್ಟಿ, ಎಲೈ ತಂದೆ ನನಗೆ ಏನಪ್ಪಣೆ ಎನಲು, ದಕ್ಷನ ಶಿಕ್ಷಿಸಿ ಯಜ್ಞವಂ ಕೆಡಿಸು ಹೋಗೆನಲು, ಹಾಂಗಾಗಲೆಂದು ಹೋಗಿ ಮರುಳು ತಾಂಡರುಗಳಿಂದ5 ಯಜ್ಞಶಾಲೆಯಂ ಮುತ್ತಿಸಿ, 5 ದಕ್ಷಗಿಂತೆಂದನು; ಶಿವಗೆ ಹವಿಸ್ಸುಕೊಡು ಎನಲು, ನಾನು ವಿಷ್ಣುವಿಗೆ ಕೊಟ್ಟೆನೆನಲು, ಆಗ ವೀರಭದ್ರದೇವರು ಶಿವನ ಹವಿಸ್ಸಿಗೆ ನೀನು ಯೋಗ್ಯನೆಯೆಂದು, ವಿಷ್ಣುವಿನ ಎದೆಯ ದಂಡದಿಂದ ಹೊಡೆಯಲು, ಕೌಸ್ತುಭ ರತ್ನವೊಡೆದು, ಪೆಟ್ಟುತಾಗಿ ಲಕ್ಷ್ಮಿ ನೆಲಕ್ಕೆ ಬಿದ್ದಳು. ಮತ್ತೆ ಪೂಷಾದಿತ್ಯನ ಹಲ್ಲ ನುದರಿಸಿ ಭಗಾದಿತ್ಯನ ಕಣ್ಣಕಿತ್ತು ಗಾದದಿಂದ ಚಂದ್ರನ ತಿಕ್ಕಿ ಅಗ್ನಿಯ ಹಸ್ತಗಳನು ನಾಲಗೆಯನು ಕೊಯ್ದು ಬ್ರಹ್ಮನ ಹೆಂಡಿರಾದ ಸಾವಿತ್ರಿ ಗಾಯತ್ರಿ ಸರಸ್ವತಿಯ6ರ ಮೂ6ಗು ಮೊಲೆಗಳ ಕೊಯ್ದು ಬಳಿಕ ಮೂರ್ಛೆಯಿಂದ ವಿಷ್ಣುವೆದ್ದು ಚಕ್ರವಬಿಡಲು ಅದ ವೀರಭದ್ರದೇವರು ನುಗ್ಗುಮಾಡಲು, ವಿಷ್ಣು ಕಂಡು ಹೆದಱಿ ಎರಳೆಯಾಗಿ ಓಡಲು ಕಂಡು, ಶರದಿಂದೆಸೆಯಲು, ಆ ಸರಳಕೂಡೆ ಅವನ ಪ್ರಾಣಬಂದು ನಮಸ್ಕರಿಸಿ ತಪ್ಪುಯೆಂದು ಕೈಮುಗಿದು ನಿಲ್ಲಲು ಯಜ್ಞಕ್ಕೆ ಬಂದಿದ್ದ ಸಮಸ್ತ ದೇವತೆಗಳನು

---

1. ಯು (ಗ) 2. ರಿ (ಕ) 3. ದಿಂ ನಿನ್ನ (ಗ) 4. ಳಾಗ (ಕ) 5. ರಿಂದೆ (ಗ)
6. ರಂ ಶಿಕ್ಷಿಸಿ ಮಾ (ಕ)

ಸದೆಬಡಿದು ಮತ್ತೆ ವೀರಭದ್ರದೇವರು ದಕ್ಷನಶಿರವ ಛೇದಿಸಿ ಯಜ್ಞಕುಂಡದಲ್ಲಿ ಹಾಕಿದನು. ಬಳಿಕ ಮಗುಳತಂಡಗಳು ಅಗ್ನಿಕುಂಡವ ಮೂತ್ರಿಸಿ ನೊಂದಿಸಿ ಬ್ರಹ್ಮನ ಹಂಸೆಯನ್ನು ಸುಟ್ಟು ತಿಂದವು. ಇತ್ತ ದೇವಿಯರು ಶಿವನು ಪುಷ್ಪಕಾರೂಢನಾಗಿ ಯಜ್ಞಸಮೀಪಕ್ಕೆ ಬಂದು ನೋಡುತ್ತಿರಲು, ಬ್ರಹ್ಮ ವಿಷ್ಣ್ವಾದಿ ದೇವತೆಗಳೆಲ್ಲ ಶಿವಧೋ ಎಂದು ಮೊಱೆಯಿಡಲು, ಗಿರಿಜೇಶಗೆ ಕರುಣಂಪುಟ್ಟಿ ಆಮೇಲೆ ವೀರಭದ್ರದೇವರಿಗೆ ಯಜ್ಞದಲ್ಲಿ ಸತ್ತವರನೆಲ್ಲಾ ಯೆಬ್ಬಿಸಿ ಕೃಪೆಮಾಡೆನಲು ಆಗ ದಕ್ಷಗೆ ಕುಱಿದಲೆಯು ಹತ್ತಿಸಿ ಎಲ್ಲರ ಪ್ರಾಣವನು ಕೊಟ್ಟು ನೋಡುವಲ್ಲಿ ಆ1ಗ ನ1ನ್ನಪರಾಧವನ್ನುಪಾಲಿಸಿಕೊಳ್ಳಿಯೆಂ2ದು ದಕ್ಷ ಬಿ2ನ್ನೈಸಲು ಕಾಶಿಯಲ್ಲಿ ದಕ್ಷೇಶ್ವರಲಿಂಗವಂ ಭಜಿಸು ಎನಲು ಪಾಲಿಸಿಕೊಂಡೆಹೆವೆಂದು ನಮಿಸಲು ಆಗವನು ದಕ್ಷೇಶ್ವರಲಿಂಗವಂ ಪೂಜಿಸಲು ಇತ್ತ ವೀರಭದ್ರೇಶ್ವರನು ದಕ್ಷನ ಕುಱಿದಲೆಸಹ ಕೈಲಾಸಕ್ಕೆ ಕರೆತರುವಲ್ಲಿ ದೇವತಾಸ್ತ್ರೀಯರು ನೋಡಿ ನಗುತ್ತ ನರದೇಹ ಕುಱಿದಲೆ ಇವನ ಮುಖಕ್ಕೆ ಯಜ್ಞವೇಕೆಂದು ನೋಡುತ್ತಿರೆ ಕರೆತಂದು ಶಿವನಿಗೊಪ್ಪಿಸಲು ಹರನು ಪ್ರಮಥಗಣಂಗಳು 3ಸಹ ವೀರೇಶ್ವರ3ನ ತಕ್ಕೈಸಿ ಕೊಂಡಾಡಿ ಮುಂದಾಡುತ್ತಿರಲು ದಕ್ಷ ಹೊಡಗೆಡದು ನಮಿಸಲು ವೀರೇಶ್ವರನ ಸೇರಿ ಬದುಕು ದಕ್ಷಾ ಹೋಗೆಂದನು ಶಿವನು.

## "ಕೀರ್ತಿದಿಶಾಂತ ಯೇಕದಂತನನಾಂ ಬಲಗೊಂಬೆ" ಎಂಬುದಕ್ಕೆ ಕಥೆ

ಅಸುರೇಂದ್ರನೆಂಬ ರಕ್ಕಸನು ತನ್ನ ಗುರುವಾದ ಶುಕ್ರನಂ ಕೇಳ್ದನು, ಎನಗೆ ಸಂತಾನವೆಂತಾದೀತೆನಲು, ನಿನ್ನಸತಿಯು ಮುಘದಮುನಿಯ ಬಳಿಗೆ ಕಳುಹಿದರಾದೀತು ಎನಲು, ಕಳುಹಲು ಆಗ ಮುಘದಮುನಿಯು ಅಸುರೇಂದ್ರನ ಸತಿಯು ಆನೆಗಳಾಗಿ ಕೂಡಲು, ಗಜಮುಖನೆಂಬ ರಕ್ಕಸ ಹುಟ್ಟಿದನು. ಬಳಿಕ ಅಸುರೇಂದ್ರನ ಸತಿ ವಿಭೂತಿ ಎಂಬವಳು ಗಜರೂಪಳಿದು, ಸ್ತ್ರೀಯಾಗಿ ತನ್ನಗಂಡನ ಬಳಿಗೆ ಹೋಗಿ ಸುಖದಿಂದಿರ್ದಳು. ಇತ್ತ ಗಜಮುಖನು ತೃಣಬಿಂದುವಸೇವಿಸಿ ಎರಡುಸಾವಿರವರುಷ ತಪವಿರ್ದನು ಬಳಿಕ ಶಿವನು ಪ್ರಸನ್ನವಾಗದಿರಲು, ಲಂಬಿಕಾಯೋಗದಲ್ಲಿ ನಾಲಗೆಯು ಬ್ರಹ್ಮರಂಧ್ರಕ್ಕೆನೀಡಿ ಶ್ಲೇಷ್ಮವಂ ಸೇವಿಸುತ್ತಂ ಒಂದುಕಾಲಲ್ಲಿನಿಂದು ಹತ್ತುಸಾವಿರ ವರುಷ ತಪವಂ ಮಾಡುವಾಗ ಬಿನ್ನದಯೋಗದ ಶ್ಲೇಷ್ಮದಾಹಾರಕ್ಕೆ ಶಿವನೊಲಿಯನು ಎಂದು ಶಿವತತ್ವಜ್ಞಾನಿಗಳು ಪೇಳಲು, ಪರ್ಣಾಹಾರದಿಂದುರು ತಪವಂ ಮಾಡುತ್ತಿರಲು, ಶಿವನು ಮೆಚ್ಚಿ ವರವಬೇಡು ಎನಲು, ರಕ್ಕಸರು ದೇವತೆಗಳು ನನ್ನ ಓಲೈಸುವದನು ಶ4ತ್ರುಗಳಿಂದ1 ಮರಣವಿಲ್ಲದುದನು ಪಡೆಕೊಂಡಿರುತ್ತಿರಲು, ಇತ್ತ ಬ್ರಹ್ಮನೇ ಮೊದಲಾದ ದೇವತೆಗಳು ಆ ರಕ್ಕಸನೆಡೆಗೆ ಬಂದು ತಮ್ಮ ಕಿವಿಯಹಿಡಿದುಕೊಂಡು ಟೊಂಗ

---

1. ಗಡಕ್ಷೆರ (ಗ) 2. ದು ಬಿ (ಗ) 3. ಹರೂಷ ವೀರೇಶ (ಕ, 4. ಶಸ್ತ್ರದಿಂದೆ (ಗ)

ನಿಕ್ಕಿ ನಮಸ್ಕರಿಸಿ ಹೋಗುತ್ತಿರಲು ವಾರಣಾಪುರದಲ್ಲಿ ಗಜಮುಖನು ರಾಜ್ಯವಾಳು ತ್ತಿರಲು ದೇವತೆಗಳು ರಕ್ಕಸನ ಬಾಧೆಯ ತಾಳಲಾರೆವೆಂದು ಶಿವನಿಗೆ ಮೊಱೆಯಿಟ್ಟು ಬಿನ್ನೈಸುವುದಕ್ಕೆ ಬರಲು ಈ ಸಮಯವಲ್ಲೆಂದು ನಂದೀಶ್ವರ ಬಾಗಿಲಿಂದ ಹಿಂದಕ್ಕೆ ಕಳುಹಲು ಇತ್ತ ಪಾರ್ವತೀಪರಮೇಶ್ವರರು ಶೃಂಗಾರತೋಟದ ಚಿತ್ರಮಂಟಪದ ಲ್ಲಿರ್ದು ದೇವಿಯರು ಅಲ್ಲಿ ಬರೆದಿರ್ದ ಚಿತ್ರದಾನೆಗಳ ರತಿಕೂಟವ ಕಂಡು ಶಿವಂಗೆ ತೋಱಿ ನಗುವಾಗ ವಿಘ್ನೇಶ್ವರ ಪುಟ್ಟಿದನೆಂಬುದೊಂದು ಕಲ್ಪಾಂತರ ಜನನವು. ಗಿರೀಶ್ವರನು ಉಮೆಯು ಗಜಗಜೆಗಳಾಗಿ ಕೂಡಿದಲ್ಲಿ ವಿಘ್ನೇಶ್ವರ ಪುಟ್ಟಿದನೆಂಬು ದೊಂದು ಕಲ್ಪಾಂತರ ಜನನವು. ಹರನು ಗಜಾಸುರನ ಸಂಹರಿಸಿ ಬರ್ಪಲ್ಲಿ ದೇವಿ ಯ1ರು ತಮ್ಮ ಅಂ1ಗವ ತಿಕ್ಕಿದ ತಿವುರಿಂದ ಮೂರ್ತಿಯಂ ಮಾಡಿ ಅದಕ್ಕೆ ಜೀವವನಿ ತ್ತು ಬಾಗಿಲಲ್ಲಿ ಕಾಪಿಟ್ಟಿರಲು ಹರನು ಬರುವುದ ಕಂಡು ತಡೆಯಲು ಅವನ ಶಿರ ಹೊಡೆ ದು ಭೈರವನ ಕಯ್ಯಲ್ಲು ಕೊಡಲು ದೇವಿಯರು ಶಿವಂಗೆ ಪೇಳಲು ಕೇಳಿ ಗಜಾಸುರನ ಶಿರವ ಬಾಗಿಲಕಾಯ್ದಿರ್ದವನಿಗಿತ್ತು ಅವ ಗಜಮುಖನಾದ ಗಣಪನಾದನೆಂಬು ದೊಂದು ಕಲ್ಪಾಂತರ ಜನನವು. ಇಂತಿವು ಸಹಜ ಜನನವಲ್ಲ. ಮತ್ತೆಂತೆಂದಡೆ ಪೂರ್ವ ವಾತುಲತಂತ್ರದಲ್ಲಿ, ಶಿವನ ಕಂಠದಲ್ಲಿ ವಿಘ್ನೇಶ್ವರ, ಹೃದಯದಲ್ಲಿ ಷಣ್ಮುಖ, ಭಾಳ ನೇತ್ರದಲ್ಲಿ ವೀರಭದ್ರೇಶ್ವರನು, ಇಂತೀ ಪ್ರಕಾರದಿಂದುದ್ಭವಿಸಿದರೆಂಬುದೆ ಪ್ರಸಿದ್ಧವು. ಶಿವನ ಕಂಠದಲ್ಲಿ ಪುಟ್ಟಿದ ವಿಘ್ನೇಶ್ವರಂಗೆ ಅಚಲನೆಂಬ ಭೂತವನೆ ಮೂಷಕವೆಂಬ ವಾಹನವ ಮಾಡಿ ಕೊಟ್ಟು ಆ ಗಜಮುಖನೆಂಬ ರಕ್ಕಸನ ಮೇಲೆ ಕದನಕ್ಕೆ ಕಳುಹಲು ಕಾಳಗವ ಮಾಡಲು ಅವನು ಶಸ್ತ್ರದಿಂದ ಸಾಯದಿರಲು, ಆಗ ತನ್ನ ದಂತವ ಕಿತ್ತು ಅವನೆರ್ದೆಗಿಡಲು, ತಟ್ಟುಚ್ಚಿ ಅವ ಸಾಯಲು, ಆ ದಂತವು ಸ್ವಾದೂದಕ ಸಮುದ್ರ ದಲ್ಲಿ ಸ್ನಾನವ ಮಾಡಿ ವಿಘ್ನೇಶ್ವರನ ಹಸ್ತಕೆ ಬಂದುದು. ಬಳಿಕವನ ಜೀವವು ವಿಘ್ನೇ ಶ್ವರಂಗೆ ಹಾವುಗೆಯಾಯಿತ್ತು. ಬಳಿಕೊಂದು ದಿನದಲ್ಲಿ ಶಿವನು ಗಜಮುಖ ಷಣ್ಮು ಖರ ಮುದ್ದಿಸುತ್ತ ಚೂತಫಳವ ಪಿಡಿದಿರಲು, ಇಬ್ಬರು ಬೇಡಲು, ಬ್ರಹ್ಮಾಂಡವ ಬಳಸಿ ಮುಂಚೆ ಬಂದವನಿಗೆ ಕೊಡುವೆನೆನಲು, ಷಣ್ಮುಖ ಭೂಪ್ರದಕ್ಷಿಣೆಗೆ ಹೋಗೆ ಗಜ ಮುಖನು ಶಿವನ ಬಳಸಿ ಬಂದು ಹಣ್ಣ ಬೇಡಲು ಶಿವನು ಮೆಚ್ಚಿ ಹಣ್ಣನಿತ್ತು ಅನಂತ ಕೋಟಿದೇವತಾದಿಗಳಿಗೆಯೂ ಮನುಮುನಿದಾನವಾದಿಗಳಿಗೆಯೂ ಚೌಷಷ್ಟಿಕಳಾ ವಿದ್ಯವ ಕಲಿವುದಕ್ಕೆ2 ವಿದ್ಯ2 ಪ್ರದಾಯಕನಾಗಿ ವೇದವೇದಾಂತಾದಿಗಳು ನಿನ್ನಾ ರಾಧಿಸಿದವರಿಗೆ ಕೊಡುತ್ತಿರು, ಎಂದು ಶಿವನು ವಿಘ್ನೇಶ್ವರಂಗೆ ತನ್ನ ಬೋಧಾಪ್ರ ಸಾದಮಂ ಕೊಟ್ಟು ಗಣಪನೆಂಬ ನಾಮುಪಿಡಲು ಸಕಲ ದೇವತಾದಿಗಳೆಲ್ಲ ವಿನಾಯಕನ ಆರಾಧಿಸಿ ವಿದ್ಯೆಗಳ ಪಡೆವುತ್ತಿರ್ದರು.

1. ರು ಅಂ (ಕ) 2. ಯ ವಿದ್ಯಾ (ಗ)

## "ನಂದಿಕೇಶ್ವರ ಭೃಂಗಿಸ್ಕಂದ ಮುಖ್ಯಾಮರಾಳಿಯೆನ್ನ ಹೃತ್ಕಮಲದೊಳು ನಿಂದು" ಎಂಬುದಕ್ಕೆ ಕಥೆ

ಸೊನ್ನಲಾಪುರದಲ್ಲಿ ಸಿದ್ಧರಾಮೇಶನೊಪ್ಪುತ್ತಿರಲು ಶಿವಭಕ್ತ1ರ1 ಸುಖಗೋಷ್ಠಿಪ್ರಸಂಗದಿಂ2ದ2 ಕೇಳ್ದರು. ನೊಸಲ ಕಣ್ಮಕುಟವು ತನಗೆ ತಾನೆ ಹುಟ್ಟಿ ಅನ್ನಪಾನಾದಿಗಳ ಹಂಗಿಲ್ಲದೆ ನಿಂದರೆ, ನೆಳಲಿಲ್ಲದೆ ನಡೆದರೆ, ಹೆಜ್ಜೆಯಿಲ್ಲದೆ ಚರಿಸಿ ಸಮಾಧಿಯಂತ್ಯದಲ್ಲಿ ಕೈಲಾಸಕ್ಕೆ ಹೋಗಿ ಪ್ರಮಥರ ಸದ್ಗೋಷ್ಠಿಯಲ್ಲಿ ತತ್ವಾರ್ಥಮನರಿದು ಮರಳಿ ಧರಗೆ ಹೋಗುತ್ತ ಬರುತ್ತ ಇದ್ದಿರಿ. ಅಲ್ಲಿ ನೀವು ಪ್ರಥಮ ನಾಯಕ ನಿರ್ಮಲ ಬಸವನಂ ಕಂಡಿರೆ? ಶಿವಭಕ್ತಿ ಸಮತೆಯೆಲ್ಲಿಪ್ಪುದಲ್ಲಿ ತಪ್ಪದಿರ್ಪನೆಂದು ಕೇಳ್ದೆವು ಎನಲು, ಆತನ ನೆಲೆಯ ತಿಳಿದು ಬಂದು ಪೇಳ್ವೆನೆಂದು ಸಿದ್ಧರಾ3ಮೇಶ್ವರ3 ಕೈಲಾಸಕ್ಕೆಯ್ದಿ ಸಕಲ ಪ್ರಮಥರಂ ಶಿವನಂ ಕಂಡೆರಗಿ ಪರಶಿವನೆ, ಪ್ರಮಥಲೋಕದಲ್ಲಿ ಬಸವೇಶ್ವರನುಂಟೆ ಕಂಡಿರೆ ಎಂದು, ಭೂಲೋಕದ ಭಕ್ತರು ಎನ್ನ ಕೇಳ್ದರು. ಬಸವನಿರವಂ ಎನಗೆ ಪೇಳಿ ಎನಲು, ಬಸವನಿಲ್ಲದ ಭುವನ ಭವನವಾವುದು? ಭಕ್ತರೊಳು ಜಂಗಮದೊಳು ಪ್ರಮಥರೊಳು ನನ್ನೊಳಗಿಲ್ಲವೆಯೆಂದು ಶಿವನು ತವುದರವಂ ಬಗೆದು ತೋರುವಲ್ಲಿ ಶಿವನೋಲಗದ ವಿಸ್ತಾರವೆಲ್ಲವು ಶಿವನ ಹೃತ್ಕಮಲದಲ್ಲಿರ್ಪ ಬಸವಣ್ಣನೋಲಗವಾಗೊಪ್ಪುತ್ತಿರಲು ಕರಿಮುಖ ಶರಭಮುಖ ಶಾರ್ದೂಲಮುಖ ಸ್ಕಂದ ಭೃಂಗಿ ವೀರಕ ವೀರಭದ್ರಾದಿ ಪ್ರಮಥರು ಹರಿಯಜೇಂದ್ರರು ಮನುಮುನಿ ಯಕ್ಷ ರಾಕ್ಷಸ ನರ ಸುರ ಗರುಡ ಗಂಧರ್ವರು ಬಸವಂಗೆರಗಿ ಕೀರ್ತಿಸಲು, ರಾಮಯ್ಯ ನೋಡುತ್ತಿರೆ ಶಿವನೆಂದನು. ಬಸವಾ ಮರ್ತ್ಯದ4ಲ್ಲಿ ಕಪ್ಪುಗೊರಲನ ಭ4ಕ್ತರುಂಟೆ? ಸಂಸಾರ ಸುಖವೆ? ಎನಲು, ಭಕ್ತರಾರು ಇಲ್ಲ ಶಿವಭಕ್ತರೇ ಕರ್ತರು, ನಾನೇ ಭೃತ್ಯನು; ಶರಣರುಂಡೊಕ್ಕ ಶೇಷಪ್ರಸಾದವ ಸವಿವ ಸುಖವಾದರೆ ಸಂಸಾರವೆ ಲೇಸು ಎನಲು, ಗಿರಿಜೆ ನೋಡು ಎನಲು, ಸಿದ್ಧರಾಮೇಶ ಕಂಡು ಶಿವಂಗೆರಗಿ ಭೂಲೋಕಕೆಯ್ತಂದು ಶಿವನು ತನಗೆ ತೋರಿದಂತೆ ಸಿದ್ಧರಾಮಯ್ಯನು ತನ್ನುದರವಂ ಬಗೆದು ಭಕ್ತರಿಗೆ ತೋರುವಲ್ಲಿ ಸ್ಕಂದ ಭೃಂಗಿ ವಿರೇ5ಶ5 ಸಕಲ ಪ್ರಮಥರು,ದೇವತಾಸುರರು ರುದ್ರಗಣ ಪ್ರಮಥಗಣ ಅಮರಗಣ ಮೊದಲಾದ ಪ್ರಮಥರಿಂದೊಪ್ಪುತ್ತ ಬಸವಣ್ಣ ಸಿದ್ಧರಾಮಯ್ಯನ ಹೃದಯದಲ್ಲಿ ಒಪ್ಪುತ್ತಿರಲು ಸಕಲಭಕ್ತರು ಕಂಡು ಶಿವನ ನೆನವ ಭಕ್ತರ ಹೃದಯದೊಳು ಬಸ6ವೇಶ್ವರ6 ಮೊದಲಾದ ಸಕಲ ಪ್ರಮಥರು ಇರ್ಪುದು ತಪ್ಪದೆಂದು ಕೊಂಡಾಡುತಿರ್ದರು.

---

1. ರು (ಗ) 2. ದಿಂ (ಗ) 3. ಮಯ್ಯ (ಗ) 4. ಲ್ಲಿ ಭ (ಗ) 5. ಶ್ವರ (ಗ) 6. ವಣ್ಣ (ಗ)

## " ಈ ಕೃತಿಯೊಳು ತಪ್ಪೊಂದಿ1ಲ್ಲವೆನೆ ನ1ಡೆಸುವುದು" ಎಂಬುದಕ್ಕೆ ಕಥೆ

ಆಂಧ್ರದೇಶದ ಓರುಗಲ್ಲೆಂಬ ಪಟ್ಟಣದಲ್ಲಿ ಪ್ರತಾಪರುದ್ರನೆಂಬ ಅರಸಿರಲು, ಅಲ್ಲಿ ಏಕದಂಡಿ ದ್ವಿದಂಡಿ ತ್ರಿದಂಡಿಯೆಂಬ ಮೂವರು ವೈಷ್ಣವ ಕವಿಗಳು ಸಲಕ ವಿದ್ವಾಂಸರು ಮಾಡಿದ ಪದ್ಯವಂ ಮೂಱುವೇಳೆ ಓದಿಸಿ ನಿನ್ನ ಪದ್ಯ ತಪ್ಪೆಂದು ಆ ಪದ್ಯವಂ ಪಾಠವಂ ಮಾಡಿ ತಾವು ಮೂವರು ಓದಲು, ನನ್ನ ಪದ್ಯವ ನೀನೆಲ್ಲಿ ಕಲಿತೆಯೆಂದು ಸಮಸ್ತ ಕವಿಗಳ ಆ ರಾಜನಲ್ಲಿ ಮನ್ನಣೆಯಿಲ್ಲದಂತೆ ಸೋಲಿಸುತ್ತಿರಲು; ಇತ್ತ ವಿದ್ಯಾನಗರವೆಂಬ ಪಟ್ಟಣದಲ್ಲಿ ಉಭಯಕವಿಶರಭಭೇರುಂಡನೆಂಬ ಬಿರಿದಂಕನಾದ ರಾಘವಾಂಕ ಪಂಡಿತನೆಂಬ ಶಿವಕವೀಶ್ವರನು ಆ ವಾರ್ತೆಯಂ ಕೇಳಿ ಕವಿಮುಖಕವಾಟವೆಂಬ ಪದ್ಯಶಾಸ್ತ್ರವಂ ರಚಿಸಿ ಓರುಗಲ್ಲಿಗೆ ಪೋಗಿ ಆ ರಾಯನ ಸಭೆಯಲ್ಲಿ ಆ ತ್ರಿದಂಡಿಗಳೆಂಬ ವಾದಿಗಳ ಮುಂದೆ ಓದಲು, ಅವರಿಗೆ ಮೂಱುವೇಳೆ ಓದಿದರೆಯೂ ಪಾಠ ಬಾರದಿರಲು ಮತ್ತೆ ಓದಿಸಲು, ಮತ್ತೆಯೂ ಬಾರದಿರಲು, ರಾಘವಾಂಕ ಪಂಡಿತ ನಿನ್ನಪದ್ಯ ತಪ್ಪು ಎನಲು, ಅದಕೆ ಅರ್ಥಸಮುಸ್ಯಕ್ಕೆ ಪದ್ಯವಂ ಕೂಡಿಸಿ ಅರ್ಥೈಸಿಯೆನೆ ಆ ಮೂವರಿಗೆಯೂ ಬಾರದಿರಲು, ಪ್ರತಾಪರಾಯನು ರಾಘವಾಂಕಪಂಡಿತರಿಗೆ 2ಕರ2 ವಮುಗಿದು ವಂದಿಸಿ ನೀವು ಅರ್ಥೈಸಿಯೆನೆ, ಆ ತ್ರಿದಂಡಿಗಳು ನಮ್ಮ ಪದ್ಯವ ತಪ್ಪೆಂದರು, ನಮ್ಮದು ತಪ್ಪುಯೆಂದು ಹೊಡಗೆಡಸಿ ಹೊಱಡಿಸಿಬಿಡುಯೆನ3ಲುಂ ಹಾಂಗೆ3 ತಪ್ಪುಯೆನಿಸಿ ಸಭೆಯಿಂದ ಹೊಱಡಿಸಿದನು. ಆ ರಾಘವಾಂಕ ಪಂಡಿತರು ಪೂರ್ವಪದ್ಯವ ಕೂಡಿ ಅರ್ಥೈಸಲು ಪ್ರತಾಪರಾಯನ ಸಭೆಯಲ್ಲಿರ್ದವರೆಲ್ಲಾ ಕೀರ್ತಿಸಿದರು. 'ಉಭಯಕವಿಶರಭಭೇರುಂಡ ರಾಘವಾಂಕ ಪಂಡಿತನು' ಎಂಬ ಶಿವ ಕವೀಶ್ವರನ ಕವಿತ್ವದಲ್ಲಿ ತಪ್ಪಿಲ್ಲವೆಂದು ಸಮಸ್ತ ಸಮಯದ ಕವಿಗಳೆಲ್ಲಾ ಕೀರ್ತಿಸಿದರು.

## "ಬಾಣ ಮಯೂರನ ಜಾಣು" ಎಂಬುದಕ್ಕೆ ಕಥೆ

ಭೂಲೋ4ಕದಲ್ಲಿ ಕಂದಾರವೆಂಬ ಪಟ್ಟಣದೊ4ಳು ನಂದಚಕ್ರವರ್ತಿ ರಾಜ್ಯವ ನಾಳುವಾಗಳು, ಆತನ ಓಲಗದಲ್ಲಿ ಬಾಣ ಮಯೂರ ಕಾಳಿದಾಸ ವರರುಚಿ ಮೊದಲಾದ ಮುನ್ನೂಱು ಅಱುವತ್ತು ಕವಿಗಳಿರುವಲ್ಲಿ, ಬಾಣನು ಕಾಳಿದಾಸನು ಸ್ವೈಪಾಗಿ ಮಯೂರನ ಮೇಲೆ ಮಚ್ಚರವ ಮಾಡುತ್ತಿರಲು, ನಂದರಾಜನೋಲಗದಲ್ಲಿ ಕವಿತ್ವದ ಹುರುಡು ಮನದೊಳಗೆ ಹೆಚ್ಚಿ ತಾವಿಬ್ಬರು ಕೂಡಿ ಏಕಾಂತದಲ್ಲಿ ನಂದರಾಜನ ಕೂಡೆ ಹೇಳಿದರು. ಕವಿ ಮಯೂರನ ಇಲ್ಲಿ ಪೊಗಿಸಬೇಡೆನಲು, ರಾಜನೇಕೆಂದು ಕೇಳಲು, ಅವನು ಕುಷ್ಠರೋಗಿ ಎನಲು ರಾಜ ಕೇಳ್ದು ಕೌತುಕವಂ ತಾಳ್ದು ನೋಡುವೆನೆಂದು ನಾಳೆ ಜಲಕೇಳಿಗೆ ಬನ್ನಿ ಎಂದು ಸಾರಿಸುತ ಸಂಭ್ರಮಿಸುವನಿತಕ್ಕೆ ಬಾಣಕವಿ

---

1. ಲ್ಲನ (ಗ) 2. ಹಸ್ತ (ಗ) 3. ಲುಅಹಾ (ಗ, 4. ಕದೊ (ಕ)

ಕಾಳಿದಾಸರ ತಂತ್ರವೆಂದಱಿದು ಮಯೂರಂ ಚಿಂತಿಸುತ್ತಿರಲು, ಸೂರ್ಯನಸ್ತಮಿಸಲು:
ಕತ್ತಲೆಯಾಗೆ ಗಿರಿಜೆಯ ನಗೆಯಂತೆ ಚಂದ್ರನ ಬೆಳಗಿರಲು, ನಿದ್ರೆಯಿಲ್ಲದೆ ಮಯೂರಂ
ಚಿಂತೆಯೊಳಿರ್ದು ಸೂರ್ಯನಿಂದೆನ್ನಂಗದ ಕುಷ್ಠವ ಕಳೆವೆನೆಂದು ನಿರ್ಮಳಗುಣವ
ನಿಶ್ಚೈಸುತ್ತಂ ಬೆಳಗುಜಾವದಲ್ಲಿ ಎದ್ದು ಗಳಪೂರ ನೀರೊಳು ನಿಂದು ರವಿಯತ್ತಭಿ
ಮುಖನಾಗಿ ವಂದಿಸಿ ಸೂರ್ಯಮಂತ್ರವಂ ನೆನೆದು ಮೂಱುಲೋಕಕ್ಕೆ ಬೆಳಗುಳ್ಳಾತನೆ
ಜಗಚ್ಚಕ್ಷುವೆಂಬ ಮಹಿಮಾಧ್ಯಯಿಂದು ಸೂರ್ಯಶತಕವನೋದಿ ನುತಿಸುತ್ತಿರಲ
ಆಗಸೂರ್ಯ ಬಂದೇನುಬೇಕು ಎನಲು, ನನ್ನ ಕುಷ್ಠರೋಗವ ತೊಲಗಿಸಲು ನನ್ನ ಕೈಲಾಗ
ಗದು ನಿನ್ನ ಮೈ ಮಿಂಚಾಗುವಹಾಂಗೆ ನಾಳೆ ಒಂದುದಿನಕ್ಕೆ ಒಂದುಕಿರಣವ ಕೋ
ಎಂದು ಕೊಟ್ಟುಹೋಗಲು, ಮೈಮಿಂಚಾಗಿ ಸುವರ್ಣದಂತಿರಲು, ಇತ್ತ ಬೆಳಗಾಗಲು
ನಂದರಾಜನು ಓಕುಳಿಗುಪ್ಪಸವನೆಲ್ಲರಿಗೆಯೂ ಇತ್ತು ಮಯೂರಗಿತ್ತು ಸಿಂಗರವಾಗಿ ನಂ
ದ ರಾಜನೆಯ್ತಂದು ನೀರಾಟದಲ್ಲಿ ಮಯೂರನಂಗವ ನಱಿಯಬೇಕೆಂದು ರಾಜನಿಲ್ಲೆಂ
ದು ನೀರಪೊಯ್ಯಲು ಪೊಯ್ಯಿಪೊಯ್ಯೆಂದು ನಿಲ್ಲಲು ನೊಂದೆನೆಂದು ಮಯೂರನ ಸಂತೈ
ಸಿ ಬಾಸುಳವ ನೋಡುವ ನೆಪದಿಂದ ಕುಪ್ಪಸವ ಕಳೆದು ನೋಳ್ಪಾಗ ಮಯೂರನಂಗ
ಸುವ[1]ರ್ಣವಾ[1]ಗಿರೆ ನಂದನೃಪ ಮನೆಗೆ ಬಂದು ಕರೆ ಕಾಳಿದಾಸ ಬಾಣರೆಂದು
ಕೋಪದಿಂ ಹುಸಿಗಲಸಿ ನಂದ ನೊಂದು ಸಂತಾಪಿಸುತ ಕರೆಕರೆಯೆನೆ ಬಾಣ ಬಂದು
ಸಭೆಯ ಮುಂದಿರಲು, ಮಯೂರನ ಮೈ ಸುವರ್ಣವಾಗಿರೆ ಪ್ರಸಿಯ ನುಡಿವರೆಯೆನೆ
ದುರ್ಬಣ್ಣಮುನ್ನುಂಟು ರವಿಯಿಂದ ಇರುಳು ಪಡೆದನೆನೆ ಬಾಣನೆಂದಂತೆ ಮಯೂರ
ನಹುದೆನಲು, ಒಂದಿರುಳಿಗೆ ಸೂರ್ಯನಿಂದ ಪಡೆದವರಾರು? ಅರಿದರಿವೆಂದು ಬಾಣನ
ಮುಂದೆ ಮೂದಲಿಸುತ್ತಿರಲು, ಘುಡುಘುಡಿಸಿ ಬಾಣ ಕರವ ಕಡಿದು ಸಭೆಯ ಮುಂದಿರಿಸಿ
ಸರ್ವಜನ ನೋಡುತ್ತಿರೆ ಬಾಣ ಪೊಗಳ್ದನು. ದೇವ ಜಯಜಯ ಮಹಾದೇವ ಕರುಣಿ
ಪುದು, ದೇವ ಭೀಕರ ಮಹಾಕಾಳ ಕರುಣಿಪುದು, ದೇವ ಘುಳುಘುಳಿಪ ತ್ರಿಶೂಲಧರ
ಕರುಣಿಪುದು, ದೇವ ಗಂಗಾಮೃತ ಜಟಾಭಾರ ಕರುಣಿಪುದು, ದೇವ ತ್ರಿಲೋಚನ
ಮಹಾಗುರುವೆ ಕರುಣಿಪುದು ಎಂದು ಪೊಗಳಲು ಶಂಕರಂ ಸುಮ್ಮನಿರಲು ಅಂಬಿಕಾ
ನಿತಂಬಬಿಂಬಲಂಪಟ ಹಸ್ತನೆಯೆಂಬ ನುಡಿಗೇಳಿ ಗಿರಿಜೆಯರು ಕೋಪಿಸಿ ಅವ ಬಂಡು
ಗೆಲವುಕತ್ತಹನೆಯೆಂದು ಶಿವಗೆ ಬಿನ್ನೈಸಲು, ಶಂಕರ ಬಂದು ಎಲೆ, ಬಾಣ ಹೀಗೇಕೆ
ಬಂಡುಗೆಲವುತ್ತಿದ್ದಿ ಎನಲು, ಮೊಂಡಮೋಟರಿಗೆ ಕುರುಡಕುಂಟರಿಗೆ ಬಂಡುಗೆಲ
ವುದು ಸಹಜವೆನಲು, ನಸುನಗುತ ಶಂಕರನು ಮೆಚ್ಚಿ ಹಸ್ತಂಗಳಂ ಕೊಟ್ಟು ಮತ್ತೇನು
ಬೇಕು ಎನಲು, ಮೋಟಮೊಂಡರಿಗೆ ಕೈಕಾಲ್ಗಳಕೊಡುವ ವರವನೆ ಕೊಡಿ ಎನಲು,
ಕಡೆಯಲ್ಲಿ ನಿಮ್ಮಡಿಯೊಳಿರ್ಪ ನಿಜಪದವ ಕೊಡಿಯೆನಲು, ಕೊಟ್ಟು ಮೂಱುಲೋಕ
ದೊಳಿರ್ಪ ಸೂರಿಜನರು ಬಾಣಕವಿಯ ವಾಕ್ಕನೆ ಬಣ್ಣಿಪುದು, ಎಂಬ ಬಿರಿದನಿತ್ತು

1. ರ್ಣ ಛಾಯನಾ (ಗ)

ಶಂಕರ ಕೈಲಾಸಕ್ಕೆಯ್ದಲು, ಬಳಿಕ ಬಾಣನು ಅನಂತಕೋಟಿ ಪದ್ಯಗಳಿಂದ ಶಿವನ ಸ್ತುತಿಸುತ್ತಿರಲು, ನಂದ ಕೇಳಿ ಬಾಣಂಗೆ ಪೊಡವಂಟು ಪೊಗಳಿ ವಂದಿಸುತ್ತ ಮತ್ತೆ ಗಜದ ಮೇಲಿರಿಸಿ ಮೆಱೆಯಿಸುತ್ತ ಕೆಲಂಬುದಿನವಿರುತ್ತಿರಲು ಶಿವನೊಲಿದು ಬಾಣನ ಭಕ್ತಿಗೆ ಮೆಚ್ಚಿ ಕೈಲಾಸಕೊಯ್ದನು.

## "ಮಯೂರನ ಜಾಣ್ಮೆ" ಎಂಬುದಕ್ಕೆ ಕಥೆ

ಬಾಣ ಕರವ ತಱಿದು ಪಡೆದುದ ಕಂಡು ನಂದನ ಸಭೆಯೊಳು ಕಾಳಿದಾಸ ಮೊದಲಾದ ಕವಿಗಳು ರಾಜನಿಯೋಗದವರೆಲ್ಲ ಹರಕವೀಶ್ವರ ಬಾಣನೆಂದು ನುತಿಸುತ್ತಿರಲು, ಮಯೂರಂಗೆ ವಾಸೆಪಂಥ ಹುಟ್ಟೆ ಹರಿಯಿಂದಲೆನ್ನಂಗ ಸುವರ್ಣವಾಯ್ತು ಒಂದುದಿನಕೆ ಹರನಿಂದ ಪರವಿಲ್ಲೆಂಬುದೇನುಕಾರಣವೆಂದು ಮಯೂರ ಸೂರ್ಯನ ನುತಿಸಿ ಕೇಳಲು ಸೂರ್ಯನೆಂದನು. ಮುನಿಕೊಟ್ಟ ಶಾಪದಿಂದೆನ್ನಂಗದ ಕುಷ್ಠವು ಬಾಲಾರ್ಕೇಶ್ವರನಿಂದ ನಿಜದೇಹವ ಪಡೆದನೆನೆ, ಅದನೆನಗೆ ಕೊಡು ಎನಲು, ನಾ ಕೊಡಲಾರೆನೆನಲು, ಹರಿಭಕ್ತಿಯಂ ಬಿಟ್ಟು ಬಾಣನೆನಗೆ ಪರಮಗುರುವಾದನೆಂದು ನಂಬಿ ಮಯೂರನು ಪರಭಕ್ತಿಯಿಂದ ಪರೆವುದು ಎನ್ನಂಗದ ಭವರೋಗವೆಂಬ ಕುಷ್ಠೆಂದು ಶಿವಭಕ್ತಿಪ್ರಯುಕ್ತನಾಗಿ ಬೆಳಗಿಗೆ ಏಳುಘಳಿಗೆಯೊಳಿದ್ದು ಭಸ್ಮರುದ್ರಾಕ್ಷಿ ಪಂಚಾಕ್ಷರಿಯುಕ್ತನಾಗಿ ಸರ್ವಾತ್ಮಸಿತಗಾತ್ರ ಎಂದು ಒಂಭತ್ತುಪದ್ಯವಂ ನುತಿಸುತ ಶಿವನತಿಯುದಾರನೆಂಬುದಂ ತೋರ್ಪಂತೆ ಏಳುಕಾಲಿನ ನೆಲುವಂ ಕಟ್ಟಿ ಕೆಳಗೆ ಅಲಗಿನವೊನೆ ಮೇಲಾಗಿನಿಲ್ಲಿಸಿ ನೆಲುವನೇಱಿ ವರದಹಸ್ತ ಅಭಯಕರಾಯಾ ಕಾಯಿಕೀಯಿ ಕರುಣಾನಿಧಿಯೆ ಎಂದು ನೆಲುವಿನ ಕಾಲಂ ಕೊಯ್ಯೆ ಶಿವ ಮೆಚ್ಚಿ ಬಂದು ಮೇಲೆ ಮಸ್ತಕವಂ ವರದಕರದಿಂ ಪಿಡಿದು ಕೆಳಗೆ ಅಲಗಿನಮೇಲೆ ಬೀಳ್ದಂತೆ ಅಭಯಕರದಿಂಪಿಡಿದು ಮೆಚ್ಚಿದೆ ಬೇಡೆಂದು ನುಡಿಸಲು ನುತಿಸುತ್ತ ನುಡಿಯದೆ ಮತ್ತೆ ನೆಲುವಂ ಕೊಯ್ಯಲು, ಕರವ ಪಿಡಿದು ಕಡೆ1ಗೈ1ದು ಮಯೂರಂಗೆ ಶಿವಭಕ್ತಿ ಪ್ರಭಾವನೆಯನಿತ್ತು ನಿತ್ಯನಿರ್ಮಳಾಂಗವ ಮಯೂರಂಗಿತ್ತು ಕೈಯಿತ್ತ ಬಾಣ, ಮೈಯಿತ್ತ ಮಯೂರನೆಂದು ಧನದಸಖ ಕೊಂಡಾಡುತ್ತ ಗಣಪದವಿಯನೀಯಲು, ಕಾಳಿದಾಸ ನಂದಭೂಪ ಮೊದಲಾದವರು ಕೊಂಡಾಡುತ್ತಿರಲು, ಶಿವನ ನುತಿಸಿದವರು ಶಿವನ ದೇಹದಂ2ತೆ ಶಿ2ವಶರೀರಿಗಳಾದರು ಎಂದು, ದೇವಗಣ ಕೊಂಡಾಡುತ್ತಿರಲು ಮಯೂರನು ಶಿವನ ಸ್ತುತಿಯಿಂದ ಶಿವನೊಳು ಬೆರೆದನು.

## "ಗುರ್ಜರನಬಿನ್ನಾಣ" ಎಂಬುದಕ್ಕೆ ಕಥೆ

ಗುರ್ಜರದೇಶದ ಮಂಗಳಪುರಿಯೆಂಬ ಪಟ್ಟಣದಲ್ಲಿ ಕುಮಾರಪಾಲಗುರ್ಜರ ಉದ್ಭಟದೇವನೆಂಬುಭಯನಾಮದಿಂದೊಪ್ಪುತ್ತಿರಲು, ಆತನಸತಿ ಮಂಗಳಾಂಬಿಕೆಯು ತಾನು

---

1. ಗೆಕೆಗೆ (ಗ) 2. ತೆ ಶಿವಶರೀರದಂತೆ ಶಿ (ಗ)

ರಾಜ್ಯವಾಳುತ್ತ ಶಿವಭಕ್ತಿಯುಕ್ತರಾಗಿ ಕರಣಂಗಳುಂ ಶಿವನುಪಕರಣಂಗಳಾಗಿ ಇಂದ್ರಿಯಂಗಳೆ ಪರಿಚಾರಕರಾಗಿ ಹೃದಯಕಮಲವೆ ಸೆಜ್ಜೆಯಾಗಿ ನಿರ್ಮಲಮನವೆ ಕುಸುಮವಾಗಿ ಪ್ರಾಣವೆ ಶಿವಲಿಂಗವಾಗಿ ಪರಿಣಾಮವೆ ಅಮೃತನೈವೇದ್ಯವಾಗಿ; ಇಂತು ಶಿವಪೂಜೆಯಂ ಹಗಲಿರಳು ಮಾಡುತ್ತಿರೆ ನೋಟಮಾಟವೆಲ್ಲ ಶಿವನೊಳುಕೂಡಿ ಕೂಟಬೇಟವೆಲ್ಲ ಶಿವನೊಳು ಬೆರೆದು ಮಾಡಿದುದೆಲ್ಲ ಪೂಜೆ, ಆಡಿದುದೆ1ಲ್ಲ ಸಕಲಸ್ತು1ತಿ ನೆನೆದುದೆಲ್ಲ ಶಿವಧ್ಯಾನ ತನುಕ್ರಿಯೆ ಈಶ್ವರನೊಳಡಗಿ ಭಕ್ತಿಪೂರ್ತಿತಾನಾಗಿ ಶಿವಭಕ್ತಿಸಾಮೂರ್ತಿಯುಕ್ತನಾಗಿ ಶಿವನಲ್ಲಿ ಸಮರಸವುಳ್ಳಾತನಾಗಿರುತ್ತುಂ ಉದ್ಭಟದೇವನು ತನ್ನಮನೋವಲ್ಲಭೆಯೆನಿಪ್ಪ ಸತಿಯುಂ ತಾನುಂ ಸಂತಸದೊಳಿರುತ್ತಿರ್ದು ನೆತ್ತವಾಡುತ್ತುಂ ಶಿವತತ್ವ2ವಂ ಗ2ಣಿಸುತ್ತುಂ ಆಡುತಾಡುತ್ತಂ ಉದ್ಭಟದೇವಂ ನಸುನಗಲು ಸತಿ ಕಂಡು ಸೆಡೆದಳು, ಸುಯ್ದಳು, ಮನದೊಳು ಮುನಿವುತ್ತಂ ಕರಗಿ ಕಂದುತ್ತಂ ಮನವಿಳಿದು ಲೆತ್ತದಹಾಸಂಗಿಯನಂತಿರಿಸಿ ಲಜ್ಜೆನಾಚಿಕೆಯುಂ ಮೊಳೆವುತ್ತಿರೆ ಇಂತೆಂದಳು. ನೆತ್ತವನಾಡುವುದು ಭಕ್ತನೀತಿಯಲ್ಲವೊ, ಸತ್ತಸಾರಿಯೆ ಬಂದಿತ್ತೆಂದೊ, ನೆತ್ತವಹಾಕುತ್ತ ತಪ್ಪಿದೆನೆಂದೊ ಏತಱಲ್ಲಿ ಕುಂದ ಕಂಡು ನೀವು ನಗುತ್ತಿದ್ದೀರಿ? ಎನೆ ಕಮಲಮುಖಿ, ನಿನ್ನ ಕಾರಣವಲ್ಲ. ನಮ್ಮ ಶರಣರ ಕಾರಣ ನಗೆ ಬಂದಿತ್ತೆನಲು, ಸೌರಾಷ್ಟ್ರದಲ್ಲಿರ್ದೋಹಿಲ ದೇವನು ಘೋರತಪವನಾಚರಿಸಿ; ತನ್ನ ತನುಧೂಪವಂ ಶಿವಂಗಿತ್ತು ಶಿವನನೊಲಿಸಿ ತಾನೊಬ್ಬನೆ ದೇಶಿಕನಂತೆ ಪೋಗುತ್ತಿರ್ದು ಶಿವಪುರಿಗೆ ಘಂಟೆಯೊಳು ನಾಲಗೆ ಬಿದ್ದುದನಱಿಯದೆ ನಂಟರು ನಲ್ಲರು ನೋಡುತ್ತಿರಲು, ಪೋಗುವುದೇನರಿದು, ಕೆಲವೂರ್ಗಳಿಲ್ಲವೆ, ಜನರನಿ3ಬ್ಬ3ರನೊಯ್ಯಲಿಲ್ಲವೆ ಎನುತ ಮತ್ತೆ ನಗಲು, ಸತಿಯನಿತಱಿ3ೊಳೆ ಸುದೂರದೊಳಾವ ಹವಣಿನೊಳೋಹಿಲದೇವ ಪೋಗುತಿರ್ದಪನುಧೀಶಾತೋಱು ಎನಲು ಆಕಾಶದೊಳು ಕೈಘಂಟೆವಿಡಿದು ಶಿವಭಾವದೊಳು ಪೋಗುತ್ತಿರ್ದಪನದೆ ಎನಲು ಸತಿ ಕಂಡು4ಅ4ಷ್ಟಾಂಗವೆಱಗಿ ಪತಿಗೆಂದಳು. ಒಲಿದಡೆ ಕೊಂಡಾಡಿ; ಅಲ್ಲದೆಡೆ ಸುಮ್ಮನಿರಿ. ಆತ ಯೋಗಿ, ನೀವು ಭೋಗಿ, ಜಱಿ3ವರೆ ಆತ ಸುರಲೋಕದ ತಪಸಿ ನೀ ನರಲೋಕದರಸು, ನೀ ಕಾಮಿಯಾತ ನಿಷ್ಕಾಮಿ, ಜಱಿ3ಯಲೇನುಕಾರಣವೆನಲು ಗುರ್ಜರದೇವ ನಗಲು ವನಿತೆಯೆಂದಳು. ನಗುತ ಜಱಿ3ವ ಶಿವೈಕ್ಯನೀಱ5ಹೆಗದೆಯಿದೆ5ಯೆಲಾ ಎನಲು, ಶಿವೈಕ್ಯರಿಗೆ ಪರಲೋಕವೇನು? ನರಲೋಕವೇನು? ಭಕ್ತಿಮರ್ಮವ ನೀನೆತ್ತಬಲ್ಲೆ? ಅಬಲೆಎನಲು, ನಾನಱಿಯೆ ನೀನಱಿವಂಗಡಾ! ಎಂದು, ಏಸು ದಿವಸಕ್ಕೆ ಎನಿಬರಂ ಕೊಂಡೊಯ್ದಪೆಯೆನೆ,? ಇಂದು, ಈಗಳೆ, ಈತೆಱದೊಳೆ, ಈನಾಡ ಮಂದಿ ಈಪುರವಂ ಕೊಂಡೊಯ್ದಪೆಂ. ಇಂದುಮುಖಿ ನೀ ನೋಡೆನುತ ಗುರ್ಜರದೇವನೆ6ನೆಕೊಂಡೊಯ್ವೆಂ ಕೊಂ6ಡೊಯ್ವೆನೆಂಬ ನುಡಿಯನೆ ಕೇ7ಳ್ದಂ7 ಕಂಡಱಿಯೆನೆನೆ

1. ಲ್ಲಸ್ತು (ಗ) 2. ವಗು (ಗ) ಳ್ತಿ (ಗ) 3. ಬ (ಗ) (ಗ) 4. ಸಾ (ಗ)5. ಹೋಗದೆಯಿರೆ (ಗ)6. ನೆಕೊಂ (ಗ) 7. ಳ್ದಿ (ಗ)

ಉದ್ಘಟನ ನುಡಿಬೇಱೆ ನಡೆಬೇಱೆಯೆ? ನಾಳಿನ ಸೋಮವಾರ ಕೈಲಾಸಕ್ಕೆ ಪಯಣವೆಂದು ಸುತ್ತಲೈಗಾವುದಕ್ಕೆ ಡಂಗುರವಂ ಸಾಱಿಸಿ ನಾಡನೆಲ್ಲಾ ಬರಿಸಿ ಪಾಪಿ ಸಿಷ್ಪಾಪಿಗಳು ದುರಿತಭವರೋಗದಿ ನೊಂದವರು ಬಂದಿರಲು, ಕಂಡುಕೇಳ್ದವರೆಲ್ಲ ಮಂಗಳಪುರಕ್ಕೆ ಬಂದು ನೆರೆದಿರಲು, ಸತಿ ಸಂಭ್ರಮಿಸುತ್ತೆಂದಳು. ಕೊಂಡೊಯ್ದಡೆ ಕೈಲಾಸದಲ್ಲಿಪ್ಪೆನು ಇಲ್ಲದೊಡೆ ಭಕ್ತರೊಳು ತಂಗಿಸುವೆನು ಎನುತ, ಸತಿಬಂದು ನುಡಿದಳು, ವಾರಬಂದುದು ಪುರಜನ ನೆರೆದುದು; ಇನ್ನೆಂದು ನೀಂ ಪೋಗುವುದು ಎನಲು, ಗುರ್ಜರದೇವಂ ಲಿಂಗಾರ್ಚನೆಯಂ ಮಾಡುತ್ತಂ ಮೃಡನ ಜಡೆಮುಡಿಗೊಂದು ಪದ್ಯವನೆಸಗಲು ಪುರವೆದ್ದುದ ಪುರಜನವಱಿಯರು; ಧರೆಯುಜನರು ಕೊಂಡಾತ್ತಿರಲು, ಆ ಪುರವೆ ಹರುಗೋಲಾಗಿ ಆಕಾಶವೇ ಭವಶರಧಿಯಾಗಿ ಗುರ್ಜರದೇವನೇ ಅಂಬಿಗನಾಗಿ ಪುರಜನ1ವಂ ದಾಂಟಿಸಿ1 ಮುಕ್ತಿರಾಜ್ಯಕ್ಕೆ ಪೋದಂತಿರಲು, ಹರನ ಜಡೆಯಿಂದಂಘ್ರಿಪರಿಯಂತರ ನೂಱುಪದ್ಯದಿಂದೆ ವರ್ಣಿಸಲು, ಅನಿತಕ್ಕೆ ಪುರಬಂದು ಕೈಲಾಸದೊಳಗಿರಲು, ಬಂದುದ ಸತಿ ತಿಳಿಯದೆ ಮಧ್ಯಾಹ್ನವಾಯ್ತು ನಿನ್ನಭಾಷೆ ಘಾಸಿಯಾಯಿತೆನೆ, ನಗುತ ಮೇಲೆ ನೋಡಬಲೆಯೆನಲು, ನೋಡುವಲ್ಲಿ ಕೋಟಿಸೂರ್ಯಚಂದ್ರಾಗ್ನಿಪ್ರಕಾಶನನ್ನು ಶಿವನೊಡ್ಡೋಲಗದಿಂದೊಪ್ಪುವ ರಜತಾಚಲವಂ ಕಂಡು ಕಣ್ಮುಚ್ಚಿ ನೋಡಲಮ್ಮದೆ ಬೆಚ್ಚುತ್ತಂ ಗುರ್ಜರದೇವಂಗೆಱಗಲು, ಸತಿಪತಿಗಳು ಶಿವಂಗೆಱಗುತ್ತಿರೆ ಶಿವನೆತ್ತಿ ಕೊಂಡಾಡಿ ನಂದೀಶಾದಿಪ್ರಮಥರ್ಗೆ ತೋಱಿ ಗಣತಿಂಥಿಣಿಯ ಸಂತೋಷದೊಳಿರಿಸಿದಂ ಶಿವನು.

## "ಮಲುಹಣನುಬ್ಬರ್" ಎಂಬುದಕ್ಕೆ ಕಥೆ

ಕುಂತಳದೇಶದ ಭಾರತೀಪೀಠವೆಂಬ ಪಟ್ಟಣದಲ್ಲಿ ಪ್ರವರಸೇನನೆಂಬ ರಾಜನಿರಲು, ಅಲ್ಲಿ ಸುವರ್ಣಭಟ್ಟನೆಂಬ ವಿಪ್ರನು ಸಕಲೈಶ್ವರ್ಯಸಂಪನ್ನನಾಗಿ ಆ ರಾಜಂಗೆ ಹಿತವಂತನೆನಿಸಿ ತನ್ನವರ್ಗೆಯು ಅನ್ಯರ್ಗೆಯು ಲಕ್ಷಸಂಖ್ಯೆದ್ರವ್ಯಮಂ ಧರ್ಮಕ್ಕೀವುತ್ತುದಾರಗುಣಶೀಲನಾಗಿರಲು, ಆ ಸುವರ್ಣಭಟ್ಟಂಗೆ ಸರ್ವಗುಣಸಂಪನ್ನ ಸಕಲವಿದ್ಯಾಪ್ರವೀಣನು ಮಲುಹಣನೆಂಬ ಮಗ ಪುಟ್ಟಲು, ಆತಂಗೆ ಸಕಲೈಶ್ವರ್ಯವನಿತ್ತು ಸುವರ್ಣಭಟ್ಟಂ ತನ್ನಸುತನಾದ ಮಲುಹಣನಿಗೆ ದಾವತಿಯುಲ್ಲದಂತೆ ದಿನಕ್ಕೆ ಸಾವಿರಹೊನ್ನಂ ಬಳಸಿ ಸುಖಮಿರಲಿಯೆಂದು ಶತವರುಷಕ್ಕೆ ಮೂಱುಕೋಟಿಯು ಅಱುವತ್ತುಲಕ್ಷಹೊನ್ನಂ ಗಣಿಸಿ ಕಟ್ಟಿ ಮುದ್ರಿಸಿ ಉಳಿದಹೊ2ನ್ನ ದಾನಧ2ರ್ಮಕಿತ್ತು ಕೆಲವುಕಾಲದ ಮೇಲೆ ತಾ ಮರಣವಾಗಲು, ಮಲುಹಣಗೆ ಪ್ರಾಯುವಾಗಲು, ಆ ಪಟ್ಟಣದೊಳು ಪದ್ಮಾವತಿಯೆಂಬ ವೇಶಿ ತನ್ನಮಗಳು ಮಲುಹಣಿಯಂ ಸಿಂಗರಿಸಿ ವಿಜಯೇಶ್ವರನ ಗುಡಿಗೆ ಕರೆತಂದು ನೃತ್ಯವನಾಡುವಲ್ಲಿ ಮಲುಹಣಂ ಕಂಡು ಬೇಟವಾಗಿ ಕೂಟದಿಂದಿರ್ಪಲ್ಲಿ ನೋಟವನಱಿದು ಅಪ್ಪುವ ಸೈರಣೆಯನಱಿದು ಸೋಂಕುವ ಸವು

ದಾಂಟ(ಗ) ೨. ನ್ನಥ (ಗ)

ರಸದೊಳು ಕರಣವೆಲ್ಲಾ ನೋಟ, ನೋಟವೆಲ್ಲಾ ವಿರಹ, ವಿರಹವೆಲ್ಲಾ ದೈನ್ಯ, ದೈನ್ಯವೆಲ್ಲಾ ಸಾತ್ವಿಕ, ಸಾತ್ವಿಕವೆಲ್ಲಾ ಮೆಯ್ಯಿ, ಮೆಯ್ಯೆಲ್ಲಾ ಕೂಟ, ಕೂಟವೆಲ್ಲಾ ಮನ, ಮನವೆಲ್ಲಾ ಮೆಚ್ಚು, ಮೆಚ್ಚೆಲ್ಲಾ ಸೋಲು, ಸೋಲುವೆಲ್ಲಾ ರಸಮಯವಾಗಿ, ವರುಷವೆ ತಿಂಗಳು, ತಿಂಗಳೆ ದಿನ, ದಿನವೆ ನಿಮಿಷ, ಶತವರುಷಕೆಂದು ತಂದೆಕೊಟ್ಟ ದ್ರವ್ಯವಂ ಹತ್ತುವರುಷಕ್ಕೆ ತೆಕ್ಕೊಂಡು ಪದ್ಮಾವತಿ ಸಂಪನ್ನೆಯಾಗಿ ಮಲುಹಣನಂ ಹೊಱಡಿಸಿಬಿಡೆಂದು ತನ್ನಮಗಳು ಮಲುಹಣೆಗೆ ಹೇಳಲು, ಆಕೆಯೆಂದಳು; ಪರಿಮಳ ವನುಂಬ ತುಂಬಿಗೆ ಹೊಗೆಯನಿಕ್ಕುವರೆ ಪಾಪಿ? ಮಲುಹಣನಂ ಬಿಡಲಾರೆನೆನಲು ಮಲುಹಣೆಯ ತಾಯಿ ತಪ್ಪಿಲ್ಲದೆ ತೊತ್ತಬಡಿದು, ಜೇನೆಯಿಲ್ಲದೆ ನರಳೆ, ಸಾಲವಿಲ್ಲದೆ ತಗಹನಿಕ್ಕಿ, ಹೊಟ್ಟೆಗಿಲ್ಲವೆಂದು ಸಾಲವಂ ಕೇಳಿ, ವಿಟ ನಿಂದಲ್ಲಿಗೆ ನೀರಚೆಲ್ಲಿ, ಬರುವ ದಾರಿಗೆ ಮುಳ್ಳನೆಳೆದು ಜಱೆದು ಝಂಕಿಸಿ ಹಂಗಿಸಿ ಭಂಗಿಸಿ, ನಿನ್ನಕವಿತ್ವ ನನಗೆ ಹೊನ್ನಜಾಳಿಗೆಯಾದೀತೆ ಎಂದು ಜಱೆದು ಹೊಱಡಿಸಲು, ಮಲುಹಣನು ಶಿವನ ಹೃದಯದೊಳು ನೆನೆವಯೋಗೀಂದ್ರನಂತೆ ಸ್ತ್ರೀಯ ಹಾವಭಾವ ವಿಭ್ರಮವಿಲಾಸ ವಂ ನೆನೆದು ಕರಗಿ ಕೊರಗಿ ಕಂದಿ ಕುಂದಿ ಚಿಂತಿಸುತ್ತ, ಮಲುಹಣೆಯ ನುಡಿಯಂ ಕೇಳದಲ್ಲದೆ ಎನ್ನೊಡಲು ಉಳಿಯದು ಎಂದು, ಬಂದು ಕೇಳಿನೊಳು ನಿಂದು ನುಡಿಯ ಲಾಲಿಸುತ್ತ ಚಳಿಯೊಳು ನೊಂದು ಮಲುಹಣನಿರೆ; ಮಲುಹಣೆ ತಾನುಂಡೆಂಜಲಂ ಚೆಲ್ಲಲು, ಮಲುಹಣನ ಮೇಲೆ ಸಿಡಿಯಲು, ಮಿಂಚಲು ಕಂಡು ನೀನಾರು ಮಲುಹಣನೆ ಎಂದು ನೊಂದು, ಮತ್ತೊಂದು ಮನೆಗೆಯ್ದಿ ನೆರೆಯಲನುವಾಗೆ ಸಜ್ಜನನುತ್ತಮಸದ್ಭಕ್ತ ಶಿವಕವೀಶ್ವರನೆಂದನು, ಒತ್ತೆಗೊಟ್ಟವನೆ ವಲ್ಲಭನು. ಈ ಹೊತ್ತಿಗೆ ಪರಸತಿಯಂ ನೆರೆವುದು ನೀತಿಯಲ್ಲೆನಗೆ ಸೈರಿಸೆನೆ ಸತಿಯೆಂದಳು. ನಿನಗೆ ನನಗೆಯು ಪ್ರಾಣವೆರವಿಲ್ಲ. ನಿಜವಲ್ಲಭ ಕನ್ನಡಿಯಮೇಲಣುದ್ದುರುಳುವಷ್ಟುಹೊತ್ತು ಏಕಾಗ್ರಚಿತ್ತನಾಗಿರ್ದು ಶಿವನಂ ಕೀರ್ತಿಸು. ಪ್ರಸನ್ನನಾದಹನು. ನೀನು ನಾನು ಶಾಶ್ವತಕಾಲ ಬಾಳಬಹುದು ಎನೆ ನೀನೆನ್ನಹಿಂದೆ ಬಿಗಿಯಪ್ಪಿ ನಿಂತಿರಲು, ಒಂದೇ ಪದ್ಯದೊಳು ಶಿವನಂ ಮಾತಾಡಿ ಸುವೆನೆಂದು, ಮಱುದಿವಸ ವಿಜಯೇಶ್ವರನ ಗುಡಿಗೆ ಬಂದು ಸತಿಯಂ ಬಿಗಿಯಪ್ಪಿನಿಂದಿ ರಲು, ದೇವ ಕರುಣಿಪುದು, ಶಂಕರ ಶರಣಜನಮನೋರಥಪ್ರದ ಗೌರೀಕಚಪ್ರಚಯ ಪುಷ್ಪಸುಗಂಧೀಗಂಧಕ್ಕೆಳಸಿ ಭೋರನೆಱಗುವ ಮಧುಕರನಿಕರದಂತೆಸೆವ ಗರಳಗಳ ಕರುಣಿಪುದು, ಶಶಿಧರಾ ಸುರಶಿರೋಮಾಲಾಧರ, ಕರುಣಾನಿಧಿ, ಗಿರಿಜೆಯ ಮನೋಹರ ಕರುಣಿಪುದೆಂದು ಕುದಿಕುದಿವ ಕರಣಂಗಳಿಂ ಬಣ್ಣಿಸುತ್ತ ವಿರಹದ ಸ್ತೋತ್ರದ ಮೂವತ್ತಾಱ ಶಿವನೊಳು ಸೇರಿಸಲು, ಶಂಕರಂ ಕೇಳ್ದು ಸೈರಿಸಲಾರದೆ ಬೇಗಬಂದು ಮಲುಹಣ, ಬೇಡು ಬೇಡು ಎನಲು, ಮಲುಹಣೆಯ ತಾ[1]ಯಿಯ[1]ಗಳಿಯು ಬಂಧು[2]ಕಾಲ ಸಹ ನಾನು ಶತವರುಷ ಸುಖದಿಂದಿರ್ದು ತನುವೆರಸಿ ನಿಮ್ಮಪುರಕ್ಕೆ ಬಂಧುಗಳು ಸಹ ಬರ್ಪಂತೆ ಮಾಡುಯೆನೆ, ನಗುತ ಶಿವನಿತ್ತು ಪೋಗಲು, ಇತ್ತ ಮಲುಹಣ ಶಿವಭಕ್ತಿ

---

ಖಿ (ಗ) 2. ಜನ (ಗ) 3. ಕ್ಷಸು (ಗ)

ಯುಕ್ತನಾಗಿ ಶತವರುಷಪರ್ಯಂತಂ ಸುಖಮಿದ್ದುರ್, ಬಳಿಕ ಶಿವನಂ ಕೀರ್ತಿಸಿ ಪ್ರಸನ್ನವಂ ಪಡೆದು ಕೈಲಾಸಕ್ಕೆ ಪೋದನು.

## "ಮಲಯಕ್ಷೋಣೀಶನೇಳ್ಗೆ" ಎಂಬುದಕ್ಕೆ ಕಥೆ

ಮಳೆಯದೇಶದ ಮಳೆಯಾವತಿಯೆಂಬ ಪಟ್ಟಣದಲ್ಲಿ ದೇವರಾಜನೆಂಬರ[1]ಸು. ಆ[1]ತನ ಸತಿ ಶಚೀದೇವಿ ಸಹವಾಗಿ ದೇಶವನಾಳುತ್ತಿರಲು, ಸಮಸ್ತರಾಜ್ಯದರಸರು ತನ್ನನೋಲೈಸಲು ಲಿಂಗಕ್ಕೆ ಅಷ್ಟವಿಧಪೂಜೆ ಷೋಡಶೋಪಚಾರವಂ ಮಾಡುತ್ತಿರ್ದು ಒಂದುದಿನ ಪುರಾಣಾರ್ಥಗೋಷ್ಠಿಯಲ್ಲಿ ಪುತ್ರರಿಲ್ಲದವರಿಗೆ ಲೋಕವಿಲ್ಲ. ಗತಿಮತಿ ಯಿಲ್ಲ ಸತ್ಯವೆಂದು ಪುತ್ರರಂ ಕಾಮಿಸಿ ಪಡೆಯಬೇಕೆಂದು, ಪುರಾಣವನೋದುವಲ್ಲಿ ಪೌರಾಣೀಕರು ಪೇಳಲು, ಕೇಳಿ ಶಿವನ ಕೃಪೆಯಿಂದ ಪಡೆಕೊಳ್ಳಬೇಕೆಂದು ಶಿವರಾತ್ರಿ ಯಲ್ಲಿ, ಸತಿಪತಿಗಳೀರ್ವರು, ಸರ್ವಾಂಗಶುಚಿಗಳಾಗಿ ಲಿಂಗದಗುಡಿಗೆ ಬಂದು ಗಿರೀಶಗೆ ಸಕಲಪೂಜೋಪಚಾರವಂ ಮಾಡಿ ಶರಣಸಂಕುಳಕ್ಕೆ ಸಕಲಪದಾರ್ಥವನಿತ್ತು ಒಲಿಸಿ ಇಪ್ಪತ್ತೊಂದುದಿನ ಶಿವನಂ ಧ್ಯಾನಿಸುತ್ತ ಪುತ್ರನ ಬಯಕೆಯಿಂದ ಇರುತಿರ್ದು, ಶಿವಂ ಮೆಚ್ಚಿ ಲಿಂಗದಲ್ಲಿ ಪ್ರಸನ್ನವಾಗಿ ದೇವರಾಜ, ಏನುಬೇಕು ? ಬೇಡು ನಿನ ಗೇನು ಕೊಱತೆ, ನನಗೆ ಪೇಳುಮೆನೆ, ಶಿವನ ಪಾದಕ್ಕೆ ದೇವರಾಜ ವಂದಿಸಿ, ಪುತ್ರನೊಬ್ಬನ ಕೊಡು ದೇವಾ ಎನಲು, ನಿನಗೆ ಪುತ್ರನಂ ಪಡೆವ ಪುಣ್ಯವಿಲ್ಲದೆ ಎಂತು ಪುತ್ರನಂ ಬೇಡುವೆಯೆನಲು, ಅರಸು ನಗುತ ಲೇಸಾಯ್ತು ನಿನ್ನ ಕಣ್ಣ ಕೊನೆಯು ವೊನೆಯ ಚಲನೆಯಿಂದ ಬ್ರಹ್ಮ ವಿಷ್ಣು ಇಂದ್ರ ಚಂದ್ರಕೋಟಿ ಪುಟ್ಟುತಿಹರು ಎನಲು, ನರ[2]ಮನುಷ್ಯನೆನಗೆ ಪುತ್ರನಫಲವಿ[2]ಲ್ಲೆಂದು ಶಿವನೆ ನೀನು ನುಡಿದಡೆ ಸಕಲ ವೇದಾಗಮ ಪುರಾಣ ಮುನಿಮುನಿಗಳು ನಗದಿಹರೆಯೆನೆ, ಕರ್ತರು ತೊತ್ತಿನೊಡನೆ ಸರಸವಾಡುವರೆ ದೇವಾ ಎನಲು ಶಿವನು ಮೆಚ್ಚಿ ಶತವರುಷದಾಯುಷ್ಯವನುಳ್ಳ ಮೂರ್ಖನಂ ಕೊಡಲೊ? ಹದಿನಾಱು ವರುಷದಾಯುಷ್ಯದ ಸರ್ವಗುಣಸಂಪನ್ನ ನಾದ ಪುತ್ರನಂ ಕೊಡಲೊ? ಎನಲು, ವಿದ್ಯಾಬುದ್ಧಿ ಸರ್ವಗುಣವುಳ್ಳ ಹದಿನಾಱು ವರುಷ ದಾಯುಷ್ಯದ ಮಗನಂ ಕೊಡು ಎನಲು, ಕೊಟ್ಟು ಶಿವನು ಪೋಗಲಿತ್ತ ಶಚೀದೇವಿ ಸುತನಂ ಪಡೆದು ಪುತ್ರನೊಸಗೆಯಂ ಮಾಡಿ ಶರಣರಿಗೆ ಸಕಲವಸ್ತುವನಿತ್ತು ಷೋಡಶದಾನವಂ ಬುಧರಿಗಿತ್ತು ಮಳೆಯರಾಜನೆಂಬ ಹೆಸರನಿಟ್ಟು ಸಕಲೈಶ್ವರ್ಯವಂ ಪುತ್ರನಿಗಿತ್ತು ಸುಖದೊಳಿರಲನಿತಕ್ಕೆ ಹದಿನೈದುವರುಷಂ ತುಂಬಲು ತಂದೆತಾಯಿಗಳು ದುಃಖವಂ ಮಾಡುತ್ತಿರಲು ಕಂಡು ಮಗನು ಕೇಳಲು, ಪೇಳದಿರಲು ಊಟವನೊ ಲ್ಲೆನು ಪೇಳಿ ಎನಲು, ಶಿವನು ನಿನಗೆ ಕೊಟ್ಟ ಆಯುಷ್ಯ ಹದಿನಾಱುವರುಷ.

---

1. ಸುಂದರನು. ಆ(ಕ) 2. ಮನುಷ್ಯನಾದೆನಗೆ ಪುತ್ರನಿ (ಕ)

ಇಂದಿಗೆ ಹದಿನೈದುವರುಷವಾಯಿತ್ತು. ಇನ್ನೊಂದು ವರುಷಕ್ಕೆ ನಿನಗೆ ಮರಣವೆಂದೊಱಲಿ ದುಃಖವಂ ಮಾಡುವಷ್ಟಕ್ಕೆ ಇಷ್ಟೆಐಸಲೆ? ಇದೇನು ದೊಡ್ಡಕಾರ್ಯವೆಂದಿದ್ದೀರಿ. ಕೊಟ್ಟಾತ ಶಿವನು, ಪಡೆದವರು ನೀವು, ಪುಟ್ಟಿದ ಮಗ ನಾನು ಇನ್ನೊಂದು ವರುಷದ ಆಯುಷ್ಯವದೆಯೆಂದು ತಂದೆತಾಯಿಗಳ ದುಃಖವಂ ನಿಲಿಸಿ, ನನಗೆ ಶಿವನ ಕರುಣವುಂಟಹುದು ಸಾವಿಲ್ಲವೆಂದು ಸಂತೈಸಿ, ಶಿವಜ್ಞಾನಸಂಪನ್ನನಾಗಿ, ಮಲ್ಲಮೇಷ ಮಹಿಷೆಗಜ ಕುಕ್ಕುಟಾದಿ ಸಕಲ ಮೃಗಾದಿಗಳ ನೋಡಿ ಅಷ್ಟ ಭೋಗಾದಿಗಳ ಭೋಗಿಸಿ, ಸುಖಮಿರ್ದು ಗುರೂಪದೇಶಮಂ ಪಡೆದು ಕೆಲವುದಿನಮಂ ಕಳೆಯೆ ತಂದೆ ತಾಯಿಗಳು, ಮಗನೆ ನಿನಗಿನ್ನು ಆಱುತಿಂಗಳಿಗೆ ಮರಣವೆನಲು, ಅಱಿಯದಂತಿರ್ದು ಮೂಱುತಿಂಗಳೆನೆ ಮೌನದಲ್ಲಿರ್ದು ತಿಂಗಳೆನೆ ಸುಮ್ಮನಿರ್ದನು. ನಾಳೆ ನಿನಗೆ ಮರಣ ತಪ್ಪದು ಎಲೆ ಮಗನೆ ನೀ ಮಾಡುವ ಧರ್ಮಕ್ರಿಯೆಯಂ ಮಾಡು ಎನಲು ಕೇಳಿ, ಆ ರಾತ್ರಿಯಲ್ಲಿ, ಶಿವಭಕ್ತ ಶರಣಾಳಿಗಳ ಬಿಜಯಂಗೈಸಿತಂದು ಶಿವರಾತ್ರಿಯಂ ಮಾಡಿ ಮಱುದಿವಸದುದಯದಲ್ಲಿ ವಿಭೂತಿ ರುದ್ರಾಕ್ಷಿಯಂ ಧರಿಸಿ ಮಂತ್ರವನುಚ್ಚರಿಸುತ್ತ ಶಿವ ಪೂಜಾಸಾಧನಂಗಳಂ ತರಿಸಿ ಪಂಚಾಮೃತ ಸಹಸ್ರದಿಂದ ಮಜ್ಜನಕ್ಕೆಱೆದು, ಅಷ್ಟವಿಧ ಪೂಜೆ ಷೋಡಶೋಪಚಾರವಂ ಮಾಡಿ, ಸುಸ್ಥಿರಚಿತ್ತದಿಂದ ಮೂರ್ತಂಗೆಯ್ದು ಶಿವನಂ ಸ್ತುತಿಸುತ್ತಿರ್ದನು. ಕಾಲಾರಿ ಕಾಮಾರಿ ಪುರಾರಿ ಮಾಯಾರಿ ವಿಧಿಯುಗರ್ವ ಸಂಹಾರಿ, ಕರುಣಾಕರ ಕರುಣಿಸೆಂ[1]ದು ಎಪ್ಪತ್ತೊಂದು ಪ[1]ದ್ಯದಿಂದ ನುತಿಸಲು, ಶಿವನು ಪ್ರಸನ್ನನಾಗಿ, ನಿಜರೂಪದೋಱಿ, ಮಳೆಯ ರಾಜ ಬೇಡು ಬೇಡೆನಲು, ಮಾತಾ ಪಿತೃಗಳ ಪ್ರೀತಿಗೆ ನೂಱುವರುಷದ ಆಯುಷ್ಯವಂ ಕೊಡು ಎನಲು, ಕೊಟ್ಟೆ ಮತ್ತೇ ಯೂ ಬೇಡು ಎನಲು, ಜನನೀಜನಕರು ಬಳಗವೆಲ್ಲರು ಬಾಲವೃದ್ಧರಲ್ಲದೆ ನಿತ್ಯ ಯೌವ್ವನವಾಗಿರುತ ತನ್ನ ದೇಶವೆಲ್ಲವು, ಚತುರಂಗಬಲವು, ನಿಯೋಗದವರು, ಎನ್ನ ದೇಶದ ಸಮಸ್ತ ಜನರು, ಖಗಮೃಗಪಿಱುವೆ ಮೊದಲು ಆನೆ ಕಡೆಯಾದ ಸಮಸ್ತ ಪ್ರಾಣಿಗಳೆಲ್ಲವುಂ, ನೂಱುವರುಷದಾಯುಷ್ಯವುಳ್ಳವಾಗಿ ಶಿವಭಕ್ತಿಯಲ್ಲಿಪ್ಪ ವರವಂ ಕೊಡು, ನೂಱುವರುಷ ತುಂಬಲು ನನ್ನ ನವಲಕ್ಷದೇಶದಲ್ಲಿಪ್ಪ ಸರ್ವಪ್ರಾಣಿಗಳನು ರಜತಗಿರಿಗೆ ಕೊಂಡೊಯ್ಯೆನಲಾ ವರವಂ ಕೊಟ್ಟು ಶಿವನು ಪೋಗಲಿತ್ತಾ ಮಳೆಯ ರಾಜನು ತಂದೆತಾಯಿ ಸಮಸ್ತ ಬಳಗವು, ಮಂತ್ರಿಯಾಪ್ತಜನರುಗಳನಪ್ಪಿ ಸುಖ ಮಿರ್ದು ಮರಳಿ ಪಟ್ಟಣಕೆ ಬಂದು ಪುರಜನ ಪರಿಜನರೆಲ್ಲರು ಪರಿವಾರವೆಲ್ಲರುಂ, ಶಿವನಂ ಭಕ್ತಿಯಿಂದ ಪೂಜಿಸಿಯೆಂದು ಡಂಗುರವಂ ಸಾಱಿಸಿ ಪುರ ಗ್ರಾಮ ನಗರವ ಪಳ್ಳಿ ಊರು ದೇ[2]ಶ ನ[2]ವಲಕ್ಷದೇಶವೆಲ್ಲಕ್ಕೆಯೂ, ಶಿವನಂ ಪೂಜಿಸಿಯೆಂದು ಪರಿಚಾರಕರಿಂದ ಸಾಱಿಸಿ ತಾನುಂ ಸರ್ವಸಂಭ್ರಮದಿಂದ ಶಿವಪೂಜೆಯಂಗೈಯ್ದು, ನವಲಕ್ಷ ದೇಶ[3]ದ ಶಿ[3]ವಪೂಜೆಯಂ ನೋಡಿ ಬರ್ಪೆನು ಎಂದು, ಶಿವನಪ್ಪಣೆವಿಡಿದು ಪೋಗ

1. ದುಪ (ಗ) 2. ಶದೇಶನ (ಕ) 3. ದಲ್ಲಿಶಿ (ಗ)

ನೋಡುತ್ತಿರಲಲ್ಲಿ, ನಡೆವಲ್ಲಿ ನುಡಿವಲ್ಲಿ ನಿಂದಲ್ಲಿ ನೆರೆದಲ್ಲಿ ಊರೂರಲ್ಲಿ ಕೇರಿ ಕೇರಿಯಲ್ಲಿ ಮನೆ ಮನೆಯಲ್ಲಿ ನವಲಕ್ಷದೇಶವೆಲ್ಲ ಶಿವಪೂಜೆಯಲ್ಲಿ ತತ್ಪರವಾಗಿರುತಿರಲು ನರಲೋಕದೊಳಗೆ ಹರನಲೋಕವೆ ನೆಲಸಿದಂತೆ ಇರಲು ಕಂಡು ಹರಪೂಜಕರಾದ ಪ್ರಜೆಗಳನೆಲ್ಲ ಕರೆದು ಮನ್ನಿಸಿ ಮರಳಿ ಮಳೆಯುವತಿಗೆ ಬಂದು ಮತ್ತೆಯೂ ಶಿವಪೂಜೆಯಲ್ಲಿರುವಲ್ಲಿ ನೂಱುವರುಷವೆಂಬು[1]ದೊಂದು ನಿ[1] ನಿಮಿಷವಾಗಿ ಪೂಜೆಗೆಯ್ದು ಅನಂತಕಾಲವಿರ್ದು ಮರ್ತ್ಯದೊಳಗೆ ಸುಖಮಿರ್ಪುದು ಸಾಕುಯೆನುತ್ತ ಶಿವನಂ ನುತಿಸಲು, ಶಿವ ಸುಪ್ರಸನ್ನನಾಗಿ ನಿಜರೂಪಂದೋಱಿ ನವಲಕ್ಷದೇಶವನು ಅದಱೊಳಗಿರ್ದ ಸರ್ವಪ್ರಾಣಿಗಳನು ಕೆಱೆ ತೊಱೆ ಪುರ ಗ್ರಾಮ ಹಳ್ಳಿ ಪಳ್ಳಿ ನಗರಗಳನು ಕೊಂಡೊಯ್ಯಲು ಮಳೆಯದೇಶದ ಭೂವನಿತೆಯ ಪೊಕ್ಕಳಂತೆಗುಳಿಯಾಗಿಳಿದಿರಲು, ಮಳೆಯರಾಜನ ನುತಿಗೊಲಿದು ಕೈಲಾಸಕ್ಕೆ ಕೊಂಡೊಯ್ದು ನಂದೀಶ್ವರಾದಿ ಪ್ರಮಥರ್ಗೆ ತೋಱಿ ಹರಿಯಜೇಂದ್ರಾದಿಗಳು ಸಕಲ ಪ್ರಮಥಗಣದ ನಡುವಿಟ್ಟು ಗಣಪದವಿಯನಿತ್ತು ಮಳೆಯರಾಜನ ದೇಶದ ಶಿವಭಕ್ತಿಸ್ತುತಿಗೊಲಿದು ಸರ್ವಪ್ರಾಣಿಗಳಿಗೆಯೂ ಮುಕ್ತಿಯನಿತ್ತು ರಕ್ಷಿಸಿದ ಶಿವನು.

## "ಕಟ್ವಾಣಿ ಹರಿಪನೋಕ್ತಿಗಾಣಿಪುದು" ಎಂಬುದಕ್ಕೆ ಕಥೆ

ಪಂಪಾಕ್ಷೇತ್ರದಲ್ಲಿ ಒಪ್ಪುವ ಹಂಪೆಯ ಶಂಕರಾಚಾರ್ಯರ ಮಗ ಮಾದರಸನು. ಅವರ ಮಗ ಹಂಪೆಯ ಹರೀಶ್ವರನು. ಅವರ ಗುರು ಮಾಯಿದೇವಾಚಾರ್ಯನು. ಅವರಿಂದೆ ಶೈವೋಪದೇಶವಂ ಪಡೆದು ಶುದ್ಧಶೈವಭಕ್ತಿನಿಷ್ಠೆಯೆಂದು ಹಂಪೆಯ ವಿರೂಪಾಕ್ಷನೆ ತನಗೆ ಮನೆದೈವ ಕುಲದೈವವಾಗಿ ಪೂಜೆಮಾಡುತ್ತ, ಇತ್ತ ದೋರಸಮುದ್ರದ ಅರಸು ನೃಸಿಹಂಬಲ್ಲಾಳನು ಪದ್ಮರಸರೆಂಬ ಆರಾಧ್ಯಪುಂಗವರ್ಗೆ ಪ್ರಧಾನಿಪಟ್ಟವಂ ಕಟ್ಟಿ, ಹಂಪೆಯ ಹರೀಶ್ವರದೇವರಿಗೆ ರಹಸ್ಯವಂ ಬರೆವ ಕರಣಿಕರಿಗೆಲ್ಲ ಹಿರಿಯತನವಂ ಕೊಟ್ಟಿತ್ತು ಕರಣಿಕತ್ವಕ್ಕೆ ಮಡಗಿಕೊಂಡಿರಲು, ಹರಿಯಣ್ಣಪಂಡಿತರು ವಿಷ್ಣುಮೊದಲಾದ ಅನ್ಯದೈವಕ್ಕೆ ಪೊಡಮಡಲೊಲ್ಲೆನು ಗುಡಿಯ ಹೊಗಲೊಲ್ಲೆನು ಎಂಬ ನೇಮವಂ ಮಾಡಿಕೊಂಡಿರಲು, ಅದನು ನೃಸಿಂಹಬಲ್ಲಾಳ ಕೇಳಿ, ಹರಿಯಣ್ಣಪಂಡಿತರೆ ನಮ್ಮ ಹರಿಯಂ ನೋಡಿದವರಿಗೆ ಸರ್ವವಿದ್ಯವು ಬುದ್ಧಿಯು ದೊರಕುವದಂತೆ: ಶ್ರೀಧರನಿಗೆ ವಂದಿಸಿದಡೆ ಸಿರಿಸಂಪತ್ತು ಅಧಿಕವಾಗುವುದಂತೆ. ನೋಡುವ ಬನ್ನಿಯೆಂದು ಕರೆಯೆ ಒಲ್ಲೆವೆಂದು ಶ್ರೀಪತಿಗೆ ಪತಿಯಾದ ಶಿವನ ನೋಡಿದಡೆ ಸರ್ವೈಶ್ವರ್ಯವುಂಟು ಎನೆ, ಆ ದಿನವುಳಿದು ಮತ್ತೊಂದು ದಿನದಲ್ಲಿ ವೈಹಾಳಿಯಂ ಪೋಗಿಬರುವನೆವದಲ್ಲಿ ಹರೀಶ್ವರದೇವರನು ಬಲ್ಲಾಳನು ನಾರಾಯಣನ ಗುಡಿಗೆ ಕರಕೊಂಡು ಬರಲ್ ಅರಸು ಗುಡಿಯ ವಳಯಿಕ್ಕೆ ಪೋಗಲು, ಹರೀಶ್ವರನು ಹೊಱಗೆ ನಿಲಲಾಗಿ, ಮಳೆ

---

1. ದುನಿ (ಕ)

ಬರಲು ಅರಸು ಹರಿಯಣ್ಣನಂ ನೋಡಿಯೆನೆ, ಸೇವಕರು ನೋಡಿ ಬಯಲೊಳಗೆ ನಿಂತ್ಯೈಧಾರೆಯೆನೆ, ಬಡವು[1]ಳೆ ನಿಂತ್ಯೈಧಾರೆಯೆ[1]ನೆ, ಅನಿತಕ್ಕೆಮೇಘವಡೆದಂತೆ ಮಳೆ ಉರವಣಿಸಿ ಕರೆಯಲು ಹಳ್ಳ-ಹೊಳೆ, ಕೆಱೆ[3] ತೊಱೆ[3] ನದಿ ಬಾವಿಗಳೆಲ್ಲ ಮೀರೆದಪ್ಪಿ ನೆಲನೆಲ್ಲಾ ಜಲಮಯವಾಗಲು, ಗುಡಿಯೊಳಗೆ ಬಲ್ಲಾಳನಿರ್ದು, ಹರಿಯಣ್ಣ ಮಳೆಯಲ್ಲಿ ಸತ್ತು ಹೊನಲೊಳಗೆ ತೇಲಿಹೋಗಿದ್ದಾನು, ನೋಡಿಯೆನೆ, ನೆನೆಯದೆ ನಿಂದಿರೆ ಕಂಡು ಆಶ್ಚರ್ಯವಂ ಮಾಡುತ ಪುರದ ಸಿಳಯಕೆಯ್ತಂದನು. ಮತ್ತೊಂದುದಿನ ಪದ್ಮರಸರು ಸಹ ಬಲ್ಲಾಳನು ಓಲಗದಲ್ಲಿರುವಾಗ ಕರಣಿಕ ಹರಿಯಣ್ಣನು ಶ್ರೀವಿರೂಪಾಕ್ಷಯೆಂದು ಓಲೆಯಂ ಬರೆವುತ್ತ, ಅದಂ ಬಿಟ್ಟು, ಕೈಯನೆತ್ತಿಒರಸಲು ಕಂಡು ರಾಜಸಭೆಯೆಲ್ಲವು ಹಾಸ್ಯವಂ ಮಾಡುತೆ ನುಡಿದರು. ಸುಡುಗಾಡಬೂದಿಯ ಮರುಳು ಹೊಡೆಯಿತ್ತೊ ಹರಿಯಣ್ಣನಾ ಎಂದು ನುಡಿಯಲು. ಆ ಪದ್ಮರಸರು, ಎಲೆ ಬಲ್ಲಾಳ ಕೇಳು, ಹಂಪೆಯಲ್ಲಿ ವಿರೂಪಾಕ್ಷಗೆ ಪೂಜಕರು, ಆರತಿಯನೆತ್ತುವಾಗ ಮೇಲ್ಕಟ್ಟಿನ ಸೀರೆಗೆ ಉರಿಹತ್ತಿ ಉರಿವುತ್ತಿರೆ, ಕೈಯಲ್ಲಿ ಒರಸಿದೆವೆಂದು ಹರಿಯಣ್ಣಪಂಡಿತರೆನೆ ಅರಸು ಪರಿಚಾರಕರಂ ಕಳುಹಲು, ಹಂಪೆಗೆ ಬಂದು ಪೂಜಕರಂ ಕೇಳಲು ಹರೀಶ್ವರದೇವರು ಬಂದು ಒರಸಿ ನಂದಿಸಿದರೆಂದು ಹೇಳಿ ಅರೆಬೆಂದ ಸೀರೆಯಂತಂದು| ಬಳ್ಳಾಳರಾಯಂಗೆ ತೋರಲು ಆಶ್ಚರ್ಯಂಬಟ್ಟು ಹರೀಶ್ವರ ದೇವರಿಗೆ ವಂದಿಸಿ ಪದ್ಮರಸನು ನುತಿಸುತ್ತಿರಲಾಗ ಇನ್ನು ಕರಣಿಕತ್ವವು ನಮ್ಮಲ್ಲಿ ಬೇಡ ನೀವುಮಹಿಮಾಢ್ಯರು ಎಂದು ಹನ್ನೆರಡುಸಾವಿರ ಹೊನ್ನನಿತ್ತು ವಂದಿ[2]ಸಿರ[2]ಲು, ಬಳಿಕ ಹರೀಶ್ವರದೇವರು, ನರಸೇವೆಯಂ ಮಾಡಲೊಲ್ಲೆನೆಂದು, ಕರಣಿಕತ್ವಮಂ ಬಿಟ್ಟು, ಹಂಪೆಗೆ ಬರುವಲ್ಲಿ ಗುಹಾರಣ್ಯಕ್ಷೇತ್ರದ ಹರಿಹರಲಿಂಗ[3]ದಾ[3]ಲಯದಲ್ಲಿ ಬಾಗಿಲಿಕ್ಕಿರೆ ಇದೇಕೆಂದು ಕೇಳಲು, ಇಲ್ಲಿ ಬ್ರಹ್ಮರಾಕ್ಷಸ ಪೂಜೆಯಂ ಮಾಡಗೊಡದು ಎನೆ ಆಗ ಹರೀಶ್ವರದೇವರು ಬ್ರಹ್ಮರಾಕ್ಷಸನಂ ಕರೆಯಲು, ವಿಪ್ರಾಕಾರದಿ ನಡುಗುತ್ತಬರಲು, ನೀನೀಕ್ಷೇತ್ರಕ್ಕೆ ಉಪದ್ರ[4]ವವಂ[4] ಮಾಡಬೇಡ ಪೋಗು ಎನಲು, ಹರೀಶ್ವರದೇವರ ದರ್ಶನದಿಂದೆ ಬ್ರಹ್ಮರಾಕ್ಷಸತ್ವವಳಿದು ಸ್ವರ್ಗಕ್ಕೆ ಪೋಯಿತ್ತು. ಬಳಿಕಾ ಹರೀಶ್ವರ ದೇವರು ಹರಿಹರಲಿಂಗಪೂಜೆಯಂ ಮಾಡಿ, ಹಂಪೆಗೆ ಬಂದು ವಿರೂಪಾಕ್ಷನಂ ಪೂಜಿಸುತ್ತಂ, ಸರಸಮೃದುಮಧುರೋಪಮೆಗಳಿಂದೆ, ವಸ್ತುಕವರ್ಣಕದಿಂದೆ ಶಿವನಂ ಶಿವಗಣಂಗಳನು ರಗಳೆಗಳಿಂದೆ ನುತಿಸಲು, ವಚನದರಚನೆ ಹೆಚ್ಚುವಂತೆ,ಗಿರಿಜಾಕಲ್ಯಾಣಮಂ ರಚಿ[5]ಸಲು ದೇಶದೇಶ[5]ಗಳಲ್ಲಿ ಕೀರ್ತಿ ಪಸರಿಸಲು, ಆಂಧ್ರದೇಶದಲ್ಲಿರ್ದ ಒಬ್ಬ ವೇಶ್ಯಾಸ್ತ್ರೀಯು, ರಗಳೆಯ ವಚನರಚನೆಯ ಭಾಷಿತವಂ ಕೇಳಿ, ಕಿವಿ ಬೇಟಗೊಂಡು ಹಂಪೆಗೆ ಬಂದು. ವಿರೂಪಾಕ್ಷಗೆ ವಂದಿಸಿ, ಹರೀಶ್ವರದೇವರಿರುವ ನೆಲೆಯಂ ಪರಿಚಾರ

1. ಳೆಯೆ (ಗ) 2. ಸ (ಗ, ಚ) 3. ದಪೂರ್ವಾ(ಕ) 4. ವ(ಗಚ) 5. ಸಿರಲುದೆಸೆದೆಸೆ [ಗ], ಸಿರಲುದೇಶದೇಶ [ಚ]

ಬರಲು ಇನ್ನು ಗುಡಿಯಿಂ ಪೋಗದೆಯಿದ್ದಹರೆ ಎಂದು ಹಾಸ್ಯವಂ ಮಾಡಲು, ಮಳೆ ಕರಿಂದೆ ನೋಡಿಸಿ, ಅರ್ಧರಾತ್ರಿಯಲ್ಲಿ ಬಂದು ಶಿವಧ್ಯಾನದಲ್ಲಿ ತತ್ಪರರಾಗಿರ್ದ ಹರೀಶ್ವರದೇವರಂ ಕಂಡು ವಂದಿಸಿ, 'ನಿನಗೊಲಿದು ಬಂದೆನು ನನ್ನಂ ರಮಿಸು' ಎನಲು ಶಿವನಿಗೆ ಗಂಡುದೊತ್ತಾ[1]ಗಿ ನಾನಿರುತ್ತಿ[1]ದೇನೆ. ಸ್ತ್ರೀಗೆ ಸ್ತ್ರೀಯುಂಟೆ ಎನೆ, ಆಕೆಗೆ ಕಾಮ ನಿಷ್ಕಾಮವಾಗಿ, ನಿನಗೆ ನಾನು ಹೊಱಗುಂಡನಾಗಿರುವೆನೆಂದು ಶಿವದೀಕ್ಷೆಯಂ ಪಡೆದು ಶಿವನ ಸೇವೆಯಂ ಮಾಡುತಿರ್ದಳು. ಬಳಿಕ ಹರೀಶ್ವರನ ಅಗ್ರಜೆಯ ಮಗ ರಾಘವಾಂಕನು ನರನ ನುತಿಯಂ ಮಾಡಿದನೆಂದು ಮುಳಿದು ಐದು ದಂತವನಪಹರಿಸಿ, ಪಂಚಕಾವ್ಯಗಳಿಂದೆ ಶರಣರಂ ಶಿವನಂ ನುತಿಸಿ ದಂತವಂ ಪಡೆದನು. [2]ಅಂ[2]ಧ್ರ ದೇಶದಿಂದ ಬಂದ ಸ್ತ್ರೀಯು ಮಾಡುವ ಶಿವಸೇವೆಗೆ ಮೆಚ್ಚಿ ವಿರೂಪಾಕ್ಷನಿಂದ ಮುಕ್ತಿಯಂ ಕೊಡಿಸಿ, ವಿರೂಪಾಕ್ಷನಂ ಪೂಜಿಸಿ ನುತಿಸುತ ಹರೀಶ್ವರದೇವರು ಇರುತಿರಲು; ಇತ್ತ ಕೆರೆಯಪದ್ಮರಸರು ಕಾಶಿಗೆ ಬರುತ ಹರಿಯೆಂಬ ವಾರ್ತೆಯಂ ಹರೀಶ್ವರದೇವರು ಕೇಳಿ, ಬಂದು ಇದಿರ್ಗೊಂಡು ತನ್ನ ಪುರಕೆ ಕರಕೊಂಡು ಪೋಗಲು, ಅಕ್ಷ ನಾಲ್ಕೈದುದಿನವಿರ್ದು ಹರಿಯಣ್ಣಾಪಂಡಿತರೆ ನಿಮಗೆ ಹನ್ನೊಂದುದಿನಕ್ಕೆ ವಿರೂಪಾಕ್ಷನಲ್ಲಿ ಐಕ್ಯವೆಂದು ಪೇಳಿ, ಪದ್ಮರಸರು ವಾರಣಾಸಿಗೆ ಪೋಗಲು, ಇತ್ತ ಹರೀಶ್ವರದೇವರು ವಿರೂಪಾಕ್ಷನಂ ಕೀರ್ತಿಸಿ ಐಕ್ಯವಾದರು.

## "ಗುರುಸೋಮನಾಥ ಸ್ವಪ್ನದೊಳ್ ಬಂದು ಕರಕಂಜವಂ ಶಿರಕಿಟ್ಟು ನಿರ್ವಿಘ್ನವೆಂದು ಪೇಳಿಸಿದನು" ಎಂಬುದಕ್ಕೆ ಕಥೆ.

ಕುಂತಳದೇಶದ ವಿದ್ಯಾನಗರಿಯೆಂಬ ಪಟ್ಟಣದಲ್ಲಿ ಪ್ರೌಢರಾಯನಿರ್ಪನು. ಆತನ ಗುರುಗಳು ಮುಂಕುಂದಪೆದ್ದಿವೃಂದಾಚಾರ್ಯನೆಂ[3]ದು. ಅ[3]ವರು ತಮ್ಮ ಭಾರತ ರಾಮಾಯಣಮುಂ ಒಂಭತ್ತುತಿಂಗಳು ಬೋಧಿಸಿ ಹದಿನೆಂಟು ಮೆರೆವಣಿಗೆಯಂ ಮಾಡಿರಲು, ಇತ್ತ ವೀರಶೈವಕ್ಕೆ ಮುಖ್ಯವಾದ ಇಪ್ಪತೊಂದು ಗುರುಸಂಪ್ರದಾಯಕ್ಕೆ, ಶ್ರೇಷ್ಠರಾದ ಕುಮಾರಬಂಕನಾಥದೇವರ ಶಿಷ್ಯರಾದ ಜಕ್ಕಣಾಚಾರ್ಯಪಂಡಿತರು ತಮ್ಮ ಗುರುನಿರೂಪದಿಂದ, ಸಕಲಪುರಾತನರ ವಚನಗಳಿಂದ, ಏಕೋತ್ತರಶತಸ್ಥಲವಂ ಸೂತ್ರವಂ ಕಲ್ಪಿಸಿ, ಸ್ಥಲವಿಟ್ಟು, ವಸ್ತುಕವರ್ಣಕದಿಂದ ಸಂಗ್ರಹಿಸಿ ಪ್ರಭುದೇವರು ನಿರೂಪಿಸಿದ ವಚನಂಗಳಿಗೆಯು ಸೂತ್ರಸ್ಥಲವಿಟ್ಟು ಅರ್ಥಪದ್ಧತಿಯ ವ್ಯಾಖ್ಯಾನವಂ ಮಾಡಿ, ಜಕ್ಕಣದಂಡೇಶಮಂತ್ರಿಯು ಕಲ್ಲುಮಠದ ಪ್ರಭುದೇವಾಚಾರ್ಯನು ಚಾಮರಸಯ್ಯನೆಂಬ ಆರಾಧ್ಯರು, ಕರಸ್ಥಲದ ನಾಗಿದೇವರು, ವೀರಣ್ಣೊಡೆಯದೇವರು ಮುಖ್ಯವಾದ ನೂಱೊಂದು ವಿರಕ್ತರು, ಭಕ್ತರು, ಸಹವಾಗಿ ಏಕೋತ್ತರಶತಸ್ಥಲವಂ ಪುಷ್ಪಕದೊಳಗಿಟ್ಟು ಸರ್ವಸಂಭ್ರಮದಿಂದ ರಾತ್ರಿಯಲ್ಲಿ ಮೆರೆವಣಿಗೆಯಂ

1. ಗಿರುತಿ [ಗ.] 2. ರಂ [ಕ] 3. ದು ಅವರು ವಿಷ್ಣುಮತವಂ ಬೋಧಿಸುತ ಅ [ಕ]

ಮಾಡಲು, ಮುಕುಂದಪೆದ್ದಿ ಉಪ್ಪರಿಗೆಯನೇಱಿ ನೋಡಿ, ಬೆಳಗಾಗಿ ಜಕ್ಕಣ್ಣ ದಂಡೇಶ1 ನು1 ಪ್ರೌಢನ ಸಭೆಗೆ ಬರದಮುನ್ನಲೆಂದನು. ಜಕ್ಕಣ್ಣ, ಅದೇನು ಗಡಬಡ ವೆಂಬ ವಾದ್ಯವು? ಸತ್ತವರ ಒಸಗೆಯೊ ಹೆತ್ತವರೊಸಗೆಯೊ, ಎನಲು ಸತ್ತವರ ಒಸಗೆ ಭಾರತರಾಮಾಯಣ, ಇದು ನಮ್ಮ ಶರಣರ ಭಕ್ತ್ಯಾಂಗನೆ, ಮುಕ್ತಿಯೆಂಬ ಶಿಶುವಂ ಹೆತ್ತ ಒಸಗೆಯೆನಲು, ನಿಮ್ಮ ಸಂಗ್ರಹದಲ್ಲಿ ಒಂದು ಪದ್ಯವನೋದಿ ಜಕ್ಕಣಾ ಎನಲು, ನಮಗೆ ಪಾಠವಿಲ್ಲವೆಂದು ಸುಮ್ಮನಿರಲು, ಇದೇನು ದೊಡ್ಡ ಗಣ್ಯವೆಯೆಂದು, ನಮ್ಮ ಪಾತ್ರದ, ಮಾಳಾದೇವಿ ಸೀತಾದೇವಿಗೆಲ್ಲಾ ಪಾಠನೆಂದು, ಅವರ ಮುಖದಿಂದೆ, ಕೋಣನ ಕೊಂಬಿನ ಮೇಲೆ ಏಳುನೂಱಿಪ್ಪತ್ತು ಸೇದೆಬಾವಿ, ಆ ಬಾವಿಯೊಳಗೊಂದು ಬಗರಿಗೆ, ಆ ಬಗರಿಗೆಯೊಳಗೊಬ್ಬ ಸೂಳೆ, ಆ ಸೂಳೆಯ ಕೊರಳೊಳಗೆ ಏಳುನೂಱಿ ಪ್ಪತ್ತಾನೆಯನೇರಿತ್ತ ಕಂಡೆ ಗುಹೇಶ್ವರಾ ಎಂಬ ವಚನವಂ ಪಾತ್ರದವರಿಂದ ಓದಿ ಸಲು, ಅದರರ್ಥವೇನು ಜಕ್ಕಣ್ಣ ಪಂಡಿತರೆ ಪೇಳಿಯೆನಲು, ನಮಗೇಕೆ ಬಂದೀತು, ನೀವು ಪಾಠಕರು, ನೀವೆ ಅರ್ಥವಂ ಮಾಡಿಯೆನಲು, ಅದಱರ್ಥವೇನು ಒಗಟೆಯ ಪದ್ಯ ಬನವಾಸೆಯ ಪಟ್ಟಣದ ಮುಮುಕಾರರಾಜನಲ್ಲಿ ಮುದ್ದಳಿಕಾಱನಲ್ಲಮನೆಂಬುವನು ಕಾಮುಲತೆಯೆಂಬಪಾತ್ರದ ಸ್ತ್ರೀಗೆ ಮೆಚ್ಚಿರಲು ಆಕೆ ಮರಣವಾಗಲು, ವಿರಹದ ಕಳವಳ ದಿಂದೆ ಮಾಡಿದ ಪದ್ಯವೆನಲು, ಆ ಮಾತಂ ಕೇಳಿ ಜಕ್ಕಣ್ಣ ಪಂಡಿತರು ಎರಡುಕರ್ಣವಂ ಮುಚ್ಚಿ ಹರಹರಾ ! ಎನಲು, ಇದೇನು ಎಂದು ಪೌಢರಾಯ ಕೇಳಲು, ಮಾಯಾ ಕೋಳಾಹಳನಾದ ನಿರಂಜನಗಣೇಶ್ವರನ ಮಾಯಾಸಕ್ತನೆಂದು ನುಡಿವುದು ದ್ರೋಹದ ಮಾತು ಕೇಳಲಾಗದು ಎನಲು, ಆ ವಚನದರ್ಥವಂ ನೀವು ವಿಸ್ತರಿಸಿಯೆಂದು ರಾಯ ಕೇಳಲು, ಆ ಸಭೆಯೊಳಗೆ ಜಕ್ಕಣ್ಣ ಪಂಡಿತರು ವೇದ, ಸ್ಮೃತಿ, ಆಗಮ, ಗ್ರಂಥ, ಪುರಾಣ ಹದಿನೆಂಟಕ್ಕೆ ಮೂವತ್ತೆರಡು ಉಪನಿಷತ್ತುಗಳಿಗೆ ಸಮ್ಮತವಾಗಿ ನಿರೂಪ ಮಂ ಕೊಡಲು, ಆ2ಗ ಸಭೆಯಲ್ಲಿರ್ದ2 ಹದಿನೆಂಟು ಮತದವರು ತಲೆದೂಗಿ ಆಶ್ಚರ್ಯವೆಂದು ಸ್ತುತಿಸುತ್ತಿರಲು, ಪೌಢರಾಯಂ ಮೆಚ್ಚಿ ರುದ್ರಕಂಕಣವನು, ತ್ರಿಸರವನು ಕೊಡುತ್ತಿರಲು ಮುಕುಂದಪೆದ್ದಿ ವೃಂದಾಚಾರ್ಯರಿಬ್ಬರು ಬಂದು ರಾಯನ ಕೈವಿಡಿದು ಕೊಡಬೇಡವೆಂದು ತಡೆದು ನಾನೆಂದಡೆ, ದ್ರೋಹವೆಂದಿರಿ, ನಿಮ್ಮ ಹಂಪೆಯ ಹರಿಯಣ್ಣ ಪಂಡಿತರ ರಗಳೆಯ ಪದ್ಯದಲ್ಲಿ ಉಂಟಾಗಿ, ಅದೆ ನಮಗೆ ತರವು ಮಾಪವೆನಲು ಶಿಲೆಯ ಕಂಥೆಯ ತೊಟ್ಟ, ರುದ್ರಾದಿಗಳಿಗೆಯು ಶೈವಮತದ, ಕವಿಗಳಿಗೆಯು ಹರಿಯಜೇಂದ್ರಾದಿ ಮುನುಮುನಿಗಳಿಗೆಯು, ವೀರಶೈವಪ್ರಮಥರ ಮಹತ್ವವು ತಿಳಿಯದು, ಎಂದು ಜಕ್ಕಯ್ಯನೆನಲು, ಆ ಮಾತಿಂಗೆ ವೃಂದಾ ಚಾರ್ಯನು, ನಮ್ಮ ಭಾರತವಂ ಸತ್ತವರ ಕಥೆಯೆಂದಿರಿ ಹಂಪೆಯ ಹರೀಶ್ವರನ ಪದ್ಯವು ಅಬದ್ಧವೆಂದಿರಿ, ಸತ್ತವರಲ್ಲದೆ ನಿತ್ಯರಾದವರ ಕಥೆಯನು ವೀರಶೈವರು

---

1. ಮಂತ್ರಿಯು (ಕ) 2. ಸಭೆಯಲ್ಲಿ (ಕ)

ಮಾಡಿದ ನಿಮ್ಮಗಣಂಗಳ ಕಥೆಯನು, ತಂದರೆ ಕಂಕಣವನು, ತ್ರಿಸರವನು ಕೊಡ ಯೆಂದು ತಡೆದು, ರಾಯನ ಓಲಗ ಹರದು ಹೋಗುವಾಗ ಒಂದು ತಿಂಗಳಿಗೆ ಕೊಂಡುಬನ್ನಿಯೆಂದು ಪೇಳಿ, ಪೋಗಲಿತ್ತ ಜಕ್ಕಣ್ಣಾಚಾರ್ಯರು ಮೊದಲಾದ ಭಕ್ತರು ಮನೆಗೆ ಬಂದು ಲಿಂಗಾರ್ಚನೆಯಿಂದೆ ಸುಖಮಿರಲು, ಚಿಂತೆಯಿಂದೆ ಆರಾಧ್ಯ ಚಾಮಯ್ಯ ನಿದ್ರೆಗೈಯಲು, ಸ್ವಪ್ನದಲ್ಲಿ ವೀರಭದ್ರೇಶ್ವರ ಬಂದು ಚಾಮಯ್ಯ ನೀನು ಚಿಂತಿಸದಿರು ಪ್ರಭುಲಿಂಗಲೀಲೆ ಇಪ್ಪತ್ತೈದು ಗತಿಯೆಂದು ದಿನವೊಂದಕ್ಕೆ ನೂ ಱೊಂದು ಪದನಂ ಮಾಡಿ, ಹನ್ನೊಂದುದಿನಕ್ಕೆ ಸಮಾಪ್ತಿಯಂ ಮಾಡೆಂದು ನಿರೂಪಿಸಲು, ಎಚ್ಚತ್ತು ನೋಡಿ, ಆರನು ಕಾಣದೆ ಮತ್ತೆ ನಿದ್ರಿಸಲು, ಉದ್ಧಾನ ವೀರೇಶ್ವರ ಬಂದು ಎಬ್ಬಿರಿಸಿ, ತನ್ನಹಸ್ತವಂ ಮಸ್ತಕದ ಮೇಲಿಟ್ಟು ಅಂಜಬೇಡ ಪ್ರಭುಲಿಂಗಲೀಲೆಯಂ ಮಾಡೆಂದು ಪೇಳಿ ಪೋಗಲು, ಚಾಮಯ್ಯನು ತಾ ಕಂಡ ಸ್ವಪ್ನವನು ಶಿವಭಕ್ತರಿಗೆ ಪೇಳಿ, ಪುಷ್ಪದ ತೋಂಟದಲ್ಲಿ ಕುಳ್ಳಿರ್ದು ಲೀಲೆತುಂಬಿದಂತೆ ದಿನವೊಂದಕ್ಕೆ ನೂಱೊಂದು ಪದನಂ ಬರೆದು ಹನ್ನೊಂದುದಿನಕ್ಕೆ ಸಮಾಪ್ತಿಯಂ ಮಾಡಿ, ಜಕ್ಕಣ್ಣಾಚಾರ್ಯರು ಮೊದಲಾದ ಭಕ್ತರು ಸಹವಾಗಿ ಪ್ರೌಢರಾಯನ ಸಭೆಗೆ ಪ್ರಭುಲಿಂಗಲೀಲೆಯಂ ಕೊಂಡುಪೋಗಿ ಓದಿಸುವಲ್ಲಿ, ಕಾಳಗದ ಕಥೆಯಲ್ಲ ಯೆಂಬ ಪದಕ್ಕೆ ಆಸ್ಥಾನದಲ್ಲಿರ್ದ ಶಾಸ್ತ್ರಿಗಳಿಗೆ ಅರ್ಥಬಾರದಿರಲು, ಜಕ್ಕಣ್ಣಪಂಡಿತರು ಅರ್ಥೈಸಲು, ಅಲ್ಲಿರ್ದ ಸಭೆ ಮೆಚ್ಚಿ ತಲೆದೂಗಲು, ಪ್ರೌಢರಾಯ ಮೆಚ್ಚಿ ಶಿವಪುರ ವೆಂಬುದೊಂದು ಪುರವನು ಕಂಕಣ ತ್ರಿಸರವನು ಕೊಟ್ಟು ಜಕ್ಕಣಾಚಾರ್ಯರಂ ಮನ್ನಿಸಿ ಸತ್ತವರ ಕಥೆಯಲ್ಲಯೆಂಬುದೊಂದು ಪದನ ಬಿಡಿಯೆಂದು ಬೇಡಿ ಕೊಳಲು, ಬಿಡುವುದಕ್ಕೆ ಆಗದು ವೀರಭದ್ರೇಶ್ವರನು ಸ್ವಪ್ನದಲ್ಲಿ ಬಂದು ಹಸ್ತ ವನು ಮಸ್ತಕದಮೇಲಿಟ್ಟು, ಪೇಳಿದನೆನಲು, ಇವರು ಪೇಳಿದಂತೆ ರಾಯನ ಸ್ವಪ್ನದಲ್ಲಿ ಪೇಳಲು, ವೀರಭದ್ರನ[1] ಗುಡಿ[1]ಯ ಮುನ್ನೂಱುವರಹದಿಂದ ಕಟ್ಟಿಸಿದ, ಪ್ರೌಢ ರಾಯನು ಸುಖದಲ್ಲಿರಲು, ಇತ್ತ ಜಕ್ಕಣಾಚಾರ್ಯರು, ಕಲ್ಲುಮಠದ ಪ್ರಭುದೇ[2]ವರು ಚಾಮಯ್ಯ[2] ಮೊದಲಾದ ಶಿವಭಕ್ತರು ಪ್ರಭುಲಿಂಗಲೀಲೆಯಂ ಮೆರವಣಿಗೆಯಂ ಮಾಡಿ ಸುಖದಲ್ಲಿರ್ದರು.

## "ಮೇರು ಲೋಕಂಗಳಾಧಾರ ಅಮರಾಳಿಗಾಗಾರ" ಎಂಬುದಕ್ಕೆ ಕಥೆ

ಜಂಬೂದ್ವೀಪದ ಮಧ್ಯದಲ್ಲಿ ಒಪ್ಪುವ ಸುವರ್ಣಾದ್ರಿಯು ವೃತ್ತಾಕಾರವಾಗಿ ಹದಿನಾಱುಸಾವಿರಯೋಜನ ಭೂಮಿಯಲ್ಲಿ ಹೂಣಿ, ಎಂಬತ್ತುನಾಲ್ಕುಸಾವಿರಯೋ ಜನ ಮೇಲುನ್ನತವಾಗಿ ಒಂದು ಲಕ್ಷಯೋಜನ ವಿಶಾಲಮೇಲುನ್ನತ ಮೂವತ್ತೆರಡು ಸಾವಿರ ಯೋಜನವುಳ್ಳದಾಗಿರ್ಪುದು. ಆ ಮೇರುವಿನಗ್ರದಲ್ಲಿ ಬ್ರಹ್ಮಂಗೆ ಮಾನಮಾ ಎಂಬ ಪೆಸರಿನಿಂದ ಒಪ್ಪುವ ಚತುರ್ದಶಸಾವಿರಯೋಜ[3]ನದ[3]ಗಲದ ರತ್ನದಕೋಟೆ

1. ಪೂಜೆ (ಗ ಚ) 2. ವಾರ್ಯರು (ಗ) ವಾಚಾರ್ಯರು (ಚ) 3. ನದಿಂದ (ಗ ಚ)

ಮೌಕ್ತಿಕದ ತೆನೆಗಳುಳ್ಳ ಸಕಲ ದೇವತೆಗಳಿಂದಲಂಕೃತಮಾದ ಸರ್ವಸುಖಭೋಗ ಪರಿಕರಂಗಳಿಂದ ಆಢ್ಯಮಪ್ಪ ಪಟ್ಟಣ ರಮ್ಯವೆನಿಸಿ ಒಪ್ಪುತ್ತಿಹುದು. ವಿಷ್ಣುವಿಗೆಯು ಸರ್ವಶೃಂಗಾರವುಳ್ಳ ಪಶ್ಚಿಮದಲ್ಲಿ ಬಳಿಕಾ ಈಶಾನ್ಯದಿಕ್ಕಿನೊಳು ಸರ್ವೇಶ್ವರಂಗೆ ನೆಲೆ ಮನೆಯಾದ ರತ್ನಮಯಶೃಂಗ ತೇಜೋಸ್ಕಂದವೆಂಬ ಪೆಸರಿನಿಂದಿಪ್ಪುದು. ಅದಱ ತಟದಲ್ಲಿ ಸ್ಕಂದ ನಂದಿ ಮಹಾಕಾಳರಾದಿಯಾದ ಅನೇಕ ಗಣೇಶ್ವರರಿಗೆ ಅನಂತಕೋಟಿ ಆಶ್ರಯಂಗಳುಂಟು. ಬಳಿಕಾ ಮೇರುವಿನಷ್ಟದಿಕ್ಕಿನಲ್ಲಿ ಇಂದ್ರಾಗ್ನಿ ಯಮ ನೈರುತ್ಯ ವರುಣ ವಾಯಾವ್ಯ ಕುಬೇರ ಈಶಾನ್ಯರ್ಗೆ ಅಮರಾವತಿ, ತೇಜೋವತಿ 1ಶಯಾ1ಮಿನಿ, ಕ್ಷೋಭಾವತಿ, ಶುದ್ಧಾವತಿ, ಗಂ2ಧಾ2ವತಿ ಮಹಾ ಯಶೋವತಿ3ಯು ನ3ವ ರತ್ನಂಗಳ ಕೋಂಟೆಯ ತೆನೆಗಳಿಂದೆಂಟು ಪಟ್ಟಣ. ಒಂದೊಂದಕ್ಕೆ ನಾಲ್ಕು ಉಪ ಪಟ್ಟಣಂಗಳುಂಟಾಗಿ ಬೇಱೆ ಬೇಱೆ ಆಱುಸಾವಿರಯೋಜನದಗಲವಾಗಿರುವವು. ಪೀತ ರಕ್ತ ಕೃಷ್ಣ ಧೂಮ್ರ ಶುಕ್ಲ, ಚಿತ್ರ ಸಿತ ವೃಷಭವರ್ಣಗಳಿಂದೆ ಕರಿ ತಗರು ಕೋಣ ಮನುಷ್ಯ ಮಕರ ಎರಳೆ ತುರಗ ವೃಷಭವಾಹನಗಳಿಂ ವಜ್ರ, ಶಕ್ತಿ ದಂಡ ಖಡ್ಗ ಪಾಶ ಅಂಕುಶ ಗದೆ ಶೂಲವೆಂಬಾಯುಧಂಗಳಿಂದ ಅಷ್ಟ ದಿಕ್ಪಾಲಕರ ಪಟ್ಟಣಂಗಳಿಂ ಮುಖ್ಯವಾದ ಇನ್ನೂಱಪ್ಪತ್ತೊಂದು ಭುವನಂಗಳಿಗೆ ಮೇರುವೆ ಆಶ್ರಯವಾಗಿ ಸಕಲ ದೇವತೆಗಳಿಗೆ ಗರುಡ ಗಂಧರ್ವ ಯಕ್ಷ ರಾಕ್ಷಸಾದಿ ನರಸುರರಿಗೆ ಮನೆಯಾಗಿಪ್ಪುದು. ಮೇರುಪರ್ವತದಿಂ ಶ್ರೀ ಗುರುನಂದೀಶ್ವರನು ಬ್ರಹ್ಮಾಂಡಪುರಾಣದಲ್ಲಿ ಸನತ್ಕುಮಾರಂಗೆ ನಿರೂಪಿಸಿದರು.

## "ಹರಿಬ್ರಹ್ಮಾದಿಗಳಹಂಕರಿಸಲು ಉರಿಲಿಂಗವಾದ ಪರಮತೇಜೋರಾಶಿ" ಎಂಬುದಕ್ಕೆ ಕಥೆ

ಲೈಂಗ್ಯಪುರಾಣ ಸ್ಕಂದಪುರಾಣದಲ್ಲಿ ಸೂತಮುನಿ ಋಷಿಗಳಿಗೆ ಪೇಳಿದನು. ಹಿಂದೆ ಅನಂತಕೋಟಿ ಪ್ರಳಯಕಾಲಂಗಳು ಪೋಗಿ ಕಾಳಾಂಧಕಾರ ವರ್ತಿಸಿ ನಿಂದಲ್ಲಿ ಯುಗಯುಗಂಗಳು ಹೋಗಿ ಕೋಟ್ಯನುಕೋಟಿ ಪ್ರಳಯಕಾಲವು ಹೋಗಲು ನಿಷ್ಕಲ 4ಪರ4ಶಿವನ ಕಣ್ಣೆವೆಯಾಟಕೆ, ಬ್ರಹ್ಮಾದಿಗಳಿಗೆ ಅನಂತಕೋಟಿ ಪ್ರಳಯವಾಗಲು, ಅಲ್ಲಿ ಜಲಪ್ರಳಯ ಒದಗಿ ಸಚರಾಚರಾದಿಗಳು ನರಸುರಮನುಮುನಿ ಯಕ್ಷರಾಕ್ಷಸಾದಿಗಳು ಶಿವಧೋ! ಎಂದು ಶಿವನ ಮೊಱೆಹೊಗಬೇಕೆಂದು ನೆನೆಯಲು ಅನಿತಕ್ಕೆ ಶಿವನ ಸದ್ಧರ್ಮವೇರೂಪಾದ ನಂ5ದೀ5ಶ್ವರನು ತನ್ನ ಬಾಲದಂಡದಲ್ಲಿ ಸಮಸ್ತ ಪ್ರಾಣಿಗಳಿಗೆ ಇಂಬುಗೊಟ್ಟು ರಕ್ಷಿಸಲು, ಇತ್ತ ನಿಷ್ಕಲ ಪರಶಿವಂಗೆ ಮುನ್ನಿನಂತೆ ಜಗತ್ಸೃಷ್ಟಿಮಾಡುವ ಲೀಲೆದೋಱಲು ಆ ವೃಷಭೇಂದ್ರಂಗೆ ನಿನ್ನ ಸದ್ಧರ್ಮದಿಂದೆ

---

೧. ಸಂಯ [ಕ]? 2. ಗಾ [ಕ] 3. ಯು ಕೈಲಾಸನ [ಕ] 4. ಪರಂಜ್ಯೋತಿಯಾದ [ಗ] 5. ದಿಕೇ [ಕ]

ಪಿಂಡಾಂಡಗಳ ನಿರ್ಮಿಸೆಂದು ಪೇಳಲಾ ವೃಷಭೇಂದ್ರನು ಚಿನ್ನಾದ ಚಿದ್ಬಿಂದು ಚಿತ್ಕಳೆ ಯೊಂದುಗೂಡಿದ ವಿಭೂತಿಯಂ ಆ ಪ್ರಳಯ ಜಲದಮೇಲೆ ತಳಿಯಲಾ ಜಲ ಬಲಿದು ಹೆಪ್ಪಾಗಿ, ಭೂಮಿಯಾಕಾರವಾಗಿರಲು, ಬ್ರಹ್ಮವಿಷ್ಣ್ವಾದಿಗಳು ತೇಲುತ್ತೆ ಮುಳು ಗು1ತ್ತ1 ಆಲದೆಲೆಯ ವಿಷ್ಣು ಸೇರಿ ಜೀವಿಸು1ತ್ತೆ1 ಪದ್ಮಪತ್ರವ ಬ್ರಹ್ಮ ಸೇರಿ ಜೀವಿ ಸು1ತ್ತೆ1 ವೃಷಭೇಂದ್ರನ ರೋಮಕೂಪದಲ್ಲಿ ಸಚರಾಚರ ಜೀವಿಗಳು ಹರಿವಿರಿಂಚ್ಯಾ ದಿಗಳು ಜೀವಿಸಲು, ಆ ಬಲಿದ ಭೂಮಿಯಂ ಬ್ರಹ್ಮ ಸೇರಿ ಇದಂ ಭೂತೆಂದು ಸೃಷ್ಟಿಯಂ ಮಾಡಲು, ಹರಿಯು ಹುಟ್ಟಿದ ಜೀವಿಗಳಿಗೆ ರಕ್ಷಣೆಯಂ ಮಾಡುತ್ತಿರಲು, ಕ್ಷೀರಶರಧಿಯಲ್ಲಿ ಹರಿ ಮಲಗಿರ್ದನಾ ವೇಳೆಯಲ್ಲಿ ಬ್ರಹ್ಮನು ಭೂಪ್ರದಕ್ಷಿಣದಿಂ ನೋಡು ತ್ತೆ ಬರುತ್ತಿರಲು, ಹರಿಯಂ ಕಂಡು ನೀನಾರು ಎಂದು ಕೇಳಲು, ಅಹಂ ಜಗತ್ಕರ್ತನೆ ನಲು ನೀನಾರು ಎನಲು, ಅಹಂ ಬ್ರಹ್ಮವೆನಲು, ನಾನು ಕರ್ತನು ತಾನು ಕರ್ತನುಯೆಂ ದನಂತಕಾಲ ಯುದ್ಧವಂ ಮಾಡುವಲ್ಲಿ ಪಾಶುಪತಾಸ್ತ್ರದಿಂದಗ್ನಿಬಾಣದಿಂದೆ ಜಗಂಗಳೆಲ್ಲ ಬೆಂದು ಸಂಹಾರವಾಗಲು ಅವರ ಗರ್ವದ ಕದನವಂ ಮುಱಿಯಲೋಸುಗ ಕೋಟಿ ಚಂದ್ರ ಸೂರ್ಯಾಗ್ನಿಗಳ ಬೆಳಗ ಪಳಿವ ಉರಿಲಿಂಗವು ಮೂಡಿ ಸಮುದ್ರಮಧ್ಯದಲ್ಲಿ ನಿಂದು ಅವರು ಶಿವನ ನೆನೆದುದೆ ಶಿವರಾತ್ರಿಯೆಂದು ಜಗಕೆ ತಂಪ ಬೀಱಿ ಜಗವಂ ಮುನ್ನಿನಂತೆ ರಕ್ಷಿಸಿದ ಶಿವನು ಎಂದು, ಸೂತಮುನೀಶ್ವರನು ಮುನಿಗಳಿಗೆ ಪೇಳಿದನು.

### "ಜಂಬೂನದಿ2ಯುನವ2 ಲಂಬಿತ ದ್ವೀಪಕದಂಬ ಭಾರತವರ್ಷವೆಂಬುದಕ್ಕೆ ಕಥೆ"

ಬ್ರಹ್ಮಾಂಡದೊಳಗೊಪ್ಪುವ ಹದಿನಾಲ್ಕು ಭುವನಕ್ಕೆ ಮಧ್ಯವಾದ ಭೂಲೋಕ, ಅದಱ ಮಧ್ಯದಲ್ಲಿ ಮಹಾಮೇರು ಒಪ್ಪುವುದದಱ ದಕ್ಷಿಣದಿಕ್ಕಿನಲ್ಲಿ ಗಂಧಮಾಧನವೆಂಬ ಕೀಲಕ ಪರ್ವತ ಒಪ್ಪುವುದು. ಆ ಪರ್ವತದ ಮೇಲಿರ್ದ ಜಂಬೂವೃಕ್ಷದಲ್ಲಿ ಮಹಾಗಜ ಪ್ರಮಾಣಿನ ಫಲಂಗಳು ಅಸಂಖ್ಯಾತವುಂಟವಱಲ್ಲಿ, ಮಹಾಗಜ ಪ್ರಮಾಣವೆಂದೊಡೆ ನರನ ನಾನೂಱುಮೊಳದುದ್ದ ಜಂಬೂನೇಱಲ ಪಣ್ಣುಗಳುದುರಿ ಗಂಧಮಾಧನಗಿರಿ ಯಿಂದ ಪಣ್ಗಳು ಬಿದ್ದು ಕಳಿತು ರಸವುಕ್ಕಿ ತೆರೆಮಸಗಿ ವಿಶಾಲಮಾಗಿ ಜಂಬೂನದಿಯೆ ನಿಸಿಕೊಂಡು, ಆ ಮೇರುವಿನ ಮೂಲಮಂ ಬಳಸಿ ಪರಿವುತ್ತಿಪ್ಪುದು. ಆ ಜಂಬೂನದಿ ಯಿಂದ ಈ ದ್ವೀಪಕ್ಕೆ ಜಂಬೂದ್ವೀಪವೆಂಬ ಪೆಸರಾಯಿತ್ತು. ಆ ಜಂಬೂದ್ವೀಪ ಮೊದ ಲಾದ ಸಪ್ತದ್ವೀಪಂಗಳು ಸಪ್ತಸಮುದ್ರಂಗಳು ಅದಱ ಗಿರಿ ನದಿ ನಂದನವನಾದಿ ಗಳಿಂದ ಅತಿವಿಚಿತ್ರ ರಚನೆಯನುಳ್ಳ ಭೂಲೋಕ ಒಪ್ಪುತ್ತಮಿರ್ದುದು. ಅದ ಱಲ್ಲಿ ಒಂಭತ್ತು ಖಂಡಗಳುಂಟು. ಅದಕ್ಕೆ ಬೇಱೆ ಬೇಱೆ ಕರ್ತೃಗಳುಂಟು. ಅದೆಂತೆಂದೊಡೆ ಪೂರ್ವದಲ್ಲಿ ಸ್ವಯಂಭು, ಸ್ವಾರೋಚಿಷ ರೈವತಕ ಚಾಕ್ಷುಷ

1. ತ್ತಿರಲು (ಕ) 2. ಯುವ (ಕ)

ಉತ್ತಮ ಮಧ್ಯಮ ವೈವಸ್ವತ ಬ್ರಹ್ಮಸಾವರ್ಣಿಕ ವಿಷ್ಣುಸಾವರ್ಣಿಕ ರುದ್ರ ಸಾವರ್ಣಿಕ ಸೂರ್ಯಸಾವರ್ಣಿಕ ತೈಜಸಾವರ್ಣಿಕ ವೇದಸಾವರ್ಣಿಕ ಬ್ರಹ್ಮಸಾವ ರ್ಣಿಕರೆಂಬ ಹದಿನಾಲ್ಕು ಮನುಗಳೊಳಗೆ ಮೊದಲ ಸ್ವಯಂಭುವ ಮನುವಿಂಗೆ ಉತ್ತಾ ನಪಾದ ಎಂದು ಪ್ರಿಯವ್ರತ1ಎಂದು ಇಬ್ಬ1ರು ಮಕ್ಕಳು. ಮತ್ತವರೊಳಗೆ ಉತ್ತಾನ ಪಾದಯೆಂಬವಗೆ ಧ್ರುವನೆಂಬವನೊಬ್ಬನೇ ಮಗ. ಆತನು ನಕ್ಷತ್ರಮಂಡಲಕ್ಕೆ ಆಧಾರ ಕತ್ವದಿಂದಲೈಶ್ವರ್ಯಸಂಪನ್ನನಾಗಿ ಮುನ್ನ ಪೇಳಿದ ಭೂಲೋಕಕ್ಕಗ್ರಣಿಯಾಗಿರ್ಪನು. ಪ್ರಿಯವ್ರತನೆಂಬಾತಂಗೆ ಅಗ್ನಿಋದ್ಧ ಮೇಧಾತಿಥಿ ವಪುಷ್ಮಂತ ಜ್ಯೋತಿಷ್ಮಂತ ದ್ಯುತಿಮಂತ ಕಶ್ಯಪ ವರ ಎಂಬವರು ಏಳುಜನ ಮಕ್ಕಳು. ಅವರಿಗೆ ಆ ಪ್ರಿಯವ್ರತನು ಜಂಬೂದ್ವೀಪ ಮೊದಲಾದ ಏಳುದ್ವೀಪಂಗಳನು ಹಂಚಿಕೊಟ್ಟನು. ಪ್ರಿಯವ್ರತನ ಹಿರಿಯ ಮಗನಾದ ಅಗ್ನಿಋದ್ಧನಿಗೆ ನಾಭಿ ಕಿಂಪುರುಷ ಹರಿ ಇಳಾವೃತ ರಮ್ಯಕ ಹಿರ ಣ್ಯಕ ಉತ್ತರ ಕುರು ಭದ್ರಾಶ್ವ ಕೇತುಮಾಲ್ಯ ಎಂಬವರು ಒಂಭತ್ತು ಮಂದಿ ಅಗ್ನಿ ಋದ್ಧನ ಮಕ್ಕಳು. ಅವರಿಗೆ ಪ್ರಿಯವ್ರತನ ಹಿರಿಯ ಮಗನಾದ ಅಗ್ನಿಋದ್ಧನು ತನ್ನ ದಾದ ಜಂಬೂದ್ವೀಪವಂ ನವಖಂಡವಂ ಮಾಡಿಕೊಡಲು, ಅವರವರ ಪೆಸರಿನಿಂದಾ ಯಾಯ ಖಂಡಗಳೆಂದು ಪೆಸರಾದವು. ಅವರೊಳಗೆ ನಾಭಿಯ ಮಗನೇ ವೃಷಭನು; ಆ ವೃಷಭನ ಮಗನೇ ಭರತನು; ಈ ಭರತಖಂಡವೆಂದು ಪೆಸರಾಯಿತ್ತು. ಈ ಜಂಬೂ ದ್ವೀಪವಂ ಬಳಸಿಕೊಂಡು ಏಳುದ್ವೀಪಗಳು ನವಖಂಡದೊಳಗೆ ಮೇರುವಿನ ದಕ್ಷಿಣದಿಕ್ಕಿ ನಲ್ಲಿ ಭರತಖಂಡವೆಂದು ಒಂಭತ್ತುಸಾವಿರಯೋಜನವಾಗಿಪ್ಪುದು ಎಂದು ಭುವನ ಕೋಶ ವಿಸ್ತಾರದಲ್ಲಿ ನಂದೀಶ್ವರನು ಸನತ್ಕುಮಾರಂಗೆ ನಿರೂಪಿಸಿದನು.

## "ಅಗದು ನಟ್ಟರು ದೇವರುಗಳು ಮೇರುವಂ" ಎಂಬುದಕ್ಕೆ ಕಥೆ

ಗಿರಿಕಂತುಕಾಟನೆಂಬ ಗಣೇಶ್ವರನು ಚಿತ್ಪಿಂಡವೆಂಬ ಶರೀರವುಳ್ಳಾತನಾಗಿ ವಿಹಂಗಜ್ಞಾನವೆಂಬ ಸುಜ್ಞಾನ ಸಂಬಂಧಿಯಾಗಿ ಸ್ವರ್ಗ ಮರ್ತ್ಯ ಕೈಲಾಸ ಮೊದ ಲಾದ ಹದಿನಾಲ್ಕು ಲೋಕಕ್ಕೆ ನೆನೆದಮಾತ್ರದಲ್ಲಿಯೆ ಹೋಗುತ್ತಂ ಬರುತ್ತಂ ಮನೋ ಗಮನವುಳ್ಳಾತನೆನಿಸಿ ಶಾಂಭವಲೋಕದಿಂದ ಎಲ್ಲಾ ಲೋಕವಂ ಚರಿಸಿ ನೋಡುತ್ತಂ ತನ್ನ ಲೀಲಾವಿನೋದದಿಂದ ಅನಂತಕೋಟಿ ಪರ್ವತಂಗಳನೆಲ್ಲವಂ ತಮ್ಮಂಗದ ರೋಮದಿಂದ ಬಂಧಿಸಿ, ಆಪಾದಮಸ್ತಕಪರಿಯಂತರವು ಆಭರಣವಾಗಿ ಧರಿಸಿ ದೊಡ್ಡಿತಾದ ಗಿರಿಗಳನೆ ಚೆಂಡಿನಂತೆ ಹಾರಿಸಿ ಆಡುತ್ತಂ, ಕಿಱಿದಾದ ಗಿರಿಗಳನೆ ಅಣ್ಣೇ ಕಲ್ಲಾಡುತ್ತ, ಕುಕ್ಕುಟಾಂಡ ಕೂಷ್ಮಾಂಡ ಕಪಿತ್ಥಾಂಡ ಔದುಂಬರಾಂಡ ಮಯೂ ರಾಂಡ ಅಮಳಖಂಡಂಗಳಲ್ಲಿ ಚರಿಸಿ ನೋಡುತ್ತ ಮತ್ತೀ ಭೂಲೋಕಕ್ಕೆ ಬಂದು ಉದಯಾದ್ರಿ, ರೋಹಣಾದ್ರಿ ಮಲೆಯಾದ್ರಿ ವಿಂಧ್ಯಾದ್ರಿ ಮಾನಸೋಕಾದ್ರಿ ಗಂಧ

1. ರೆಂಬೀರ್ವ (ಗ ಚ)

ಮಾಧನಾದ್ರಿ ಜಟರಾದ್ರಿ ಅರುಣಾದ್ರಿ ಶೃಂಗಾದ್ರಿ ಪರ್ಯಾದ್ರಿ ವೊದಲಾದ ಪರ್ವತಂಗಳಂ ಕಂಡು ಹುಲುವೊರಡಿಗಳೆಂದು ಬಿಟ್ಟು ರಜತಾದ್ರಿ ಶಿವನ ವಿನೋದ ಮಂಟಪವೆಂದು ಬಿಟ್ಟು ಕನಕಾದ್ರಿ ಕಣ್ಗೆ ರಮ್ಯವಾಗಿ ಕಾಣಿಸಲು, ಚಂಡಿನಂತೆ ಹಾರಿಸಿ ಆಡುವೆನೆಂದು ಎರಡು ಬೆರಳಿನಿಂದ ಕೀಳುವಲ್ಲಿ ವೀರಭದ್ರೇಶ್ವರ ನಂದಿ ಸ್ಕಂದಾದಿ ಗಣೇಶ್ವರರು ಬಂದು ಕಯ್ಯಂ ಪಿಡಿದು ಈ ಪರ್ವತವು ಪರಶಿವನ ಉತ್ಪತ್ತಿ ಸ್ಥಿತಿ ಸಂಹಾರ ಸ್ಥಿರೋಭಾವ ಅನುಗ್ರಹವೆಂಬ ಪಂಚಕೃತ್ಯವಂ ನಟಿಸುವುದಕ್ಕೆ ಆಶ್ರಯವಾಗಿಪ್ಪುದೆನಲು, ಆಗ ಗಣೇಶ್ವರನು ಗಹಗಹಿಸಿ ನಗುತುಂ ನಂದಿ, ಭೃಂಗಿ, ಸ್ಕಂದ, ವೀರೇಶ್ವರ ವೊದಲಾದ ಗಣೇಶ್ವರರಿಗೆ ನಮಸ್ಕರಿಸಿ, ಸುಖಸಂಭಾಷಣೆಯೊಳ ಗೋಲಾಡಿ ಅವರ ಬೀಳುಕೊಂಡು ಶಾಂಭವಲೋಕಕ್ಕೆ ಗಿರಿಕಂತುಕಾಟನಗಣೇಶ್ವರ ಪೋಗಿರಲತ್ತ, ಇತ್ತ ಹರಿಯಜೇಂದ್ರಾದಿಗಳು ನಡುಗುತ್ತ ನುಡಿದರು. ಹರನು ಯಕ್ಷ ರೂಪಾಗಿ ಬಂದಿಟ್ಟ ತೃಣವಂ ಕೀಳಲಾರದೆ ದೇವತೆಗಳೆಲ್ಲಾ ಭಂಗಿತರಾದರು. ಲಕ್ಷ ಯೋಜನದ ಸುವರ್ಣ ಪರ್ವತವು ಹದಿನಾಱುಸಾವಿರ ಭೂಮಿಯಲ್ಲಿ ಹೂಳಿರ್ದುದನೆ ತೃಣವಂ ಕೀಳುವಂತೆ ಕಿತ್ತನು. ಗಣೇಶ್ವರನು ಪ್ರಮಥಗಣಂಗಳಿಗೆ ಪರ್ವತವು ತೃಣ ಸಮಾನವಲಾ ಎಂದು ಮನುಮುನಿಗಳು ನಡುಗುತ್ತ ಬಂದು ಶಿವಂಗೆ ಬಿನ್ನೈಸಲು, ಕನಕಾದ್ರಿಯ ಬಲುಮೆಯಂ ಮಾಡಿ ಎಂದು ಶಿವಂ ನಿರೂಪಿಸಲಾಗ ರಾಕ್ಷಸರ ಬಡಗಿ ಯಾದ ಮಯನು ದೇವತೆಗಳ ಬಡಗಿಯಾದ ವಿಶ್ವಕರ್ಮನು ನೆರೆದ ಸುರಾಸುರರೆಲ್ಲರು ಕೀಲಕಪರ್ವತಂಗಳಂ ಒತ್ತುಕೊಟ್ಟು ಬಲಿಮೆಯಂ ಮಾಡಿ ಕನಕಾದ್ರಿಯಂ ನಿಲಿಸಿ ದರು. ಅತ್ತ ವೊದಲೊಂದು ಯುಗಕಲ್ಪದಲ್ಲಿ ದೇವತೆಗಳು ಮೇರುವೆಯಂ ಕಿತ್ತು ಕಡೆ ಗೋಲಾಗಿ ಕಡೆದು ಮುಱಿದು ತಲೆಗಳಕಾಗಿ ನಿಲಿಸಿದರೆಂದು ಪೇಳುವರು ಮತ್ತಾರೂ ಕೀಳದಂತೆ ಬಲಿಮೆಯಂ ಮಾಡಿ ನಿಲಿಸಿದರು. ಇಂತಪ್ಪ ಪ್ರಮಥನೊಬ್ಬ ಮುನಿದು ಕಣ್ದೆವೆಯನಿಕ್ಕಲು ಕೋಟಿ ಬ್ರಹ್ಮಾಂಡಂಗಳು ಒಡೆದು ' ಹುಡಿಯಾಗಿ ಸಂಹಾರವಾಗು ತ್ತಿಪ್ಪವು. ಒಲಿದು .ನೋಡಿದಡೆ ಮುನ್ನಿನಂತೆ ಉದಯಿಸಿ ಬಾಳುತ್ತಿಪ್ಪವು. ಪ್ರಮಥ ಗಣಂಗಳ ಘನ ಮಹತ್ವವನು ವೇದಾಗಮ ಪುರಾಣಂಗಳು ಕೊಂಡಾಡಲಱಿಯದೆ ನಡುಗುತ್ತಿರ್ದುವೆಂದು ಹರನು ಪಾರ್ವತಿಗೆ ನಿರೂಪಿಸಿದರು.

## "ನಂದಿ ನಗುತ ಕಿತ್ತಿಟ್ಟ ಮಹೇಂದ್ರನಗವಂ" ಎಂಬುದಕ್ಕೆ ಕಥೆ

ಹರಿಯಜಾದಿ ದೇವತೆಗಳು ಶಿವನಂ ಓಲೈಸುವುದಕ್ಕೆ ಕೈಲಾಸಕ್ಕೆ ಬರುವಾಗ ಅನಿಮಿಷರಾಜನು, ವೃಷಭೇದ್ರನಂ ಕಂಡು ಹಾಸ್ಯವನಾಡಿ ಹೋಗಿ ಬರುವಾಗ, ದೇ1ವಲ್ಯ1ಋಷಿಯು ವೃಷಭನ ದರ್ಶನವನಿಚ್ಛೈಸಲು, ಅವನಿಗೆ ದರ್ಶನವನಿತ್ತು ವೃಷಭೇಂದ್ರಂ ಪವಡಿಸಿರಲು, ದೇವತೆಗಳು ಕಂಡು ಕೀಲಕಪರ್ವತದಲ್ಲಿ ಕಂಡ ಮುದಿ ನಂದಿ ಇಲ್ಲಿ ಬಂದಿದೆಯೆಂದು ಪ್ರಾಯದೈಶ್ವರ್ಯದ ಗರ್ವದಲ್ಲಿ ಬಂದು ನಂದಿಯ

·1 ವಾಲ್ಮಧ (ಕ)

ಬಾಲದ ರೋಮವಂ ಕೀಳಲು, ಆಗ ಬಾಲವನೆತ್ತಿ ಹೊಡೆಯಲು, ದೇವೇಂದ್ರನ ಮುಖ ತಾಗಲು। ಅವನೆಂದನು. ಆನೆ, ಕುದು[1]ರೆಗ[1]ಳಿರಲು, ಶಿವನು ಈ ಮುದಿಯೆತ್ತನೇಱಲುಬಹುದೆ ಎನಲು, ದೇವೇಂದ್ರನ ಮೇಲೆ ಕೋಪಿಸಿ, ಕೀಲಕ ಪರ್ವತವನೇಱಿ, ಉದ್ದಕ್ಕೆ ಬೆಳೆದು ನಿಲಲು, ಚಂದ್ರಸೂರ್ಯಾದಿಗಳ ಎಡೆಯಾಟ ತಡೆದು ಕತ್ತಲೆಯಾಗಲು, ಆಗ ದೇವತೆಗಳು ವಿಂಧ್ಯಾದ್ರಿಯು ಮತ್ತೆ ಬೆಳೆಯಿತ್ತು, ಕತ್ತಲೆಯಾಯಿತ್ತೆಂದು ಶಿವಂಗೆ ಬಿನ್ನೈಸಲು, ಅದು ನಂದೀಶ್ವರನ ತಂತ್ರವೆಂದಱಿದು ಶಿವನು ಆ ನಂದೀಶ್ವರನಂ ಕರೆದುಕೊಂಡುಬನ್ನಿಯೆಂದು ವಿಷ್ಣುವೊದಲಾದ ದೇವತೆಗಳಂ ಕಳುಹಲು, ಓಂಕಾರವೆಂಬ ಮೇವನೆ ಮೇದು ಪರಮಾನಂದವೆಂಬ ಜಲವ ನೀಂಟಿ, ಶಿವಧ್ಯಾನವೆಂಬ ಮೆಲುಕನಿರಿವುತ್ತಿ ಸುಮಾನದಿಂದಿರೆ ಶಿವನ ಬಳಿಗೆ ಬನ್ನಿಯೆಂದು ಕರೆಯಲು, ಕೇಳದಂತೆ ಸುಮ್ಮನಿರಲು, ಇಂದ್ರವೊದಲಾದ ದೇವತೆಗಳು ಮುತ್ತಿ ಹಿಡಿ, ಬಡಿ, ತಿವಿ, ಮುದಿಯೆತ್ತು ಏಳಲಾರದು ಎಂದು ಗರ್ವದಿಂದ ನುಡಿಯಲು, ಆಗ ಕೋಪಿಸಿ, ಮೇರುವಂ ಪಾದದಲ್ಲಿ ಕೆದಱಿ ಬಿಸುಟು ಐರಾವತವಂ ಕೊಂಬಿನಲ್ಲಿ ತಿವಿದೆತ್ತಲು, ಆಗ ಮುದಿಗೂಳಿಯಃ ಪಾಶದಲ್ಲಿ ಬಂಧಿಸಿ ಹೊತ್ತುಕೊಂಡು ಹೋಗುವೆವೆಂದು ಮೋಹರಿಸಲು, ಆಗ ಮಹೇಂದ್ರನಗವಂ ಕಂಡು ನಂದೀ[2]ಶಂ[2] ನಗುತ್ತೆ ಶೃಂಗದಲ್ಲಿ ಕೆದಱಿಡಲು, ಅನಂತಸುರರು ಮರಣವಾಗಲು, ನಾಸಿಕದಲ್ಲಿ ಉಚ್ಛ್ವಾಸವಂ ಸೇದಿಬಿಡಲು, ಹರಿಯು ಬ್ರಹ್ಮಾಂಡದ ಕಃಟಾಹವಂ[3] ತಾಗಿ ತಾಗಿ ಬರುತ್ತೆ ಹೋಗುತ್ತಿರಲು, ಉಳಿದ ದೇವತೆಗಳು ಶಿವನಂ ಸ್ತುತಿಸಲು, ಶಿವನು ನಂದೀಶ್ವರನಿದ್ದೆಡೆಗೆ ಬರಲೆದ್ದು ವಂದಿಸಿ ಶಿವನ ಬೆಸನದಿಂದ ಹರಿಯಜೇಂದ್ರಾದಿಗಳಂ ರಕ್ಷಿಸಿ, ಕಳುಹಲು, ಪ್ರಮಥರು ಸಹವಾಗಿ ಶಿವನು ನಂದೀಶ್ವರನನೇಱಿ ಕೈಲಾಸಕ್ಕೆ ಹೋದರು.

## "ಕುಮಾರ ತಟ್ಟುಗಿದ ಕ್ರೌಂಚಾದ್ರಿಯು ನಗುವಂತೆ ಹಿಮಗಿರಿ" ಎಂಬುದಕ್ಕೆ ಕಥೆ

ಮುನ್ನ ತ್ರೇತಾಯುಗವಲ್ಲಿ ಕ್ರೌಂಚಾಸುರನೆಂಬ ರಕ್ಕಸನು ಕುಂಭಜಾತಋಷಿ ಬರುವಾಗ ಹಳ್ಳವಾಗಿ ತಿಟ್ಟವಾಗಿ ದೊಡ್ಡಜರಿಯಾಗಿ ಬೆಟ್ಟದಂತೆ ಆರ್ಭಟಿಸಿ ಮುನಿಗೆ ಇದಿರಾಗಿ ಬರುವದಂ ಕಂಡು, ಇದು ರಕ್ಕಸನ ಕಪಟವೆಂದಱಿದು, ನೀನು ಮೊರಡಿಯಾಗೆಂದು ರಕ್ಕಸನಂ ಶಪಿಸಲು, ಕ್ರೌಂಚಾದ್ರಿಯೆಂಬ ಪರ್ವತವಾಗಿರಲು, ಅದು ತಾರಕಾಸುರಂ ಸೇರಿ, ತನ್ನ ಆಶ್ರಯವಂ ಮಾಡಿಕೊಂಡು, ದೇವತೆಗಳಂ ಬಾಧಿಸುತ್ತಿರಲು, ನೊಂದು ಅಗ್ನಿಪುರುಷನಂ ಕಳುಹಲವ ಬಂದು ಶಿವನು ಗಿರಿಜೆಯು ಸುಖಸಂಭಾಷಣೆಯೊ[4]ಳಗಿರ್ಪ[4]ಲ್ಲಿ ಅಗ್ನಿಪುರುಷನು ಬಂದು ವೀರ್ಯಭಿಕ್ಷವಂ ಬೇಡಲು, ಊರ್ಧ್ವರೇತನಾದ ಶಿವನೆಂದಱಿಯದೆ, ವೀರ್ಯವಂ ಬೇಡಲು, ಅವರ

1. ರೆರಥಗ (ಕ) 2. ಶ್ವರ (ಚ(ಗ)) 3. ಶೋಕವ (ಗ ಚ) 4. ಳಿರುವ (ಗ,)ಳಿಪ್ಪ (ಚ)

ಭಾವವಿದ್ದಂತೆ, ಯಥಾಭಾವತಥಾಸಿದ್ಧಿ, ಎಂದು ವೀರ್ಯ[1]ವಂ[1] ಅಗ್ನಿಗೆ ನೀಡಲು ಅವನು ಸೇವಿಸಿ ತಾಳಲಾರದೆ, ದೇವತೆಗಳಿಗೆ ಕೊಡಲು, ಅವರು ಸೇವಿಸಿ ಸೈರಿಸಲಾರದೆ, ಸರ್ವಾಂಗವು ಬೋಳಾಗಿ, ಶರವಣನದಿಯ ತೀರದಲ್ಲಿ, ಸುರಿಯಲದ ಷಟ್ಕೃತ್ತಿಕೆಯರಿಂದ ಶಿಶುವಾಗಲು, ಪಾರ್ವತಿ ನೋಡಿ ಮೊಲೆಯನೂಡಿ, ಶಿರವಾಱು ದೇಹವೊಂದು ಮಾಡಿ ಭೂಮಿಗೀಯಲು, ಗುಹನೆಂಬ ನಾಮದಿಂದ ದೇವೇಂದ್ರನ ಕೂಡೆ ಕಾದ[2]ಲು, ಅವಂ ಮು[2]ಱಿದೋಡಲು, ಆತನ ಗುರು ಬೃಹಸ್ಪತಿ ಬಂದು ಬೋಧಿಸಲು, ಶರಣು ಹೊಕ್ಕು ಇಂದ್ರನು ಕುಮಾರಸ್ವಾಮಿಗೆ ಸೇನಾಧಿಪತಿಯಾಗೆಂದು ಬೇಡಿಕೊಂಡು ಪೋಗಲು, ಅತ್ತ ತಾರಕಾಸುರನು ತನ್ನ ಬಲಸಹ ಬಂದು, ಅರಣ್ಯದಲ್ಲಿ ಬೇಂಟೆಗೈವುತ್ತಿರಲು, ಅಲ್ಲಿಗೆ ಷಣ್ಮುಖದೇವರು ನಡೆದು ಕಾದುವಲ್ಲಿ ರಕ್ಕಸನು ನೂಱುಪ್ಪತ್ತೇಳು ಬಾಣದಿಂದ ಕಾಳಗವಂ ಮಾಡಿ ತಾರಕನ ಬಲ ಮುಱಿದೋಡಲು, ಬಳಿಕ ರಕ್ಕಸ ಬಂದು ಕುಮಾರಸ್ವಾಮಿಯ ಕೂಡೆ ಕಾದಿ ನಿಲಲಾರದೆ ಮುಱಿದೋಡಿ ಕ್ರೌಂಚಾದ್ರಿಯ ಮಱಿ[3]ಹೊಗಲು, ಸ್ಕಂದನು ಉತ್ತಮಾಸ್ತ್ರನೆಂಬ ಬಾಣದಿಂದೆಸೆಯಲು, ಕೋಟಿಸಿಡಿಲೆಱಗಿದಂತೆ ಆರ್ಭಟಿಸಿ ಮುನ್ನೂಱುಯೋಜನದ ದಟ್ಟವನುಳ್ಳ ಕ್ರೌಂಚಾದ್ರಿಯ ತಟ್ಟುಗಿದು, ಅವನ ಎದೆಯಲ್ಲಿ ಮೂಡಿ ಕುದಿಯಲು, ಅವನು ಭೂಮಿಗೆ ಬಿದ್ದಬ್ಬರಕ್ಕೆ ಶೇಷ ದಿಗ್ದಂತಿ, ಕೂರ್ಮನ[3]ಳಿಕಿ[3]ದವು. ನರಸುರರ ಮಱಿ[3]ಹೊಕ್ಕರೆ, ಶಿವಂಗೆ ಅಪರಾಧಿಗಳಂ ಕಾಯಲಾರರು. ಕುಮಾರಂಗೆ ಇದಿರಾದ ತಾರ[4]ಕಾಸುರನು ಮರಣವನ್ನೈದಿದ[4]ನು. ಗಿರಿಗೂ ಕೇಡುಬಂದಿತೆಂದು, ಸುರರೆಲ್ಲಾ ನೆರೆದು ಷಣ್ಮುಖನಂ ಸ್ತೋತ್ರವ ಮಾಡುತ್ತಿ ತಾರಕ ಸತ್ತಬಳಿಕ ಸುರರು ಸುಖದಲ್ಲಿರ್ದರು.

## "ಶಿವನ ಕೃಪೆವಡೆದ ನು[4] ಹರಿಶ್ಚಂದ್ರನು" ಎಂಬುದಕ್ಕೆ ಕಥೆ

ಆದಿನಾರಾಯಣ ಸುತ ಬ್ರಹ್ಮ. ಅವನ ಸುತ ಭೃಗು. ಅವನ ಸುತ ಇಂದ್ರ. ಅವನ ಮಗ ನಯನೇಂದ್ರಿಯ. ಅವನ ಮಗ ಕಾಲಸ್ವಾಮಿ. ಅವನ ಮಗ ದುಂದುಮಾಂಕ. ಅವನ ಮಗ ತ್ರಿಶಂಕು. ಅವನ ಮಗ ಹರಿಶ್ಚಂದ್ರ. ಈ ತ್ರಿಶಂಕನು ಮೂಱುಸಂಖ್ಯೆವರ್ಷ ರಾಜ್ಯವನಾಳಿ ಮರಣವಾಗಿ, ದೇವೇಂದ್ರನ ಭೋಗಕ್ಕೆ ಇಚ್ಛೈಸಿ, ತ್ರಿಶಂಕನು ತನ್ನ ಗುರು ವಸಿಷ್ಠನ ಬಳಿಗೆ ಪೋಗಿ, ನನಗೆ ದೇವೇಂದ್ರನ ಭೋಗವಂ ಮಾಡಿಕೊಟ್ಟರೆ ಎಂದು ಗರ್ವದಿಂದ ಕೇಳಲು, ನಮ್ಮ ಕೈಲಾಗದು ಎನಲು, ವಿಶ್ವಾಮಿತ್ರನ ಸಮೀಪಕ್ಕೆ ಹೋಗಲು, ಮುನ್ನ ವಿಶ್ವಾಮಿತ್ರನು ತನ್ನಾಶ್ರಮಕ್ಕೆ ವಸಿಷ್ಠಬರಲು ಹನ್ನೆರಡುವರುಷ[5]ದ ತಪದ ಫ[5]ಲವಂ ಕೊಟ್ಟನು. ವಿಶ್ವಾಮಿತ್ರ ವಸಿಷ್ಠನಾಶ್ರಮಕ್ಕೆ ಬರಲು, ಮುಯ್ಯಿಗೆಮುಯ್ಯೆಂದು ಒಂದು ಸೋಮವಾರದ

1. ಭಿಕ್ಷವಶಿವಂ (ಚ) 2. ಲುಮು (ಗ ಚ) 3. ಳೃಱಿ (ಗ ಚ) 4. ಕನುಸತ್ತ (ಗ ಚ)
4. ನೃಪ (ಗ ಚ) 6. ದಫ (ಕ)

ಶಿವಪೂಜೆಯ ಫಲವಂ ಕೊಟ್ಟೆನು. ನಾನು ದೊಡ್ಡಿತ್ತಾದ ಫಲವಂಕೊಟ್ಟೆನು. 1ನನಗೆ1 ಕಿಱಿದನಿತ್ತನೆಂಬ ಕ್ಲೇಶದಿಂದ, ವಿಶ್ವಾಮಿತ್ರನು ತ್ರಿಶಂಕಂಗೆ ದೇವೇಂದ್ರನ ಭೋಗವಂ ಮಾಡಿಕೊಡಲು, ಸಪ್ತರ್ಷಿಗ2ಳು ನೀನಾ ಗು2ರುವಂ ಬಿಟ್ಟು ಬಂದವನೆಂದು ನೂಂಕಲು, ಅಧೋಗತಿಗಿಳಿದು ಕೆಟ್ಟುಪೋದವಾರ್ತೆಯಂ, ಹರಿಶ್ಚಂದ್ರ ಕೇಳಿ, ತನ್ನ ಸತಿ ಚಂದ್ರಮತಿ ಮಗ ಲೋಹಿತಕುಮಾರ ಮಂತ್ರಿ ಸತ್ಯಕೀರ್ತಿ ಅಯೋಧ್ಯಾಪಟ್ಟಣದಲ್ಲಿ ಸತ್ಯದಿಂದ ರಾಜ್ಯವನಾಳುತ್ತಿರಲು, ಇಂದ್ರನು ಸುಧರ್ಮವೆಂಬ ಚಾವಡಿಯಲ್ಲಿ ಮರ್ತ್ಯದಲ್ಲಿ ಸತ್ಯವುಳ್ಳವರುಂಟೆ ಎನಲು, ವಸಿಷ್ಠನು ಹರಿಶ್ಚಂದ್ರನುಂಟೆನಲು, ವಿಶ್ವಾಮಿತ್ರ ಅವನಲ್ಲಿ ಸತ್ಯವಿಲ್ಲವೆನಲು, ಹಾಂಗಾದರೆ ನೀನು ಕೊಟ್ಟ ಸೋಮವಾರದ ಫಲವಂ ನಿನಗೆ ಕೊಟ್ಟೆನು. ಸತ್ಯವಿಲ್ಲದಿರ್ದಡೆ ಹನ್ನೆರಡುವರ್ಷ3ದ ತಪಸ್ಸಿನ ಫ3ಲವಂ ನನಗೆ ಕೊಡು ಎನಲು, ಸೋಮವಾರದ ಶಿವಪೂಜೆಯ ಫಲಕಿಂತ ಹನ್ನೆರಡು ವರ್ಷ3ದ ತಪಸ್ಸಿನ ಫ3ಲ ಹೆಚ್ಚೆ ಎನಲು, ಹೆಚ್ಚೆನಲು, ಆಗ ವಸಿಷ್ಠನು ಇಂದ್ರನ ಸಭೆಯಲ್ಲಿ ದೃಷ್ಟವಂ ತೋಱುವೆನೆಂದು ತಪದ ಫಲ ಶಿವಪೂಜೆಯ ಫಲವೆಂಬ ವಾಕ್ಯವಂ ಚೀಟಿನಲ್ಲಿ ಬರೆದು ತ್ರಾಸಿನಲ್ಲಿ ತೂಗಲು, ಶಿವಪೂಜೆಯೇ ಅಧಿಕವಾಯಿತ್ತು. ಇದ ನೋಡುವೆನೆಂದು ವಿಶ್ವಾಮಿತ್ರನು ಹರಿಶ್ಚಂದ್ರನ ಬಳಿಗೆ ಬಂದು ನಮ್ಮ ಯಜ್ಞಕ್ಕೆ ಆನೆಮೇಲೆ ನಿಂತು ಕವಡೆಯ ಮಿಡಿದರೆ ಎಷ್ಟುದ್ದವುಂಟು ಅಷ್ಟುದ್ದ ಹೊನ್ನರಾಶಿಯಂ ಕೊಡು ಎನಲು, ಕೊಟ್ಟನಾಬಳಿಕ ಇನ್ನೊಂದು ಪರಿಯಲ್ಲಿ ಇವನ ಸತ್ಯವಂ ನೋಡಬೇಕೆಂದು ಎರಡು ಕೃತಕದ ಹೆಣ್ಣುಗಳಂ ನಿರ್ಮಿಸಿ ಕಳುಹಲು, ಅವರು ವಿದ್ಯೆಗಳ ತೋಱಿ ಗಾನವಂ ಮಾಡಲು, ಹರಿಶ್ಚಂದ್ರನು ಮೆಚ್ಚಿ ಏನುಬೇಕೆನಲು, ನಿನ್ನ ಏಕ ಛತ್ರ ಮೊದಲಾದ ರಾಜ್ಯಮುದ್ರೆ ಬೇಕೆನಲು, ಕೊಡಲು, ಬಳಿಕ ಹೆಣ್ಣುಗಳು ರಾಜಮುದ್ರೆ ಛತ್ರವಂ ವಿಶ್ವಾಮಿತ್ರಗೆ ಕೊಡಲು, ಆಗ ರಾಜ್ಯವು ನನ್ನದಾಯಿತ್ತು. ನೀ ಹೋಗು ಎನಲು, ಸತಿಸುತ ಸತ್ಕೀರ್ತಿಯೆಂಬ ಮಂತ್ರಿಸಹವಾಗಿ ಸಕಲೈಶ್ವರ್ಯವನು ಬಿಟ್ಟು ಹೋಗುವಾಗ ವಿಶ್ವಾಮಿತ್ರನು ನಮ್ಮ ಯಜ್ಞಕ್ಕೆ ಕೊಟ್ಟ ಹೊನ್ನ ಈಗ ತಾರೈ ಎನಲು, ಆಗ ನಕ್ಷತ್ರನೆಂಬ ಶಿಷ್ಯನಂ ಕರೆಕೊಂಡು ಕಾಶಿಗೆ ಹೋಗುವಾಗ ಅನಂತ ಗಳಗರ್ಜನೆಗಳಂ ಮಾಡಿ ನಿರ್ಬಂಧಿಸಲು, ಸತ್ಯಕ್ಕೋಸುಗ ಸೈರಿಸಿ, ಕಾಶಿಗೆ ಹೋಗಿ ವೀರಬಾಹುಕನೆಂಬ ಶ್ವಪಚಂಗಾಳಾಗಿ ಮುನ್ನ ಕೊಟ್ಟೆನು ಎಂದಷ್ಟು ದ್ರವ್ಯವಂ ಕೊಟ್ಟನು. ವೀರಬಾಹುಕನ ಅಪ್ಪಣೆಯಿಂದ ಸುಡುಗಾಡ ಹರಿಶ್ಚಂದ್ರ ಕಾಯ್ದಿರಲು, ಬಳಿಕ ನಕ್ಷತ್ರನು ಅದು ನಮ್ಮ ಗುರುವಿನ ಒಡವೆ ನಾ ಬಳಲಿಬಂದುದಕೆ ಬಾಡಿಗೆಯ ಹೊನ್ನಂ ಕೊಡು ಎನಲು, ಸತಿಸುತರ ಕೌಶಿಕನೆಂಬ ವಿಪ್ರಗೆ ಮಾಱಿ ಇಪ್ಪತ್ತುಸಾವಿರ ವರಹವನು ಕೊಡಿಸಿ, ಹರಿಶ್ಚಂದ್ರನು ಹೆಣನ ಸೆಱಗಿನಲ್ಲಿರ್ದಕ್ಕಿಯನುಣ್ಣಬಾರದೆಂದು ಮಂತ್ರಿಯ ಕಯ್ಯಲ್ಲಿ ಗೂಳಿಗೆ ಮೇಯಿಸಿ

1. ತಾನು (ಗ ಚ) 2. ಭುಗು (ಕ) 3. ದಫ (ಗ ಚ)

ಸಗಣಿಯಲ್ಲಿ ಬಿದ್ದಕ್ಕಿಯಂ ತೊಳೆದು ಬೋನವಂ ಮಾಡಿ ಉಣ್ಣುತ್ತಂ ನೆಲಹಾಗವ ಒಡೆಯಗೆ ಕೊಡುತ್ತಿರಲು, ಅತ್ತ ಲೋಹಿತಕುಮಾರ ವಿಪ್ರನ ಮನೆಯ ಕಱುವ ಕಾವುತ್ತಿ ಕಟ್ಟಿಗೆಯಂ1 ತರುವನು. ಹುತ್ತವನೇಱಿ ಕಟ್ಟಿಗೆಯಂಮುಱಿಯಲು1 ಸರ್ಪ ಕಚ್ಚಿ ಸಾಯಲು, ಚಂದ್ರಮತಿ ಅರ್ಧರಾತ್ರಿಯಲ್ಲಿ ಅಱಸಿಕೊಂಡು ಹೋಗಿ ಹೆಣನಂ ಕಂಡು ಸುಡುವುದಕ್ಕೆ ತರಲು, ಹರಿಶ್ಚಂದ್ರನು ನೆಲಹಾಗವಂ ತಾರೆನಲು, ಹಾಗ ನನಗಿಲ್ಲವೆನಲು, ಆಗ ಕತ್ತುವ ಕೊಳ್ಳಿಯನು ಹೆಣನಾಗ ಕಡೆಗೆ ತೆಗೆದು ಬಿಸಾಡಲು, ದುಃಖದಿಂದ ಚಂದ್ರಮತಿ ತನ್ನ ತಾಳಿಯ ಮಾಱಿ ತಂದೆಹೆನೆಂದು ಹೋಗುವಲ್ಲಿ ಕಾಶಿಯ ಅರಸಿನ ಮಗ ಸತ್ತುಬಿದ್ದಿರಲು, ಅಲ್ಲಿ ತಳವಾಱರು ಚಂದ್ರಮತಿಯಂ ಕಂಡು, ನೀನೆ ಕೊಂದೆ ಅರಸಿನ ಮಗನ; ಆಭರಣವಂ ಕೊಡು ಎನಲು, ಇಲ್ಲವೆನಲು ಪಿಡಿದುಕೊಂಡು ಪೋಗಿ ಅರಸಿಗೊಪ್ಪಿಸಲು, ತಲೆಯಂ ಹೊಡೆಯಲೆಂದು ಹರಿಶ್ಚಂದ್ರನ ವಶಕ್ಕೆ ಕೊಡಲು, ಸತಿಯಂ ಹೊಡೆವಲ್ಲಿ ಇಷ್ಟವಂ ನೆನೆಯೆನೆ, ವಶಿಷ್ಠನೆ ಕುಲ ಗುರು, ವಿರೂಪಾಕ್ಷನೆ ಮನೆದೈವ, ಹರಿಶ್ಚಂದ್ರನೆ ಪತಿ, ಸತ್ಕೀರ್ತಿ ಪ್ರಧಾನಿ, ಲೋಹಿತ ಕುಮಾರನೆ ಮಗಂ ಇವರ ಸತ್ಯವೆಂದಿಗು ಕೆಡದಿರಲಿ ಹೊಡೆಯೆನೆ, ತನ್ನ ಸತಿಯೆಂದು ಪಕ್ಷವಿಲ್ಲದೆ ಶಿರವಂ ಹೊಡೆವಲ್ಲಿ ಆತನ ಸತ್ಯಕ್ಕೆ ಮೆಚ್ಚಿ ಶಿವನು ಪ್ರಸನ್ನನಾಗಿ ಬೇಡು ಎನಲು, ಶಿವನ ಭಕ್ತಿ ಐಶ್ವರ್ಯವಂ ಪ್ರತಿಸ್ವರ್ಗವಂ ಪಡೆದು ಸುಖದಲ್ಲಿರ್ದನು.

**"ದ್ಯೂತವ್ಯಸನದಿಂದೆ ರಾಜ್ಯವಂ ಸೋತು ಕು2ಷ್ಠಿಯಾ2ಗಿ ಓಪಳನಗಲ್ದು ಕಾಮಾರಿಯಿಂ ಪುನೀತನಾದ ನಳನು" ಎಂಬುದಕ್ಕೆ ಪೂರ್ವಾನ್ವಯದ ಕಥೆ**

ಉತ್ತರದಿಕ್ಕಿನಲ್ಲಿ ನಿಷಧಪುರದಲ್ಲಿ ಸೂರ್ಯನ ಮಗ ವೈವಸ್ವತಮನು. ಅವನ ಮಕ್ಕಳಾದ ಅಂಸಾವಳಿಯಲ್ಲಿ ಎಂಭತ್ತು ಸಂತಾನದಾತ ಅದಿತಿ ಅವನ. ಮಗ ನಿಷಧ. ಅವನ ಮಗ ನಳಚಕ್ರವರ್ತಿಯು. ಅವನು ಚೆಲುವಿನಲ್ಲಿ ಕಾಮ, ಚದುರತ್ವದಲ್ಲಿ ಬ್ರಹ್ಮ ಪ್ರತಾಪದಿಂ ವಿಷ್ಣುವಂ ಗೆಲಲುಳ್ಳಾತನಾಗಿರುತ ಏಳು ದ್ವೀಪ ಏಳಂಬುಧಿಗಳ ನಾಳುತ್ತ ಸುಲಕ್ಷಣವುಳ್ಳ ಕನ್ನಿಕೆಯನಲ್ಲದೆ ಮದುವೆಯನೊಲ್ಲೆನೆಂದು ಇರುತ ಒಂದು ದಿನ ನಂದನವನದಲ್ಲಿ ಹಂಸೆಗಳಂ ಕಂಡು ಸಲಹಬೇಕೆಂದು ಹಿಡಿಯಲು, ಆ ಹಂ3ಸೆಯು ಎಲೆಲೆ3 ಅರಸೆ ಮಾನಸಸರೋವರದಿಂದ ನಿನ್ನಂ ನೋಡಬೇಕೆಂದು ನಾನು ಬಂದೆನು. ಬಿಟ್ಟರೆ ನಾ ನಿನಗೊಂದುಪಕಾರವಂ ಮಾಡಿಹೆನು ಎನಲು, ಅದೇನೆಂದು ನಳರಾಜ ಕೇಳಲು, ನೀನು ಕುಠಾರದೇಶದ ಕೌಂಡಲ್ಯಪುರವನಾಳುವ ಭೀಮರಾಜನ ಸತಿ ಭುಜಬಲದೇವಿಯ ಮಗಳು ವೀರಾದೇವಿ, ಆಕೆಯ ತಂಗಿ 4ದಮಯಂತಿ4. ಆಕೆ ರೂಪಿನಲ್ಲಿ ರತಿ, ವಿದ್ಯೆಯಲ್ಲಿ ವಾಣಿ, ಭಾಗ್ಯದಲ್ಲಿ ಲಕ್ಷ್ಮಿಯಂ ಗೆಲುವಂತ ಸ5ರ್ವ

1. ಎಲೆಯ ಕೊಯ್ಯುತ್ತಿರಲು [ಗ] 2. ಷ್ಠಾ [ಗ ಚ]
3. ಸೆಎಲೆ [ಗ ಚ] 4. ದೃಮುವಂತೆ (ಕ ಗ ಚ) ಈ ಕಥೆಯು ಇತರ ಕಡೆಗಳಲ್ಲಿಯೂ ಇದೇರೀತಿ ಬರುತ್ತದೆ. 5. ರ್ವಗುಣಲ [ಕ]

ಲ5ಕ್ಷಣ ಸಂಪೂರ್ಣವುಳ್ಳಾಕೆಯಂ ನೀ ಮದುವೆಯಾಗು ಎಂದ್ಹೇಳಿ ಬಿಡಿಸಿಕೊಂಡು ದಮಯಂತಿಯ ಸಿಂಗರತೋಟಕ್ಕೆ ಬಂದು ಇರಲು; ಆಕೆ ಹಿಡಿವುದಕ್ಕೆ ಬರಲು, ನಿನಗೆ ಉಪಕಾರವಂ ಹೇಳಿಹೆನು ನೀ ಬಿಡು ಎನಲು, ನೀನು ನಳನನೆ ಮದುವೆಯಾಗೆನಲು ಒಡಂಬಟ್ಟು ಬಿಟ್ಟಳು. ಬಳಿಕ ದಮಯಂತಿಯ ಸ್ವಯಂವರವ ಮಾಡುವಾಗ ಐವತ್ತಾಱುದೇಶದರಸುಗಳ ಕೂಡೆ ನಳನು ಬಂದಿರಲು, ಆಗ ನಳನ ಕೂಡೆ ಇಂದ್ರ, ಅಗ್ನಿ ಯಮ ನೈರುತ್ಯ ವರುಣ ವಾಯುವ್ಯ ಕುಬೇರರು ಕೂಡಿ ಬಂದು, ಆ ಸ್ತ್ರೀ ನಿನಗೊಲಿದರೆ ನೀನೇ ಕೈಗೂಡಿಕೊ. ನಮಗೊಲಿದರೆ ನಾವು ಮದುವೆಯಾದೆಹೆವೆಂದು ಬಂದಿರಲು, ತಾ ನಳನರೂಪಾಗಿ ಕುಳಿತಿರಲು, ಆಗ ದಮಯಂತಿ ಬಂದು ನೋಡುವಲ್ಲಿ ಆಱುಮಂದಿ ಪುರುಷರೂ ಒಂದೇರೂಪಾಗಿರಲು, ಅವರು ಅನಿಮಿಷರು ಈತನು ಕಣ್ಣೆವೆಯ ನಿಕ್ಕುತಾನೆ ಈತನೆ ನಳನೆಂದು ತಿಳಿದು, ರತ್ನಮಾಲೆಯಂ ನಳಂಗೆ ಹಾಕಿ ಮದುವೆಯಾಗಿ ಸಂಗಡ ನಳನೃಪನ ಮನೆಗೆ ಹೋಗುವಾಗ ನಳರೂಪತಾಳಿದ ದೇವೇಂದ್ರನು ಎಂದನು. ಎಲೈ ನಳನೆ, ನೀನು ಯಜ್ಞವಂ ಮಾಡಿದಡೆ ವಿಘ್ನವಂ ಮಾಡುವುದಿಲ್ಲವೆಂ1ದು ಹೇಳಿದ1ನು. ಅಗ್ನಿ ಒಲಿದು ಬೆಂಕಿ ಇಲ್ಲದೆ ಅಡಿಗೆಯಂ ಕಲಿಸಿದನು. ಯಮನು ವ್ಯಾಧಿಬಾರದಂತೆ ಮಾಡಿದನು. ವರುಣನು ಮಳೆಯ ತಪ್ಪದಂತೆ ಮಾಡಿದನು. ಕುಬೇರನು ಕುದುರೆಯ ಲಕ್ಷಣವಂ ಕಲಿಸಿದನು. ವಾಯವ್ಯನು ಖೇಚರದಲ್ಲಿ ರಥವಂ ನಡೆಸುವುದಂ ಕಲಿಸಿದನು. ಬಳಿಕ ನಳನು ತನ್ನೂರಿಗೆ ಬಂದು ಸುಖದಲ್ಲಿ ಇರುವಷ್ಟಕ್ಕೆ ಕಲಿಪುರುಷನು, ವಿಧಿದೇವತೆಯು ಬಂದು ದಮಯಂತಿ ಈತಗೇಕೆಂದು ಮೊದಲು ಅಣ್ಣತಮ್ಮಂದಿರ ಜೂಜನಾಡಿಸಿ, ನಳನಂ ಸೋಲಿಸಿ ರಾಜ್ಯವನೆಲ್ಲ ತಮ್ಮಂಗೆ ಕೊಡಿಸಲು, ಆಗ ನಳನ ಅರಣ್ಯಕ್ಕೆ ಹೊಱಡಿಸಲು, ಸತಿಪತಿಗಳು ಅಡವಿಯಲ್ಲಿರಲು, ಕಲಿ ಬಂದು ನಳನು ನೇಱಿಲಹಣ್ಣ ಕೊಯ್ವಲ್ಲಿ ದಮಯಂತಿಯ ಹಾಂಗೆ ಬಂದು ಹಣ್ಣ ಬೇಡಿ ಹಚ್ಚಡವಂ ತೆಕ್ಕೊಂಡು ಹೋಗಲು. ಆಗ ನಳನು ಹಣ್ಣನು ಹಚ್ಚಡವನು ತಾಯೆಂದು ಸತಿಯಂ ಕೇಳಲು, ನಾನು ತರಲಿಲ್ಲವೆನಲು, ನಿನ್ನ ಸೀರೆಯೊಳಗರ್ಧವಂ ತಾರೆನಲು ಕೊಡದಿರಲು, ಬಲುಹಿಂದ ಅರ್ಧಸೀರೆಯಂ ಸೀಳಿಕೊಂಡು ಅರಣ್ಯದಲ್ಲಿ ಹೆಂಡತಿಯಂ ಬಿಟ್ಟುಹೋದನು. ದಮಯಂತಿಯ ಸೀರೆ, ಮುಳ್ಳುಮೆಳೆ ತಾಗಿ ಹಱಿಯಲು, ಸೊಪ್ಪನುಟ್ಟುಕೊಂಡಿರಲು, ಅವಂತೀಪುರದ ಭೀಮರಾಜನ ಗುರಿಕಾಱ ಬೇಂಟೆಗೆ ಬರಲು, ದಮಯಂತಿ ನಾಚಿ ನೀರೊಳಗಿರಲು, ರಾತ್ರಿಯಲ್ಲಿ ಬೇಂಟೆಕಾಱನ ಬಲೆಗೆ ಸಿಕ್ಕಲು, ಕಂಡು ಈ ಲಾವಣ್ಯಸ್ತ್ರೀ ನನಗೆ ದಕ್ಕಳೆಂದು ಅವಂತೀಪುರಕ್ಕೆ ಆಕೆಯಂ ಕರೆತಂದು, ಅಲ್ಲಿಂದ ಕುಠಾರದೇಶದ ಕೌಂಡಲ್ಯಪುರದ ಭೀಮರಾಜನು, ದಮಯಂತಿಯ ತಂದೆಯ ಬಳಿಗೆ ಕಳುಹಿದಲ್ಲಿ, ತಮ್ಮ ಮಗಳೆಂದಱಿಯದೆ, ತೊತ್ತುಸೇವೆಯಂ ಕೊಂಬಲ್ಲಿ, ಮರಗುದುರೆ ಪದಕವಂ

1· ದ [ಗ ಚ]

ನುಂಗಿತೆಂದು ಹೇಳಲು, ಕಳ್ಳಿಯೆಂದು ತುರಗಶಾಲೆಗೆ ನೂಂಕಿರಲು, ಇತ್ತ ನಳನು ಚಿತ್ರಕೂಟದ ಗಿರಿಯಲ್ಲಿ ಹೋಗುವಾಗ, ಒಂದು ಸರ್ಪನು ಕಾಡುಗಿಚ್ಚು ಹತ್ತಿ ಬರುವಾಗ ಎಲೆ ನಳರಾಜನೆ ನನ್ನಂ ಎಳೆ ಆಚೆಗೆ ಕೊಂಡುಹೋಗು ಎನಲು ಕೊಂಡು ಹೋದನು. ಆ ಸರ್ಪನಿಂತೆಂದುದು; ನನ್ನ ದಂತದ ಮೇಲೆ ನಿನ್ನ ಬೆರಳ ಮಡಗು. ನಿನ್ನ ದೇಹದ ಕಾಂತಿ ಕುಂದಿ ಕುಷ್ಠದಂತೆ ಕಪ್ಪಾದೀತು. ನೀನು ತಿರುಗಬಹುದು ಎನಲು ಹಾಂಗೆ ಮಾಡಿಕೊಂಡು ಅವಂತೀಪುರಕ್ಕೆ ಹೋಗಿ ಒಬ್ಬನ ಕೂಡೆ ರಥವಂ ನಡೆಸಬಲ್ಲೆನೆಂದು ಪೇಳಲು, ಆಗ ನಳನ ಗುರಿಕಾಜನಾದ ಋತುಪರ್ಣ ನಳಗೆ ಸಂಬಳ ಮಾಡಿ ಇಟ್ಟುಕೊಂಡಿರಲು, ಇತ್ತ ದಮಯಂತಿಯು ಪೋಲಿಟ್ಟ ಪದಕವ ನುಂಗಿದ ಮರಗುದುರೆ ಪದಕವನುಗುಳಲು, ತನ್ನ ಒಡತಿಗೆ ತೋಱಲು, ಅವರು ನೀನಾರು ಎಂದು ಕೇಳಲು ತನ್ನ ಪೂರ್ವಾಪರವಂ ಹೇಳಲು, ನನ್ನ ಮಗಳೆಂದಱಿಯದೆ ಭಂಗಬಡಿಸಿದೆನೆನುತ ಮಱುಗುತ್ತಿರಲು, ನಮ್ಮ ವಿಧಿಕಾಟದಿಂದೆ ನಿಮಗೆ ನಾನು ಹೇಳಲಿಲ್ಲವೆನಲು ಕಲಿಯುಗದಲ್ಲಿ ವಿಧಿ ತೊಲಗಿತ್ತು. ಮರಳಿ ದಮಯಂತಿಯು ಸ್ವಯಂವರಕ್ಕೆ ಬರಲೆಂದು ಋತುಪರ್ಣಗೆ ಹೇಳಿ ಕಳುಹಲು, ರಥವನೇಱಿ ಹೋಗುವಲ್ಲಿ ಕುಂಟುಕುದುರೆಗಳ ಹೊಳೆವ ತೇಜಿಯು ಮಾಡಿ ರಥವನೇಱಿ ಹಾ ಎಂದರೆ ನೂಱುಗಾವುದ ಅಂತರದಲ್ಲಿ ಹೋಯಿತ್ತು. ಆಗ ಋತುಪರ್ಣ ರಥ ಬೇಗ ನಡೆಯಿತ್ತು ನೀನಾರು? ಎನಲು, ಅವ ಸುಮ್ಮನಿರಲು, ಕತ್ತಿಯನೊಱೆಯು ಕಿತ್ತು ಹೊಯ್ವಾಗ ಮೈಯೊಳಗಿರ್ದ ಕಲಿಯು ಕುಷ್ಠವು ತೊಲಗಿಹೋಗಲು ಮೊದಲ ಕಾಂತಿಯಾಯಿತ್ತು. ಆಗ ರಥವ ನಡೆಸುವುದ ನನಗೆ ಕಲಿಸಿದರೆ ನಾ ನಿನಗೆ ಲೆತ್ತವನಾಡುವುದ ಕಲಿ[1]ಸಿ[1]ಹೆನೆನಲೊಡಂಬಟ್ಟು ಕಲಿಸಲು, ನಳನ ರಥದೊಳಗೆ ಕುಳ್ಳಿರಿಸಿ ಋತುಪರ್ಣ ರಥಸಾರಥಿಯಾಗಿ ಕುತಾರ ದೇಶದ ಕೌಂಡಲ್ಯಪುರಕೆ ಹೋಗಿ ಇಳಿಯಲು, ಭೀಮರಾಜ ದಮಯಂತಿ ಹೇಳಿದ ಹಾಂಗೆ ಬಂದರಸುಗಳಿಗೆ ಸೋಪಸ್ಕಾರವ ಕೊಡಿಸಿ ಕಟ್ಟಿಗೆಯ ಕೊಡವೆ ನಮ್ಮ ಕೇಳಿದಲ್ಲದೆ ಬೆಂಕಿಯು ಹೊತ್ತಿಸಬೇಡವೆನಲು, ಆಗ ನಳನು ಬೆಂಕಿಯಿಲ್ಲದೆ ಅಡಿಗೆಯ ಮಾಡಿ ತಾ ಉಂಡು ಒಬ್ಬ ಬಡವೆಗೆ ಇಕ್ಕಲು, ಆಕೆ ಹೋಗಿ ಎಲ್ಲಿಯೂ ಬೋನವಿಲ್ಲ, ಒಂದು ಠಾವಿನಲ್ಲಿ ದೊರೆಕಿತ್ತು. ಎಲ್ಲಿಯೂ ಅಡಿಗೆಯಾಗಲಿಲ್ಲವೆಂದು ಪೇಳಲು ಅಲ್ಲಿ ನಳನೈದಾನೆಯೆಂದು ದಮಯಂತಿ ತಂದೆಗೆ ಪೇಳಿದಳು. ಆಗ ಭೀಮರಾಜ ದಮಯಂತಿಯು ಸ್ವಯಂವರದಿಂದ ದ್ವಿತೀಯ ಕಲ್ಯಾಣವಂ ಮಾಡಿ ಉತ್ಸಾಹದಿಂದ ಸಕಲೈಶ್ವರ್ಯವನಿತ್ತು ಅವರೂರಿಗೆ ಕಳುಹಿದನು. ಆಗ ನಳನು ತನ್ನೂರ ಬೀದಿಯಲ್ಲಿ ಹೋಗುವಾಗ ಬಡಗಿ ಮಾಚಲದೇವಿಯರ ಕಂಡು ಈಕೆಯ ಮದುವೆಯಾಗಬೇ[2]ಕು[2] ಕ್ಷತ್ರಿಯ ಕುಲವ ಮಾಡಬಹುದೆ ಎಂದು ಹಾರುವರ ಕೇಳಲು, ಮಾಡಬಹುದೆನಲು ಚಿನ್ನದ ಗೋವ ಮಾಡಿಸುತಿರ್ದನು.

1 ಸಿಹೋ (ಗ) 2. ಕೆಂತು (ಕ)

## "ಪುರುಪುಚ್ಛನು" ಎಂಬುದಕ್ಕೆ ಕಥೆ

ಬ್ರಹ್ಮನ ಮಗ ಸ್ವಯಂಭುವಮನು. ಅವನ ಸತಿ ಸತ್ಯರೂಪಿ. ಆಕೆಯ ಮಗ ಪ್ರಿಯವ್ರತ. ಆತನ ಮಕ್ಕಳು ಗೋಮೇಧ ಜ್ಯೋತಿಷ್ಮಾರ್ಕ ವಪುಷ್ಮಾರ್ಕ ಹವಿಷ್ಮಾರ್ಕ ದ್ಯುತಿ ಚ್ಯವನ ಸವನ ಅಗ್ನಿದ್ರು ಜ್ಯೋತಿಷ್ಮಂತ ವಪುಷ್ಮಂತ ದ್ಯುತಿಮಂತ ಮೇಧ. ಈತನ ಮಗ ಪುರೂರವ. ಅವನ ಮಗ ಪುರುಪುಚ್ಛನು ಚಕ್ರವರ್ತಿಯಾಗಿ ಅರಿರಾಯರ ಮೇಲೆ ದಂಡು ಹೋಗಿ ಹೊಳೆಯ ತೀರದಲ್ಲಿಳಿಯಲು ಹೊಳೆ ಬಂದು ದಂಡನೆಲ್ಲಾ ಕೊಚ್ಚಿಕೊಂಡು ಹೋಗಲು, ತಾನು ತೇಜಿ ಸಹವಾಗಿ ದಾಂಟಿ ಅರಣ್ಯದಲ್ಲಿರುವಾಗ ಮುಂಗುಲಿ ಸರ್ಪನ ಕಡಿಯಲು, ಅದು ಮುಂಗುಲಿಯ ಕಚ್ಚಲು, ಆ ಮುಂಗುಲಿ ಮೂಲಿಕೆಯ ಜಗಿದು ಬದುಕಲು, ಬಳಿಕ ಸರ್ಪನು ಸಂಧಾನಕರ್ನಿಕೆಯೆಂಬ ಕಲ್ಲಮೇಲೆ ಹೊರಳಿ ಗಾಯವ ಮಾಣಿಸಿಕೊಳಲು, ಪುರುಪುಚ್ಛ ಅದ ಕಂಡು ಆ ಮೂಲಿಕೆಯನು ಆ ಕಲ್ಲನು ತಿಕ್ಕೊಂಡು ಪಂಚಾಲನ ನಗರಿಗೆ ಬರಲು, ಅಲ್ಲಿ ಪಂಚಾಲರಾಯನ ಮಗ ಧೃಷ್ಟದ್ಯುಮ್ನನು ಪುರುಪುಚ್ಛನ ಸಂಬಳಕೆ ಇಟ್ಟುಕೊಂಡು ವೈರಿಗಳ ಮೇಲೆ ಕಾದುವಾಗ ಧೃಷ್ಟದ್ಯುಮ್ನಗೆ ಗಾಯವಾಗಲು ಪುರುಪುಚ್ಛ ಆ ಕಲ್ಲ ಮುಟ್ಟಿಸಲು ಗಾಯ ಮಾಣಲು, ಬಳಿಕ ಅರಸಿನ ಮಗಳು ಸರ್ಪಕಚ್ಚಿ ಸಾವಲ್ಲಿ ಪುರುಪುಚ್ಛ ಆ ಮೂಲಿಕೆಯ ರಸವ ಬಾಯೊಳಗೆ ಹಿಂಡಿ ಆಕೆಯಂ ಬದುಕಿಸಿ ತಾನೇ ಮದುವೆಯಾಗುವಲ್ಲಿ ಧೃಷ್ಟದ್ಯುಮ್ನನಃ ತನಗೆ ಬೆರಳಿಲ್ಲವೆಂದು ಚಿಂತಿಸುತಿರಲು, ನೀವೆ ಧಾರೆಯನೆರೆಯ ಬನ್ನಿ ಎಂದು ಸಂಧಾನಕನ್ನಿಕೆಯ ಕೈಯಲ್ಲಿ ಪಿಡಿದು ಕರೆಯಲು, ಬೆರಳು ಸಸಿನವಾಗಿ ಧಾರೆಯನೆರೆದು ಮದುವೆಯಾಗಿ ಸಕಲೈಶ್ವರ್ಯವನು ಅಳಿಯಗೂ ಮಗಳಿಗೂ ಉಡುಗೊಱೆಯ ಕೊಟ್ಟು ಕಳುಹಲು ತನ್ನ ಅಯೋಧ್ಯಾಪುರಕ್ಕೆ ಹೋಗಿ ಸುಖದಲ್ಲಿರುತ್ತ, ಮತ್ತೊಂದಾನೊಂದು ದಿನದಲ್ಲಿ ವಸಿಷ್ಠನು ಗುರುವಾಗಿರುತ ಕ್ಷತ್ರಿಯ ನೀತಿಯಂ ಪೇಳುತ್ತಿರಲು ದುರ್ಬುದ್ಧಿಪುಟ್ಟಿ ಅಂಬರಕೇಶಿ ಎಂಬ ಮುನಿ ಭಿಕ್ಷಕ್ಕೆ ಬರಲು, ಸಗಣಿಯನಿಕ್ಕಲು, ಭೂಜನ... ಗುಜುಗುಜುಯೆನುತ್ತಿರಲು ಈ ವಾರ್ತೆಯ ದೇವೇಂದ್ರನ ಸಭೆಯಲ್ಲಿ ಗುರುವೆಂಬವರು ಶಿಷ್ಯರ್ಗೆ ಸತ್ಯಸದಾಚಾರವ ಬೋಧಿಸದೆ ಏತಕೆ ಗುರುತನ? ವಸಿಷ್ಠನ ಶಿಷ್ಯನು ಪುರುಪುಚ್ಛನು ಭಿಕ್ಷಕ್ಕೆ ಸಗಣಿಯನಿಕ್ಕಿದನೆಂಬುದ ಕೇಳಿ ವಸಿಷ್ಠ ಬಂದು ಪುರುಪುಚ್ಛನ ದೇವಲೋಕವ ನೋ[1]ಡುವ ಬಾ[1]ಯೆಂದು ಕರಕೊಂಡು ಹೋಗುವಾಗ ಭೂಲೋಕದಲ್ಲಿ ಷೋಡಶದಾನವ ಮಾಡಿದವರು ಸಕಲ ಸುಖ ಭೋಗಿಸುವದ ಕಂಡು ಸಂತೋಷವನೈದಿ ಮುಂದೆ ಪೋಗಲು ದೊಡ್ಡ ಸಗಣಿಯ ಬೆಟ್ಟ ಬೆಳೆದಿರಲು ಕಂಡು ಇದೇಕೆಂದು ಗುರುವ ಕೇಳಲು, ಭಿಕ್ಷಕೆ ಬಂದ ಯತಿಗಳಿಗೆ ಕಲ್ಲು ಮಣ್ಣು ಕಡ್ಡಿ ಕಸವ ಸಗಣಿಯ ನೀಡಿದ ಪಾಪಿಗಳು ಇದಱೊಳಗೆ ಹುಳುವಾಗಿ [2]ತಿರಿದನ್ನವ[2] ತಿನಬೇಕೆನಲು ಹೆದಱಿ ತಾ ಮಾಡಿದ ಪಾಪವ ಗುರುವಿಗೆ ಬಿನ್ನೈಸಿ ದೈನ್ಯಂ

---

1. ಡುಬಾ (ಗಚ) 2. ತಿರುಗುವನ್ನಕ (ಗ) ತೀರವನ್ನಕ (ಚ)

ಬಡಲು, ಆಗ ನಿಮ್ಮ ತಂದೆಯು ಕಿಱಿಯ ಹೆಂಡತಿಯು ನೀನು ತಾಯಿ ಶಿಶುಭಾವದಲ್ಲಿ ಒಂದೇ ಗೃಹದಲ್ಲಿರ್ದು ದಾನ ಧರ್ಮ ಪರೋಪಕಾರ ಸ್ನಾನ ಜಪ ಕ್ರಿಯೆಯಿಂದಿರಿ ಯೆಂದು ಪೇಳಲು, ಹಾಂಗೆ ಇರ್ದು ದಾನ ಧರ್ಮ ಪರೋಪಕಾರವ ಮಾಡುತ್ತಿರಲು ಭೂಲೋಕದ ನರರು ನಿಂದ್ಯವ ಕಲ್ಪಿಸಿ ನುಡಿಯಲು, ಹನ್ನೆರಡು ವರುಷ ತುಂಬಲು ವಸಿಷ್ಠ ಬಂದು ನೋಡಿ ಕಂಡು ಮತ್ತೆ ದೇವಲೋಕಕ್ಕೆ ಕರದೊಯ್ದು ಸಕಲ ಸುಖವ ನುಣಿಸಿರಲು ಸಗಣಿಯ ಬೆಟ್ಟಹೋಗಿ ಮುನ್ನ ತಾನಿಕ್ಕಿದಷ್ಟಿರಲು, ಆ ಬೆಟ್ಟ ಎಲ್ಲಿ ಹೋಯಿತೆಂದು ಗುರುವ ಕೇಳಲು, ನೀವು ತಾಯಿಮಕ್ಕಳಿದ್ದರೆ ಮತ್ತೊಂದ ಕಲ್ಪಿಸಿ ನಿಂದ್ಯವ ನುಡಿದವರಿಗೆ ಆಹಾರವಾಯಿತ್ತು. ಮಾಡಿದವರ ಪಾಪ ಆಡಿಕೊಂಡವರಿಗೆ ಬಂದಿತ್ತು ಎಂಬುದು ದೃಷ್ಟ. ಮಾಡಿದವರಿಗೆ ಮಾಡಿದಷ್ಟು ನೀಡಿದವರಿಗೆ ನೀಡಿ ದಷ್ಟು ನೀ ನೀಡಿದ ಸಗಣಿಯ ನೀನೇ ಭಕ್ಷಿಸು ಎನಲು, ಭಕ್ಷಿಸುತಿರಲು ಕೈಪಿಡಿದು ಇನ್ನು ಹನ್ನೆರಡು ವರುಷ ದಾನ ಧರ್ಮ ಪರಹಿತಚರಿತ ಷೋಡಶದಾನವನು ಮಾಡಿ ಸುಖದ ಲ್ಲಿರು ಎಂದು ಕಳುಹಲು ಹಾಂಗೆ ಮಾಡಿದನು. ಸರ್ವಜನರು ಧರ್ಮಸ್ವರೂಪನು ಸತ್ಯ ಸದಾಚಾರಿಯೆಂದು ಕೀರ್ತಿಸುವಂತೆ ಇರ್ದು ಪುರುಪುಚ್ಛರಾಯನು ಸ್ವರ್ಗಕ್ಕೆ ಐದಿದನು.

## "ಪುರೂರವ ಭೂಮಿಪಾಲಕನೊಪ್ಪುತಿಹನು" ಎಂಬುದಕ್ಕೆ ಕಥೆ

ಹದಿನಾಲ್ಕು ಮನುಗಳ ಅಂಶವಾದ ಪ್ರಿಯವ್ರತನ ಪುತ್ರರು ಕುರು ಹಿರಣ್ಯ ರಮ್ಯ ಭದ್ರಾಶ್ವ ಭರತ ಕಿಂಪುರುಷ ಹರಿಕೇತು ಮಾಲ್ಯ ಇಳ. 1ಆ ಇಳನು ಇ2ವನು ಇಳಾ ವತೀ ಪಟ್ಟಣದಲ್ಲಿ ರಾಜ್ಯವನಾಳುತ್ತ ಒಂದುದಿನ ಬೇಂಟೆಗೆ ಹೋಗಿ ಹಿಮಗಿರಿಯಲ್ಲಿ ಸಮನ್ಯುಮುನಿಯ ರನ್ನದ ಗವಿಯಲ್ಲಿಳಿಯಲು, ನೀ ನಮ್ಮಾಶ್ರಯದಲ್ಲಿ ಇಳಿಯಬ ಹುದೆ ಎಂದು ಮುನಿ3ಯು ಮುನಿದು ಯ3ಕ್ಷದೇವತೆಗಳ ಕರೆತಂದು ಕಾದಿಸಲು, ಅವರು ಮುಱಿದು ಹೋಗಲು, ಬಳಿಕ ಮುನಿಯ ಸತಿ ಯಕ್ಷಿಣಿ ಎಂಬವಳು ಎರಳೆ ಯಾಗಲು ಅದ ಕಂಡು ಇಳ ಬೆಂಬತ್ತಿಹೋಗಲು ಆ ಎರಳೆ ಉಮಾವನವ ಪೊಕ್ಕು ಆ ರೂಪಬಿಟ್ಟು ಸತಿಯಾಗಿ ನಿಂದಿರಲು, ಇಳನು ಇಲ್ಲಿ ಎರಳೆ ಬಂದಿತ್ತೆ ಎಂದು ಕೇಳಲು, ಆ ಯಕ್ಷಿಣಿ ಕಾಣೆನಲಾ ಎನಲು, ಆ ನುಡಿಯ ಕೇಳಿ ಇಳನು ಹೆಣ್ಣಾಗಲು, ನಾಹೆಣ್ಣೇ ಕಾದೆನೆನಲು, ಇಲ್ಲಿ ದೇವಿಯರು ತಪವ ಮಾಡುವಾಗ ಈ ವನಕ್ಕೆ ಬಂದ ಪುರುಷರ ಹೆಣ್ಣಾಗಲಿಯೆಂದು ನಿರೂಪಿಸಿದರು. ಅದುಕಾರಣ ನೀನು ಹೆಣ್ಣಾದೆಯೆನಲು ಇದಕ್ಕೆ ಉಪಾಯವೆಂತೆನಲು, ಮುನಿಯ ಸತಿ ಯಕ್ಷಿಣಿಯೆಂದಳು. ಚಂದ್ರ ಸ್ಥಾಪಿಸಿದ ಸೋಮೇಶ್ವರಲಿಂಗದ ಬಳಿಯಲ್ಲಿರು. ಅಲ್ಲಿಗೆ ಬುಧನು ಲಿಂಗಪೂಜೆಗೆ ಬಂದಾನು. ಆತ ಹೇಳಿದುದ ಕೇಳೆನಲು, ಬಳಿಕ ಅಲ್ಲಿ ಕುಳಿತಿರಲು ಅವ ಬಂದು ಲಿಂಗವಂ ಪೂಜಿಸಿ ಆಕೆಯ ಕರೆಕೊಂಡುಹೋಗಿ ಮದುವೆ4ಯಾಗಲು ಆಗ ಪುರೂರವ ಪುಟ್ಟಿದನು.

---

1. ರೋ (ಕಗಚ)? ಈ ಕಥೆಯು ಇತರ ಕಡೆಗಳಲ್ಲಿಯೂ ಇದೇರೀತಿ ಬರುತ್ತದೆ,

2. ನು ಇ(ಕ) 3. ಯುಯ (ಗಚ) 4. ಯ ಮಾಡ (ಕ)

ಒಂದುದಿನ ತಾಯಿ ಏಕೆ ಬಡವಾದೆ? ಎನಲು, ನನ್ನ ಪುರುಷರೂಪು ಹೋಗಿ ಹೆಣ್ಣಾದೆ ನೆಂಬ ಚಿಂತೆಯಿಂದ ಇಂತಾದೆನೆನಲು, ಆಗ ತಾಯ ಗೌತಮಿಯಲ್ಲಿ ಸ್ನಾನವ ಮಾಡಿಸಲು ಮೊದಲಂತೆ ಪುರುಷರೂಪಾಗಿ, ಈ ಇಳೇಶ್ವರನೆಂಬ ಲಿಂಗವ ನಿಲಿಸಿ ಅರ್ಚಿಸಿ ಇಬ್ಬರು ಇಳಾವತಿಗೆ ಹೋಗಿ ಸುಖದಲ್ಲಿರುತ ಪುರೂರವ ಶಿವನ ಕುರಿತು ತಪವಂ ಮಾಡಿ ಚಕ್ರವರ್ತಿಪದವ ಪಡೆದು ಶಿವಭಕ್ತಿಸುಖದೊಳಿರ್ದು ಸ್ವರ್ಗವ ಪಡೆದನು.

## "ಸ್ವರ್ಣನದಿಯ ತಂದ ಭಗೀರಥನಂದು ಕೇಳರಸಾ" ಎಂಬುದಕ್ಕೆ ಕಥೆ

ಪೂರ್ವದ ತ್ರೇತಾಯುಗದಲ್ಲಿ ಒಂದು ನರಿ ಗರ್ಭಿಣಿಯಾ[1]ಗಿ ನ[1]ರಮಾಂಸಬೇಕೆಂದು ಗಂಡಗೆ ಪೇಳಲು, ನಾ ತೋಳನೋ? ಹುಲಿಯೋ? ಬದುಕಿದ ನರಮಾಂಸವ ಹೇಗೆ ತರಲೆನಲು, ತಂದಲ್ಲದೆ ಬದುಕಲಾರೆನೆನಲು, ಅತ್ತ ಓರ್ವ ಮುಂಡೆ ಹಾರವಿತ್ತಿ ಬಸುರಾಗಿ ಅಡವಿಯಲ್ಲಿ ಹೆಣ್ಣಹೆತ್ತು ಬಿಟ್ಟುಹೋಗಲು, ಅದ ಕಂಡು ನರಿ ತಂದು ಕೊಡಲು, ತಿನ್ನದೆ ಜೇನನೆರೆದು ಸಾಕುತ್ತಿರಲು, ಅಲ್ಲಿಗೆ ಒಬ್ಬ ರಾಜ ಬೇಂಟೆಗೆ ಬಂದು ಅಲ್ಲಿ ಆ ಕನ್ನಿಕೆ ನರಿಗಳ ಕೂಡೆ ಗುದ್ದಿನೊಳಗೆ ಪೋಗಲು ಕಂಡು ಅರಸು ಆ ಗುದ್ದ ನಗೆಸಲು, ಆ ನರಿಗಳು ನಾವೇನು ತಪ್ಪುಮಾಡಿದೆವೆಂದು ಅಗೆಸಿಹೆಪೆನಲು, ಆ ಕನ್ನಿಕೆಯ ಕೊಟ್ಟರೆ ಹೋದೆವೆನಲು, ಆಗ ಶಿವಶಿವಾ ಎಂದು ದುಃಖದಿಂದ ಕೊಡಲು, ಅರಸು ತೆಗೆದುಕೊಂಡು ಹೋಗಿ ಆ ಕನ್ನಿಕೆಯ ಧರ್ಮಧಾರೆಯನೆರೆದು ಒಬ್ಬ ಬ್ರಾಹ್ಮಣಂಗೆ ಕೊಟ್ಟು ಸಕಲ ಸಂಪತ್ತ ಕೊಡಲು, ಆತನು ಜಪತಪ ಸ್ನಾನಕ್ರಿಯೆ ಷೋಡಶಮಹಾದಾನವಂ ಮಾಡಿ ಸ್ವರ್ಗವನೆಯ್ದಿದನು. ಆ ಕನ್ನಿಕೆಯು ಕೊಟ್ಟ ಫಲದಿಂದ ಗಂಡುನರಿಯು, ವೈವಸ್ವತ ಮನುವಿನ ಮಗ ಇಕ್ಷ್ವಾಕಂ. ಅವನ ಮಗ ಕುಕ್ಷಿ. ಅವನ ಮಗ ಬಾಹು. ಅವನ ಮಗ ಅನರಣ್ಯ. ಅವನ ಮಗ ದುಂದುಮಾರ. ಅವನ ಮಗ ವನಸ್ವ. ಅವನ ಮಗ ಸುಗಂಧಿ. ಅವನ ಮಗ ಧ್ರುವಸಂಧಿ. ಅವನ ಮಗ ಭರತ. ಅವನ ಮಗ ಅಸಿತ. ಆ ಅಸಿತನ ಮಗ ಸಗರನಾಗಿ ಪುಟ್ಟಿ ಗಂಡುನರಿ ರಾಜನಾಗಿರಲು, ಮತ್ತಾ ಹೆಣ್ಣು ನರಿಯು ಅದೇಫಲದಿಂದ ಕ್ಷತ್ರಿಯರಾಜರಲ್ಲಿ ಕೇಶಸಿಯೆಂಬ ನಾಮದಿಂದ ಪುಟ್ಟಿ ಮತ್ತಾ ಸಗರನ ಮದುವೆಯಾಗಿ ಸುಖದಲ್ಲಿರುವಾಗ ತ್ರಿಕಾಲಜ್ಞಾನವ ಬಲ್ಲ ಮುನಿಯಿಂದ ತಮ್ಮ ಹಿಂದಣ ಜನ್ಮಭೇದವ ತಿಳಿದು ಒಂದು ಕನ್ನಿಕೆಯಿಂದ ಇಂಥಾ ಪದವಾಯಿತ್ತು. ನಮಗೆ ಇನ್ನು ಅಱುವತ್ತುಸಾವಿರ ಕನ್ನಿಕೆಯರ ಪಡೆದು ದಾನವ ಮಾಡಿದೊಡೆ ಇಂದ್ರಪದ ದೇವತೆಗಳ ಸಾವಿರ ವರುಷವಾದೀತೆಂದು ತಪವ ಮಾಡುತ್ತಿರಲು, ದೇವೇಂದ್ರನಿದ ತಿಳಿದು ಎಲೆ ಬ್ರಹ್ಮ ನೀನು ಸಗರಂಗೆ ವರವ ಕೊಡುವಾಗ ಅವನ ನಾಲಿಗೆಯಲ್ಲಿ ಅಱುವತ್ತುಸಾವಿರ ಪುತ್ರರಾಗಲಿಯೆಂದು ನುಡಿಸು ಎನಲು, ಸಗರನ ಪರಮ ತಪಕೆ ಶಿವನು ಮೆಚ್ಚಿ ಬೇಡು, ಬೇಡಿದುದ ತಪ್ಪದೆ ಕೊಡುವೆನೆನಲು, ಅವನು ಬೇಡುವಾಗ ಬ್ರಹ್ಮ ಬಂದು ಪುತ್ರಿಯರು ಎಂಬುದ ಮಱಸಿ ಪುತ್ರರಾಗಲಿಯೆಂದು ಬೇಡಿಕೊಂಡನು. ಹಾಂಗೆ

---

1. ಗಿತನಗೆ ನ (ಕ)

ಸುತರಾದರೆಂದು ಶಿವನು ಪೋಗಲು, ಇತ್ತ ಕೇಶಿನಿ ಒಂದು ಕುಂಭವ ಹಡೆದಳು. ಬಳಿಕದ ಬಿಸುಡಬೇಕು ಎನುತ್ತಿರಲು, ಆಕಾಶವಾಣಿಯುದಱಿಲ್ಲಿ ಮಕ್ಕಳು ಹುಟ್ಟಿಹರು ಎನಲು, ಆ ಕುಂಭದಿಂದ ಅಱುವತ್ತುಸಾವಿರ ಗಂಡುಮಕ್ಕಳು ಪುಟ್ಟಿದರು. ಬಳಿಕ ಅಶ್ವಮೇಧಯಜ್ಞವ ಮಾಡಿ ಇಂದ್ರನ ಪದವ ಪಡೆಯಬೇಕೆಂದು ಒಂದು ಕಡಮೆ ನೂಱುಯಜ್ಞವ ಮಾಡುವಾಗ ಇಂದ್ರನು ಅದ ತಿಳಿದು ಚಿತ್ರಸೇನನೆಂಬ ಕಳ್ಳನಿಂದ ಕುದುರೆಯ ಪಾತಾಳಕ್ಕೆ ಕಳುಹಲು, ಇತ್ತ ಸಗರನ ಅಱುವತ್ತುಸಾವಿರ ಮಕ್ಕಳು ದಕ್ಷಿಣಸಮುದ್ರದ ತಡಿವಿಡಿದು ಎಂಟುಸಾವಿರ ಯೋಜನದಗಲ, ಆಱುಸಾವಿರಯೋಜನದ ನೀಳದಲ್ಲಿ ಪೂರ್ವಪಶ್ಚಿಮವಾಗಿ ಅಗೆಯಲು, ಅವರಗೆದ ಭೂಮಿಯೊಳಗೆ ಸಮುದ್ರದ ಉದಕವಾವರಿಸಿ ಎಡದಿಟ್ಟುಳಿ ಇಂದ್ರದ್ವೀಪ ಕಸಿರದ್ವೀಪ 1ತಾಮ್ರಪ1ರ್ಣದ ದ್ವೀಪ ಗಭಸ್ತಿಮರ್ಾದ್ವೀಪ ನಾಗದ್ವೀಪ ಸಾಮ್ಯದ್ವೀಪ ಗಾಂಧರ್ವದ್ವೀಪ ವಾರುಣ ದ್ವೀಪ ಎಂಬ ಎಂಟುದ್ವೀಪಂಗಳಾಗಿ ಅವೆಲ್ಲಾ ಬೇಱೆಬೇಱೆ ಒಂದೊಂದು ಸಾವಿರ ಯೋಜನದಗಲವುಳ್ಳುವಾಗಿ ಮ್ಲೇಚ್ಛಾದಿ ಹೀನಜಾತಿಗೆ ಆಶ್ರಯವಾದವು ಭರತ ಖಂಡ ಒಂಭತ್ತುಸಾವಿರದಲ್ಲಿ ಎಂಟುಸಾವಿರ ಈಪ್ರಕಾರ ಯೋಜನವಾಗಲು, ಅವರು ಅಗೆಯದೆ ಉಳಿದ ಸಾವಿರಯೋಜನದ ವಿಶಾಲದ ಭೂಮಿಯೇ ಹಿಮವತ್ಪರ್ವತ ಪರಿಯಂತ ಕನ್ಯಕಾದ್ವೀಪವೆಂಬ ಹೆಸರುಳ್ಳದಾಗಿ ಬ್ರಾಹ್ಮಣಾದಿ ಸಕಲವರ್ಣಂಗಳಿಗೆ ಆಶ್ರಯವಾಗಿಹುದು. ಅದಱೊಳಗೆ ಮಲಯಪರ್ವತ ಸವಾಲಕ್ಷಪರ್ವತ ಈ ಎರಡು ಮುನ್ನೂಱುಯೋಜನದಗಲ ಭೂಮಿಯೇ ಹಿಮಜಲದೊಳಗಾಯಿತ್ತು. ಉಳಿದ ಭೂಮಿ ಹಿಮಸೇತು ಮಧ್ಯದಲ್ಲಿ ಏಳ್ನೂಱುಯೋಜನ ಭೂಮಿ ಪ್ರಸಿದ್ಧವಾಗಿ ಭರತ ಖಂಡವೆನಿಸಿತ್ತು. ಸಗರನ ಮಕ್ಕಳು ಎಂಟುಸಾವಿರ ಯೋಜನದಗಲ ಅಱುವತ್ತು ಸಾವಿರ ಯೋಜನದ ನೀಳಕ್ಕೆ ಭೂಮಿಯ ಬಗೆದುಕೊಂಡು ಭೋಗಾವತಿಗೆ ಹೋಗಿ ಮುತ್ತಿಗೆಯ ಹಾಕಲು, ಅವರು ಕುದುರೆಯನು ಕಳ್ಳನನು ತೋಱಲು, ಅವರಿಗೆ ಕಾಣಿಸಿಕೊಳ್ಳದೆ ತ್ರಿಕೂಟಗಿರಿಗೆ ಹೋಗಿ ಕಪಿಲಮುನಿಯ ಬಳಿಯಲ್ಲಿ ಕುದುರೆಯ ಕಟ್ಟಿಹೋದನು. ಇವರು ಈತನೇ ಕಳ್ಳನೆಂದು ಗಾಸಿಮಾಡುವಾಗ ಮುನಿ ಕೋಪದಿಂದ ಸುಟ್ಟನು. ಇತ್ತ ಸಗರಚಕ್ರವರ್ತಿ ತನ್ನಮಗ ಅಸಮಂಜಸಂಗೆ ಪಟ್ಟವ ಕಟ್ಟಿ ಗಂಗೆಯ ಪಡೆದೆಹೆನೆಂದು ತಪವಮಾಡುವಾಗ ತಪಸ್ಸಿದ್ಧಿಸದೆ ಮೃತವಾಗಿಹೋದನು. ಹಾಂಗೆ ಮನು ಖಟ್ವ ದಿಲೀಪ ಲಗ್ನ ಸೋಮ ಧ್ರುತ ಪ್ರಿಯವ್ರತ ತಪಸ್ಸಿನಲ್ಲಿಯೇ ಮಡಿದರು.

ಗ್ರಂಥ: ರಾಜನಿಂದಾ ಬಂ2ಧಿಕಾಚ2 । ಯತಿನಿಂದಾ ಕುಲಕ್ಷಯಃ ॥
ಹರಿನಿಂದಾತ್ ದರಿದ್ರಸ್ಯಾತ್ । ಗುರುನಿಂದಾ3ಚ ನಾರಕೀ3 ॥

ಎಂದು ಕಪಿಲಮುನಿಯ ನಿಂದೆಯಿಂದ ಸಗರನವಂಶ ಕ್ಷಯವಾಗಲು, ಬಳಿಕ ಒಂಭತ್ತನೆಯಂಶದ ಭಗೀರಥನು ಇಪ್ಪತ್ತುನಾಲ್ಕುಸಾವಿರವರುಷ ತಪವ ಮಾಡಿ ಶಿವನ

1. ಮುಸವ (ಗಚ) 2. ನಶ್ಚೈವ (ಕ ಗ ಚ)? 3. ನರಕಂವ್ರಜೇತ್ (ಕ ಗ ಚ)?

ಜಡೆಯಲ್ಲಿರ್ದ ಗಂಗೆಯ ತರುವಾಗ ಜಹ್ನುಕಮುನಿ ನನ್ನಯಜ್ಞದಮೇಲೆ ತರಬಹುದೇ ಎಂದು ಅದತನ್ನ ಶಿಶುವಂ ಮಾಡಿ ತೊಡೆಯಮೇಲಿಟ್ಟು ಸಲಹುತ್ತಿರ್ದನು. ಅಲ್ಲಿತ್ತ ಹನ್ನೆರಡುಸಾವಿರ ವರುಷ ತಪಕ್ಕೆ ಭಗೀರಥ ಕುಳಿತಿರಲು, ಜಹ್ನುಕಮುನಿ ಏತಕೆಕುಳಿತೆ ಎಂದು ಕೇಳಲು, ಗಂಗೆಯ ಕೊಡ ಎನಲು ಆಗ ಕೊಟ್ಟನು. ಮಂದರಗಿರಿಯು ಆ ಗಂಗೆಯ ತಡೆಯಿತ್ತು. 1ವಿಘ್ನೇ1ಶ್ವರನ ಕುರಿತು ತಪವಮಾಡಿ ಅದನು ಒಡೆದು ಕೊಂಡು ಹೋಗಿ ಭಗೀರಥನು ಸತ್ತವರಮೇಲೆ ಹರಿಯಿಸಲು ಅವರು ಸ್ವರ್ಗಕ್ಕೆ ಹೋದರು. ಭಗೀರಥನು ಯಜ್ಞಾದಿ ಷೋಡಶ ಮಹಾದಾನವನು ಮಾಡುತ್ತ ಲಕ್ಷದ ಮೇಲೆ ಎರಡು ಸಾವಿರದೈನೂಱು ವರುಷ ರಾಜ್ಯವನಾಳಿ ಸ್ವರ್ಗಕ್ಕೆ ಹೋದನು.

## "ಜಮದಗ್ನಿಯು ಕೊಂದ ಕಾ2ರ್ತವೀ2ರ್ಯನೆಂಬುದಕ್ಕೆ ಕಥೆ"

ಒಂದು ಕಲ್ಪದಲ್ಲಿ ಶಿವನು ಕಶ್ಯಪಬ್ರಹ್ಮನ ಮರ್ತ್ಯಕ್ಕೆ ಕಳುಹಿದರೆ ರುಚೀಕ ಮುನಿಯ ಹೆಂಡತಿ ಸತ್ಯಾವತಿಗೆ ಜಮದಗ್ನಿಯಾಗಿ ಹುಟ್ಟಿದನು. ಮತ್ತೆ ಕರ್ಣಕುಬ್ಜದೇಶ ದಲ್ಲಿ ಇಕ್ಷುಕರಾಯನ ಮಗ ರೇಣುಕರಾಜ ಯಜ್ಞವ ಮಾಡುವಾಗ ಅದಱಲ್ಲಿ ಅದಿ ತಿಯು ರೇಣುಕೆಯಾಗಿ ಹುಟ್ಟಿದಳು. ಬಳಿಕ ಆಕೆಯ ಸ್ವಯಂವರವಂ ಮಾಡು ವಾಗ ಜಮದಗ್ನಿ ಬಂದು ಕುಳ್ಳಿರಲು, ಆಗ ರೇಣುಕೆಯು ಜಮದಗ್ನಿಗೆ ರತ್ನಮಾ ಲೆಯ ಹಾಕಲು ಆಗ ಆಸನೆಯ ಮೇಲೆ ಕುಳ್ಳಿರಿಸಿ ಮದುವೆಯಂ ಮಾಡುವೆನೆಂದಿರಲು ಎಲ್ಲಾ ದೊರೆಗಳು ಸಂನ್ಯಾಸಿಗೆ ಕೊಡಬಹುದೆ ಎಂದು ರೇಣುಕರಾಯನ ಕೊಲ್ಲಬರಲು ಜಮದಗ್ನಿ ಬಿಲ್ಲುಬಾಣದಿಂದ ಎಲ್ಲರನು ಓಡಿಸಿದನು. ಮಾವನಾದ ರೇಣುಕರಾಯನು ಜಮದಗ್ನಿ3ಯಂ ಮನೆಗೆ ತಂ3ದು ಉತ್ಸಾಹದಿಂದ ಮದುವೆಯಂ ಮಾಡಿ ಬಳಿಕ ರೇಣುಕರಾಯ ತನ್ನ ಮಗಳಿಗೆ ಸಾವಿರಾನೆ ಸಾವಿರಕುದುರೆ ಸಾವಿರದಾಸಿಯರು ಐನೂಱು ಕುಲಸತಿಯರ ಪತಿಯರು ಸಹವಾಗಿ ಕರ್ಣಕುಬ್ಜದೇಶ ಕೋಸಲದೇಶ, ಮಹೋದಧಿದೇಶ ಮುತ್ತು ನವರತ್ನದುಕೂಲಾದಿ ಇಷ್ಟನ್ನು ಬಳುವಳಿಯಾಗಿ ಕೊಟ್ಟು ಕಳುಹಿದನು. ಬಳಿಕ ರೇಣುಕೆಯು ಜಮದಗ್ನಿಯು ಭಾಗೀರಥಿಯ ತೀರದಲ್ಲಿ ಪರ್ಣ ಶಾಲೆಯಲ್ಲಿ ಹದಿನೆಂಟು ಸಾವಿರ ಮುನಿಗಳಿಗೆ ನಿಚ್ಚಲು ನೀಡುತ್ತಿರಲು ಲಿಂಗಪೂಜೆಯ ಮಾಡುತ

ಗ್ರಂಥ॥ ವಿಭೂತಿ ವಿಭವಶ್ಚೈವ । ವಿಧಿಕರ್ಮ ವಿನಾಶನಂ ॥
ಯಮಲೋಕೇ ಭಯಂನಾಸ್ತಿ। ಶಿವಲೋಕೇ ಮಹೀಯತೇ ॥

ಎಂಬ ಶ್ರುತಿವಾಕ್ಯವಿಡಿದು ಭಸ್ಮಧಾರಣದಿಂದ ಮೂಱುವರೆಕೋಟಿ ಆಯು ಷ್ಯವ ಪಡೆದು ಸಕಲ ವಿಘ್ನವ ಜಯಿಸುತ್ತಿರಲು, ಆಗ ಇಂದ್ರನು ಅವರ ವೆಚ್ಚಕ್ಕೆ ಸಾಲದೆಂದು ಕಾಮಧೇನು ಮೊದಲಾದ ಉಚಿತ ವಸ್ತುವಂ ಕಳುಹಿ ದನು. ಮತ್ತೆ ರೇಣುಕೆಗೆ ಇಂದ್ರ ಬೃಹತ್ಕಣ ನಾಮದಿಂದ, ಅಗ್ನಿ ವಸುನಾಮದಿಂದ

1. ಯಜ್ಞೇ (ಕ) 2. ತ್ರಕ (ಗ ಚ), ಈ ಕಥೆಯು ಇತರ ಕಡೆಗಳಲ್ಲಿಯೂ ಇದೇರೀತಿ ಬರುತ್ತದೆ. 3. ಯು ಮನೆಗೆ ಬಂ (ಗಚ)

ವಾಯು ವಿಶ್ವಾವಸು ನಾಮದಿಂದ, ಸೂರ್ಯ ಬೃಹದ್ಭಾನು ನಾಮದಿಂದ ಈ ನಾಲ್ವರು ಮಕ್ಕಳಾದರು. ಬಳಿಕ ವಿಷ್ಣು ರೇಣುಕಿಗೆ ಮಗನಾದೇನೆಂದು ನಾರದನ ಕಯ್ಯ ಹೇಳಿಕಳುಹಲು ಆವ ಬಂದು 1ಹಾಂಗೆ ಹೇಳಲು1 ಅದಕೆ ನಗೆಯಾಡಿ ಬಸುಱಲ್ಲಿ ಬಂದೆಹೆನೆಂದು ಹೇಳಿಕಳುಹಿದವರುಂಟೆ ಬರಲಿ ಎನಲು, ಬಳಿಕ ರೇಣುಕಾದೇವಿಯ ಬಸುಱಲ್ಲಿರ್ದನು. ಅತ್ತ ಹೇಹದೇಶದ ಮಾಹಿಷ್ಮತೀಪುರದಲ್ಲಿ ಕೃತವೀರ್ಯನ ಸತಿ ರಾಕಾವತಿಯಲ್ಲಿ ಮಧುವೆಂಬ ರಾಕ್ಷಸನು ಮುನಿಯ ಲಿಂಗಪೂಜೆಯನಳಿದ ಕಾರಣದಿಂದ ಕಾರ್ತವೀರ್ಯನಾಮದಿಂದ ಕೈಯಿಲ್ಲದವನಾಗಿ ಪುಟ್ಟಲು, ನಾನು ಕೈಯಿಲ್ಲದವನಾದ ಕಾರಣವೇನು ಎಂದು ಭವಿಷ್ಯತ್ಕಾಲವ ಬಲ್ಲ ಮುನಿಯಂ ಕೇಳಲು ಹೇಳಿದನು:— ನೀನು ಮೊದಲ ಜನ್ಮದಲ್ಲಿ ಮುನಿಯ ಲಿಂಗಪೂಜೆಯನಳಿದ ಕಾರಣದಿಂದ ನಿನಗೆ ಕೈಯಿಲ್ಲ. ಬಳಿಕ ದತ್ತೇಶ್ವರಲಿಂಗದಿಂದ ಆದೀತು ಎನಲು, ದತ್ತಾತ್ರೇಯ ಮುನಿಯ ಬಳಿಗೆ ಹೋಗಲು ಏಕೆಬಂದೆಯೆಂದು ಕೇಳಲು ನನಗೆ ಹಸ್ತವಕೊಡಿಯೆನಲು, ಆಗ ದತ್ತಾತ್ರಯೇಶ್ವರಲಿಂಗದ ಮಹಿಮೆಯಿಂದ ಆತನು ಸಾವಿರತೋಳ್ಗಳಂ ಪಡೆದು ಹಾಂಗೆ ಊರಿಗೆ ಬಂದು ಆನೆ ಕುದುರೆ ರಥ ಪದಾತಿ ಅನಂತಕೋಟಿ ಮನ್ನೆಯ ರು ಸಕಲೈಶ್ವರ್ಯದಿಂದ ಬಾಳುತ್ತಿರಲು, ಅತ್ತ ರೇಣುಕೆಯ ಬಸುಱಲ್ಲಿ ನಾರಾಯಣ ಪರಶು ರಾಮ ನಾಮದಿಂದ ಹುಟ್ಟಲು ಕಾರ್ತವೀರ್ಯ ನಡುಗಿ ಆಯುಧ ನೆಲಕೆಬೀಳಲು ಇದೇ ನೆಂದು ಚಿಂತಿಸುತ್ತಿರಲು ಆಗ ತಾಯಿ ಹೇಳಿದಳು. ಶಿವನಲ್ಲಿ ಭಕ್ತಿ ಮುನಿಗಳಲ್ಲಿ ಭೀತಿ ಯಿದ್ದರೆ ನಿನಗೆ ಅಂಜಿಕೆಯಿಲ್ಲವೆನಲು ಹಾಂಗೆ ಇರುತಿರ್ದನು. ಇತ್ತ ಪರಶುರಾಮ ಶಿವನಲ್ಲಿ ಬಾಣ ವಿಘ್ನೇಶ್ವರನಲ್ಲಿ ಕೊಡಲಿಯಂ ಪಡೆದು ಷಣ್ಮುಖದೇವರಲ್ಲಿ ಬಿಲ್ಲ ವಿದ್ಯವ ಕಲಿವಾಗ, ಇತ್ತ ರೇಣುಕಿಯು ಭಾಗೀರಥಿಯ ತೀರದಲ್ಲಿ ಸ್ನಾನವಮಾಡುತ್ತ ಕುಬೇರನು ರಾಣಿ ಸಹವಾಗಿ ಬರುತಿರಲು ಕಂಡು ನನ್ನ ಗಂಡ ಬಂದಿದ್ದರೆ ನಾವು ಹೀಗೆ ಜಲಕೇಳಿಯನಾಡುವೆನೆಂದು ಕುಬೇರನ ಕಾಮಿಸಿ ರೇಣುಕೆ ಮನೆಗೆ ಹೋಗಲು ಕೆಲವು ದಿನದಮೇಲೆ ಜಮದಗ್ನಿ ತನ್ನ ಸ್ತ್ರೀಯು ಜಾರೆಯೆಂಬುದ ತಿಳಿದು ಉರಿಹ ಸ್ತದಿಂ ಸುಟ್ಟು ಬೂದಿಯಂ ಮಾಡಿ ತಾ ಹೋಗಿ ಪುಷ್ಪವ ಕೊಯ್ದು ತಂದು ಮಂತ್ರ ದಿಂದ ಬೂದಿಯನೆ ಸತಿಯಾಗುವಂತೆ ಸೃಷ್ಟಿಸುವ, ಆ ಸತಿ ಆತನ ಮೆಚ್ಚಿಸಿ 2ಎರಡು2 ಮಂತ್ರವನು ಕಲಿತು ತನ್ನ ಜಾರ ಬರುವ ದಾರಿಯಲ್ಲಿ ಎರಡು ಚೀಟನಿರಿಸಿ ಅವನು ಕಲಿತು ಆಕೆಯ ಬೂದಿಯರೂಪನಳಿದು ಸ್ತ್ರೀರೂಪಮಾಡಿ ಸುರತದಲ್ಲಿದ್ದನು. ಒಂದು ವೇಳೆ ಮುನಿ ಜಪಮಾಲಿಕೆಯ ಮಱದು ಮನೆಗೆ ಬರಲು ಇಬ್ಬರು ರತಿಕೂಟದಲ್ಲಿ ಪ್ಪುದ ಕಂಡು ಅಣಿಮಾಮಂತ್ರದಿಂದ ನುಂಗುವನು. ಮತ್ತೆಯುಗುಳಿ ಸ್ತ್ರೀಯಾಕಾರವ ಮಂತ್ರದಿಂದ ಮಾಳ್ಪನು. ಮತ್ತೆಯು ಮೆಚ್ಚಿಸಿ ಆ ಮಂತ್ರವನು ಕಲಿತು ಜಾರನಲ್ಲಿ ರೇಣುಕಿ ರತಿಗೆಯ್ಯಲು ಒಬ್ಬ ಋಷೀಶ್ವರ ಕಂಡು ಬಂಡುಮಾಡಿದ. ಅದಱಿಂದ

---

1. ಹಾಗೆ ತಿಳುಹಲು (ಕ) 2. ಮಱಿದ (ಕ)

ಜಮದಗ್ನಿಗೆ ರೋಷಹುಟ್ಟಿ ಪರಪುರುಷನ ಭಾವಿಸಿ ನೆರೆದಳೆಂದು ನಾಲ್ವರು ಮಕ್ಕಳಿಗೆ ಇವಳ ತಲೆಯ ಹೊಡೆಯೆನಲು ಅವರು ಹೊಯ್ಯದಿರಲು ಅವರ ಸುಟ್ಟನು. ಪರಶುರಾಮಂಗೆ ಹೊಯ್ಯೆನಲು ಹೊಯ್ದ. ಆಗ ಮೆಚ್ಚಿ ಬೇಡೆನಲು ಪರಶುರಾಮನೆಂದನು. ಈ ತಾಯ ಪ್ರಾಣವನು ಅಣ್ಣಗಳ ಪ್ರಾಣವನು ವಿಘ್ನೇಶ್ವರನಲ್ಲಿ ಭಕ್ತಿಯನು ಈ ಮೂರು ವರವನು ಕೊಡಿ ಎನಲು, ಹಾಂಗೆ ಐವರ ಪ್ರಾಣವನು ಕೊಟ್ಟನು.

ಗ್ರಂಥ: ಯತೀ1ಕೋಪೇನ ಚಾಂಡಾಲಃ | ಚಾಂಡಾಲೋಮೃಗ 1ಗಾರ್ದಭಃ ||
2ಚಾಂಡಾಲಃ ಪಕ್ಷಿಣಾಂ ಕಾಕಃ | ಚಾಂಡಾಲಃ ಸರ್ವ2ದೂಷಕಃ ||

ಎಂದು ಬಳಿಕ ಈ ಕೋಪ ಇಂತು ಮಾಡಿತ್ತುಯೆಂದು ಹೊರಯಿಕೆ ಕರೆಯಲ್ಕ ಕರಿಯ ಕತ್ತೆಯ ರೂಪಿನಲ್ಲಿ ಬಂದು ನಿಲಲು ನೀ ಹೋಗುಯೆನಲು, ನಾ ಹೋದರೆ ನಿನಗೆ ಬಲವಿಲ್ಲವೆಂದು ಹೋಯಿತ್ತು. ಬಳಿಕ ರೇಣುಕಿ ಪುರುಷನ ಕೊರಳ ಕೊಯಿಸುವೆನೆಂಬ ಕ್ಲೇಶದಲ್ಲಿರಲು ಕಾರ್ತವೀರ್ಯನು ಜಮದಗ್ನಿಯ ಆಶ್ರಮಕೆ ಬರಲು ಚತುರಂಗಬಲಕೆ ತೃಪ್ತಪಡಿಸಲು, ಆಗ ಕಾಮಧೇನುವಿನಿಂದಿಷ್ಟು ತೃಪ್ತಿಯಾಯಿತ್ತೆಂದು ಅದ ಕೊಂಡುಹೋಗುವಾಗ ಬಲವ ಸಂಹರಿಸಲು, ಇವನ ತಲೆಯ ಹೊಡೆದು ಧೇನುವಿನ ಕೊರಳಿಗೆ ಕಟ್ಟಿದಲ್ಲದೆ ಬಾರದೆಂದು ರೇಣುಕಿ ಪೇಳಲು, ಕಾರ್ತವೀರ್ಯ ಜಮದಗ್ನಿಯ ಕೊಂದು ಕೊಂಡೊಯ್ವಾಗ ಕಾಮಧೇನು ಸ್ವರ್ಗಕ್ಕೆ ಹೋಯಿತ್ತು ದೇವಲೋಕದಿಂದ ಪರಶುರಾಮ ಬಂದು ರೇಣುಕೆಯ ತಂದೆಯ ಕೂಡೆ ಸಹ್ಯಾದ್ರಿಯಲ್ಲಿ ಕಿಚ್ಚ ಹಾಯಿಸಿದನು. ಬಳಿಕ ಸತಿಪತಿಗಳು ಅಲ್ಲಿಯೇ ರೂಪುದೋಱಿದರು. ಆಗ ಪರಶುರಾಮ ಕಾರ್ತಿಕವೀರ್ಯನಮೇಲೆ ಹೋಗುವಾಗ ಅವನ ಕೂಡೆ ನಾರದನು ಭೂತಗಳು ಮುಂದೆ ಉಕ್ಕುಡವ ಕಾದವೆ ಅವ ಸಂಹರಿಸು ಹೋಗೆನಲು, ಹಾಂಗೆಮಾಡಿ ಮುಂದಕೆ ಹೋಗಿ ಒಬ್ಬ ರಕ್ಕಸನನೆಸೆಯಲು ಪುರದಮೇಲೆ ಅವ ಬೀಳಲು ಅದುಱಿಂದ ಸಹಸ್ರಸಂಖ್ಯೆ ಸತ್ತಿತ್ತು. ಅದ ಕಂಡು ಕಾರ್ತವೀರ್ಯ ಕಾದುವಾಗ ಪರಶುರಾಮ ಮೂಱುವೇಳೆ ಅವನ ತಲೆಯ ಕತ್ತರಿಸಲು ಮತ್ತೆ ಚಿಗುರಿತದು. ಬಳಿಕ ಪರಶುಗೊಡಲಿಯಿಂದ ಹೊಯ್ಯಲು ಮೃತನಾದನು. ಅವನ ದೇಹವ ಗದ್ದಿಗೆಯಮಾಡಿ ರೇಣುಕೆ ಕುಳಿತಳು. ಇತ್ತ ಪರಶುರಾಮ ಬ್ರಹ್ಮಹತಿಯ ಕಳೆಯಬೇಕೆಂದು ಭೂಮಿ ಮೊದಲಾದ ಸಕಲೈಶ್ವರ್ಯವ ಬ್ರಾಹ್ಮಣರಿಗೆ ದಾನವನಿತ್ತು ಭೂಮಿಯ ಬಿಟ್ಟು ನೀ ಹೋಗೆನಲು, ಸಮುದ್ರರಾಜನಲ್ಲಿ ಅಂಬೆಸಗೆ ಭೂಮಿಯ ಬೇಡಲು ತೆಗೆದುಕೊಳ್ಳಿಯೆನಲು ಪರಶುರಾಮನ ಬಾಣ ಮುನ್ನೂಱುಗಾವುದ ಹೋಗುವುದೆಂದು ದೇವೇಂದ್ರ ಒರಲೆಯಾಗಿ ಬಿಲ್ಲಹೆದೆಯ ಕಡಿಯಲು ಪರಶುರಾಮ ಸಮುದ್ರವ ಹೊಕ್ಕು ಹೋಗುವಲ್ಲಿ ಸಮುದ್ರ ಮುಚ್ಚಿಕೊಳಲು ಬ್ರಹ್ಮೇತಿಯ ಕಳೆಯಬೇಕೆಂದು ಬ್ರಾಹ್ಮ

1. ನಾಂ ಕೋಪ ಚಾಂಡಾಲಂ। ಮೃಗ ಚಾಂಡಾಲ(ಕ ಗ ಚ) 2. ಪಕ್ಷಿಣಾಂ ಕಾಕ ಚಾಂಡಾಲಂ ಸರ್ವ ಚಾಂಡಾಲ (ಕ ಗ ಚ)

ಣರಿಗೆ ಭೂಮಿಯ ದಾನವನಿತ್ತು ಪರಶುರಾಮನು ಸಮುದ್ರಕ್ಕೆ ಗುರಿಯಾಗಿ ಸತ್ತು ಹೋದನು.

## "ಮಾಪತಿ ಬೇಡೆ ಕವಚವನಿತ್ತ ಹತಕರ್ಣನೆಂಬುದಕ್ಕೆ ಕಥೆ"

ದಂಬೋಧರನೆಂಬ ರಕ್ಕಸನು ತಪವ ಮಾಡುವಾಗ ಶಿವ ಮೆಚ್ಚಿ ಬೇಡುಯೆನಲು, ಆಗ ಏಳು ಕವಚವ ಪಡೆದು ತೊಟ್ಟುಕೊಂಡು ಲೋಕವನೆಲ್ಲಾ ಸಂಹರಿಸಿ ಮುನಿಗಳ ಹುಡುಕುತ್ತ ಬರುವಾಗ ನರನಾರಾಯಣರೆಂಬ ಮುನಿಗಳ ಕಂಡು ನನ್ನ ಕೂಡೆ ಕಾದಬೇಕೆನಲು, ಆಗ ಒಬ್ಬ ಕಾದುವ ಒಬ್ಬ ಶಿವಧ್ಯಾನದಲ್ಲಿರುವ. ಅವ ಬಳಲಿದರೆ ಧ್ಯಾನದಲ್ಲಿರ್ದವ ಕಾದುವ ಈ ಪ್ರಕಾರದಲ್ಲಿ ಕಾದಿ ಸೋತು ಒಂದು ಕವಚವನುಳುಹಿ ಕೊಂಡು ಓಡಿಬಂದು ಬಳಿಕ ದೂರ್ವಾಸಮುನಿಕೊಟ್ಟ ಮಂತ್ರದಿಂದ ಪಾಂಡವನ ಸ್ತ್ರೀ ಕುಂತಿಗೆ ಸೂರ್ಯನು ಬಂದು ನೆರದಲ್ಲಿ ಕರ್ಣನಾಗಿ ಹುಟ್ಟಿದ. ಸೂತನೆಂಬ ವ್ಯಾಧನಿಂದ ಬೆಳೆದು ದ್ರೋಣ ಭೀಷ್ಮಾಚಾರ್ಯರಲ್ಲಿ ವಿದ್ಯವ ಕಲಿತಿರಲು, ಆ ಕರ್ಣಂಗೆ ಕೌರವಂ ದಳವಾಯಿಪಟ್ಟವ ಕಟ್ಟಿ ದಂಡ ಕಳುಹಲು, ಇದ ಕೇಳಿ ಪಾಂಡ ವರು ಕರ್ಣನಮೇಲೆ ನಾಲ್ಕುಸಾವಿರ ರಥ, ಹದಿನೆಂಟುಸಾವಿರ ಕುದುರೆ, ನೂಱುಘಟೆ ಆನೆ, ಲಕ್ಷಕಾಲಾಳುಗಳಿಂದ ತಾಕಲು, ಕರ್ಣನ ಬಲದೊಳಗೆ ಹತ್ತುಸಾವಿರ ಕುದುರೆ, ಸಾವಿರ ಆನೆ, ಕಾಲಾಳುಗಳ ಭೀಮ ಕೆಡಹಿದ. ಬಳಿಕ ಅರ್ಜುನನು ಕೃಷ್ಣನ ಸಾರ ಥಿಯಮಾಡಿಕೊಂಡು ರಣಕೆ ಬಂದ. ಆತನ ಆಯುಧಗಳ ಗಣನೆಯೆಂತೆಂದೊಡೆ:— ಮುಳ್ಳಂಬುಗಳು ಸಾವಿರದ ಏಳ್ನೂಱು, ಒಂಭತ್ತು ಸಾವಿರ ಮಿಟ್ಟಿಯಂಬುಗಳು ಸರಳಂಬು ಹನ್ನೆರಡುಸಾವಿರ, ಮೊನೆಯ ಬೋಳಂಬು ನಾಲ್ಕುಸಾವಿರ, ನಾಳಿಯಂಬ ಗಳು ಹತ್ತುಸಾವಿರ. ಇವನು ಆಱುಬಂಡಿಯ ಮೇಲೆ ತುಂಬಿಕೊಂಡು ಮತ್ತೆ ಪರಶು ಮುಸಲ ಮುಸಂಡಿ ಶಲ್ಯಹ ಪರಿಘ ತೋಮರ ಚಕ್ರ ಅಸಿ ಮುದ್ಗ, ತ್ರಿಶೂಲ ಕಠಾರಿ ಖೇಟಕ ಭಿಂಡಿವಾಳ ಸುರಗಿ ಮೊದಲಾದ ಮೂವತ್ತೆರಡು ಆಯುಧಗಳ ಒಂದೊಂದು ಬಂಡಿಯಲ್ಲಿ ತುಂಬಿಕೊಂಡು ಬರಲು, ಇತ್ತ ಕರ್ಣನು ಶಲ್ಯನ ಸಾರಥಿಯ ಮಾಡಿಕೊಂಡು ಎಂಟುನೂಱು ಬಂಡಿಗಳಲ್ಲಿ ಅಂಬ ತುಂಬಿ ಕೊಂಡು ರಣರಂಗಕ್ಕೆ ಬಂದು ಇನ್ನೂಱು ಬಿಲ್ಲ ರಥದ ಮೇಲೆ ಎಡದ ಕಡೆಯಲ್ಲಿ ಮಡಗಿಕೊಂಡು ಅರ್ಜುನನ ಕೂಡೆ ಕಾಳಗವ ಮಾಡುವಾಗ ಆನೆಗೆ ಆನೆ ಕಾದುವಂತೆ, ರಾಮರಾವಣರು ಕಾದುವಂತೆ ಕಾದುತ್ತಿರಲು, ಆಗ ಅರ್ಜುನನ ಕಡೆಗೆ ಹರಿ ವಿರಿಂಚಿ ದಿಕ್ಪಾಲಕರಾದರು. ಇನ್ನು ಕರ್ಣನ ಸಾಹಸಿಗಳು: ಹನ್ನೆರಡುರಾಶಿ ನಕ್ಷತ್ರ ಆಕಾಶ ವಾಯು ಅಗ್ನಿ ಸಮುದ್ರಗಳು. ಬಳಿಕ ಕರ್ಣನೆಚ್ಚಂಬುಗಳ ಅರ್ಜುನ ಕತ್ತರಿಸಿದ. ತನ್ನಂಬುಗಳಿಂದ ಅವನ ಧ್ವಜವ ಕತ್ತರಿಸಿದ. ಅಂಬುಗಳಲ್ಲಿ ಬಿಲ್ಲ ಕತ್ತರಿಸಿ ಆಮೇಲೆ ಕರ್ಣನು ಸರ್ಪಬಾಣವ ಬಿಡಲು ಕಿಡಿಗಳನು ಹೊಗೆಗಳನುಗುಳುತ್ತ ಆಕಾಶದ ಪಕ್ಷಿ ಗಳನೆಲ್ಲನುರುಹುತ್ತ ಬಾಯಲ್ಲಿ ವಿಷದ ನೊರೆಯ ಕಾರುತ್ತ, ಛಟಾಛಟಾ ಎಂದು ಕಿಡಿ

ಗಳನುದುರಿಸಿ ಕೆದಱುತ್ತ ಆಕಾಶವೆಲ್ಲ ಹೊಗೆಯಿಂದ ಅಂಧಕಾರವಾಗಲು, ಆಗ ಇಂದ್ರನು ಭಯದಿಂದ ನಿರ್ವಿಘ್ನಮಸ್ತು ಎಂದು ಹರಸಿದನು. ಬಳಿಕ ಅರ್ಜುನ ಧರ್ಮ ಭೀಮ ಕೃಷ್ಣರು ಶಿವನ ಸ್ಮರಿಸುತ್ತಿರಲು, ಆಗ ಸರ್ಪಾಸ್ತ್ರ ತಪ್ಪಿಹೋಗಲು, ಶಲ್ಯ ಮತ್ತೆ ಸರ್ಪಾಸ್ತ್ರದಿಂದೆಸೆ ಎನಲು, ಕರ್ಣ ಮತ್ತೆ ಎಸೆಯಲು, ಕುದುರೆಗಳು ಕಂಗೆಟ್ಟು ಭಯದಿಂದೆ ಆನೆಗಳೊದಱಿದವು. ರಥಗಳು ಮುಱಿದವು. ವಿಷದ ಜ್ವಾಲೆಯಿಂದ ಭೀಮಾರ್ಜುನಾದಿಗಳು ಮಂತ್ರವ ಜಪಿಸುತ್ತ ತಮ್ಮ ಬಾಣಂಗಳಿದಿರಾಗಿ ಬಿಡಲು ಅವನೆಲ್ಲಾ ಸರ್ಪಾಸ್ತ್ರ ನುಂಗುತ್ತ ಬರುವುದ ಅರ್ಜುನ ಕಂಡು ರಥವ ಐದಂಗುಲ ನೆಲದೊಳಗೆ ಇಳಿಯಮೆಟ್ಟಿದ. ಆಗಲಾ ಸರ್ಪಾಸ್ತ್ರ ಬಂದು ಕಿರೀಟವ ಕತ್ತರಿಸಿಕೊಂಡು ಹೋಗಲು, ಬಳಿಕ ಅರ್ಜುನನು ಉರಿಯನುಗುಳುವ ಬಾಣದಲ್ಲಿ ಕರ್ಣನ ಎದೆಯನೆಸೆಯಲು, ಅದಱಲ್ಲಿ ಸಾಯನೆಂದು ಕೃಷ್ಣ ವಿಪ್ರವೇಷದಲ್ಲಿ ಕರ್ಣನ ಸಮೀಪಕ್ಕೆ ಬಂದು ನೀನು ತ್ಯಾಗಿಯೆಂಬುದ ಕೇ[1]ಳಿ ಬೇಡುವದಕ್ಕೆ ಬಂ[1]ದೆನೆನಲು ಸಿಂಹಾಸನದಲ್ಲಿರುವಾಗ ಬೇಡಲಿಲ್ಲ ರಣದಲ್ಲಿ ಬೇಡಿದೊಡೆ ಏನದೆ ಎನಲು, ಉದಯದಲ್ಲಿ ಭೋಗ ಕರ್ಣ, ಮಧ್ಯಾನ್ಹದಲ್ಲಿ ತ್ಯಾಗ ಕರ್ಣ, ಅಸ್ತಮದಲ್ಲಿ ದರಿದ್ರ ಕರ್ಣ, ನೀನು ದಾನಿಯಾದೊಡೆ ನಿನ್ನ ಕವಚವಕೊಡು ಎನಲು ಕೊಟ್ಟನು. ಬಳಿಕ ಅರ್ಜುನನು ಶಿವನಲ್ಲಿ ಪಡೆದ ಪಾಶುಪತಾಸ್ತ್ರದ ಕೂಡೆ ಗಿರಿಜಾದೇವಿಯರು ಕೊಟ್ಟಂಜನಾಸ್ತ್ರದಿಂದ ಕರ್ಣನ ಶಿರವ ಕತ್ತರಿಸಲು ಅವ ಮೃತನಾದನು ಎಂದು ವೈವಸ್ವತಮನು ಜೈಮಿನಿಗೆ ಪೇಳಿದನು.

**"ಬಲಿ ಮೊದಲಾದವರು ಕೀರ್ತಿವಲ್ಲಭರಾದರು ಅರಸಾ" ಎಂಬುದಕ್ಕೆ ಕಥೆ**

ಉತ್ತರದೇಶದ ಮೇಘಪುರದಲ್ಲಿ ಒಬ್ಬ ವಿಧವೆಯ ಮಗ ತಾಯ ಮಾತ ಕೇಳದೆ ಸೂಳೆಗಾಱಿಕೆಯ ಮಾಡುತ್ತಲಾಕೆಯ ಮುಡಿಗೆಹೂವ ಕೊಂಡು ಹೋಗುವಾಗ ಜಾಱಿ ಬಿದ್ದಲ್ಲಿ ಪುಷ್ಪವು ಜೀರ್ಣಾಲಯದ ಲಿಂಗದ ಮೇಲೆ ಬೀಳಲು ಆತ ಮರಣವಾಗಲು ಯಮದೂತರು ಕೊಂಡುಹೋಗಲು, ಯಮನು ಇವನ ಪುಣ್ಯವೇನೆಂದು ಚಿತ್ರಗುಪ್ತರ ಕೇಳಲು, ಪ್ರಾಣವ ಬಿಡುವಾಗ ಚೆಲ್ಲಿದ ಪುಷ್ಪವು ಲಿಂಗದ ಮೇಲೆ ಬೀಳಲು, ಆಗ ಇವನ ಕರೆದೊಯ್ದು ಬೃಹಸ್ಪತಿಗೆ ಹೇಳಿ ಇಂದ್ರನ ಗದ್ದುಗೆಯಲ್ಲಿ ಮೂಱುಘಳಿಗೆ ಕುಳ್ಳಿರಿಸಿ ಬನ್ನಿ ಎನಲು, ಅವನ ಒಯ್ದು ಹಾಂಗೆ ಕುಳ್ಳಿರಿಸಲು, ಐರಾವತವನಗಸ್ತ್ಯಂಗೆ, ಉಚ್ಚೈಶ್ರವವ ವಿಶ್ವಾಮಿತ್ರಂಗೆ, ಕಾಮಧೇನುವ ವಸಿಷ್ಠಂಗೆ, ಕಲ್ಪವೃಕ್ಷವ ಕೌಂಡಿಲ್ಯರಿಗೆ ದಾನವ ಕೊಡಲು,ಬಳಿಕಾ ಮೂಱುಘಳಿಗೆ ಹೋಗಲು, ದೂತರು ಯಮನಬಳಿಗೆ ಕರಕೊಂಡು[2] ಬರ[2]ಲು, ಆಗ ದೇವೇಂದ್ರನು ಇವನೆನ್ನ ಬದುಕ ಹಾಳುಮಾಡಿದನೆಂದು ಯಮನಕೂಡೆ ಹೇಳಲು, ಮೂಱುಘಳಿಗೆತನಕ ಅವನ ಒಡವೆಯಲ್ಲವೆಯೆಂದು ಇಂದ್ರನ ಯಮನು ಕಳುಹಿ ಈ ದಾನದ ಫಲದಿಂದ ಇವನು ರಾಜನಾಗಲಿಯೆಂದು ಪೇಳಿ ಯಮಕಳುಹಲು,ಆಗ ವಿರೋಚನನೆಂಬ ಕ್ಷತ್ರಿಯರಾಜನ ರಾಣಿ ಸ್ವರೋಚಿಯಲ್ಲಿ

1. ಳಿಬಂ (ಗಚ) 2. ಹೋಗ (ಗ ಚ)

ಹುಟ್ಟಿ ಬಲಿಯೆಂಬ ಹೆಸರಿನಿಂದ ವಿದ್ಯಾಪಾಳಿಯೆಂಬ ರಾಜನ ಕುಮಾರತಿಯ ಮದುವೆ ಯಾಗಿ ರಾಜ್ಯವನಾಳುತ್ತಿರಲು, ಆತಂಗೆ ವಸುವರ್ಮ ಮಹಾಬಾಹು ಶರಾಂಗತಿ ತ್ರೈಲೋಕ ಅಕಾಯ ವಿಧಾತೃಗಳೆಂಬ ಮಕ್ಕಳು ಹುಟ್ಟಿದರು. ಬಳಿಕ ಯಜ್ಞವ ಮಾಡಲು ನಾಲ್ಕು ಬಿಳಿಯ ಕುದುರೆ ಸಹವಾಗಿ ಒಂದು ರಥ ಆ ಹೋಮದಲ್ಲಿ ಹುಟ್ಟಲು, ಅದನೇಱಿಕೊಂಡು ಬಲೀಂದ್ರಚಕ್ರವರ್ತಿಯು ಅಮರಾವತಿಗೆ ಮುತ್ತಿಗೆಯ್ನ ಹಾಕಲು ಇಂದ್ರ ಓಡಿದನು. ಬಲಿಯಾಗ ಶುಕ್ರನ ಕೂಡೆ ನನ್ನ ಕುಟುಂಬವ ಇಲ್ಲಿಗೆ ತರಲೆ ಎಂದು ಕೇಳಲು, ಅಶ್ವಮೇಧವ ಮಾಡಿದಲ್ಲದೆ ಇಂದ್ರಪದವು ದಕ್ಕದೆನಲು, ಬಲಿಯ ದೇವೇಂದ್ರನ ಪಟ್ಟಣದೈಶ್ವರ್ಯವನೆಲ್ಲ ತನ್ನ ಪಟ್ಟಣಕ್ಕೆ ಕೊಂಡುಹೋಗು ವೆನೆಂದು ಒಯ್ವಾಗ ಮುನ್ನ ದೂರ್ವಾಸನ ಶಾಪವು ಇಂದ್ರನ ಭಾಗ್ಯವು ನೀರೊಳಗೆ ನೆರೆಯಲಿಯೆಂಬ ಕಾರಣದಿಂದ ಬಲಿಯ ದಂಡ ಸಮುದ್ರ ಮುಳುಗಿಸಲು, ಬಲಿ ತಾನು ಓಡಿಬಂದು ಮುನ್ನ ಶುಕ್ರಪೇಳಿದ ಕಾರಣ ದಿಟವಾಯಿತೆಂದು ಬಲಿಯು ಭಾಗೀ ರಥೀ ತೀರದಲ್ಲಿ ಒಂದುಕಡಮೆ ನೂಱುಯಜ್ಞವ ಮಾಡುತ ಹದಿನೆಂಟುಸಾವಿರ ಬ್ರಾಹ್ಮಣ ಭೋಜನವ ಮಾಡುತ ನಾರಾಯಣನೆ ದೈವವೆಂದು ನಂಬಿ ಮತ್ತೊಂದು ಯಜ್ಞವ ಮಾಡಬೇಕೆಂದು ಮಾಡುವಾಗ ಇತ್ತ ದೇವೇಂದ್ರನು ವಿಷ್ಣುವಿನ ಕೂಡೆ ನನ್ನಭೋಗವ ಕೊಡಿಸು ಎನಲು, ಬಳಿಕ ಹರಿಯು ಗದೆ ಚಕ್ರ ಬಿಲ್ಲು ಇವರ ಕೂಡೆ ಬಲಿಯ ವಧಿಸುಯೆಂದು ಸೇಳಲು, ಅವು ನಮ್ಮ ಕೈಲಾಗದೆನಲು ದೇವೇಂದ್ರಂಗೆ ನಿನ್ನ ಭೋಗವು ಶಿವನಪ್ಪಣೆಯಿಂದ ಸಮುದ್ರವ ಕಡೆದಲ್ಲದೆ ಬಾರದೆಂದು ಪೇಳಲು, ಪೇಳಿ ಕಳುಹಿ ಇಂದ್ರನ ನಾರಾಯಣ ತಾನೆ ಅದಿತಿಯಲ್ಲಿ ವಾಮನಾವತಾರವಾಗಿ ಪುಟ್ಟಿ ವೇದವನೋದುತೆ ಬಲಿಯ ಯಜ್ಞದ ಸಮೀಪಕ್ಕೆ ಬರಲು, ಅವರಾರೆಂದು ಚಂಡಾರ್ಕ ರೆಂಬ ದೂತರ ಕಳುಹಲು ಅವರು ಬಂದು ನೋಡಿ ಪೋಗಿ ಒಬ್ಬ ಗಿಡ್ಡ ಹಾರುವನೆಂದು ಪೇಳಲು, ತಾನೆ ಬಂದು ಕರೆಕೊಂಡುಹೋಗಿ ಬ್ರಾಹ್ಮಣನೆ ದೈವವೆಂದು ನಂಬಿ ಬಲಿಯು ಏನು ಬಂದಿರೆಂದು ಕೇಳಲು, ತೊಳಸಿಯ ಬಿತ್ತುವುದಕೆ ಮೂಱಡಿ ಭೂಮಿ ಬೇಕೆನಲು ಧಾರೆಯನೆರೆದುಕೊಟ್ಟು ಕಳುಹಲು, ಹೋಗಿ ಮರಳಿ ಸ್ಥೂಲಶರೀರಿಯಾಗಿ ಬಂದು ಮೂಱಡಿ ಭೂಮಿಯ ತಾರೆನಲು, ಆಗ ಬಲಿ ಮೂಱುಹೆಜ್ಜೆಯನಳೆದುಕೋ ಎನಲು,ಒಂದು ಹೆಜ್ಜೆಯಾಗುವಂತೆ ಭೂಮಿಯ ಮೆಟ್ಟಿ ಇನ್ನೊಂದುಹೆಜ್ಜೆಗೆ ಆಕಾಶಕ್ಕೆ ನೀಡೆ ಇನ್ನೊಂದುಹೆಜ್ಜೆಯ ಭೂಮಿಯ ತೋಱೆಂದು ತಲೆಯಮೇಲೆ ಮತ್ತೊಂದು ಹೆಜ್ಜೆಯನಿಡಲು ಬಲಿ ಪಾತಾಳಕ್ಕೆ ಇಳಿದನು. ಅತ್ತಲಾಕಾಶಕ್ಕೆ ನೀಡಿದ ಹೆಜ್ಜೆ ಸತಶಿ ಲೋಕದಲ್ಲಿ ತಪವನಮಾಡುತ್ತಿರ್ದ ಬ್ರಹ್ಮನ ಬಳಿಗೆ ಹೋಗಲು, ಇದು ಶಿವನ ಪಾದವಾ ದರೆ ಅಭಿಷೇಕವಾಗಲಿ ಮತ್ತೊಬ್ಬರ ಕಾಲಾದೊಡೆ ಕೆಡಲಿಯೆಂದು ಕಮಂಡಲದುದಕವ ತಳಿಯಲು ಕಾಲು ಕತ್ತರಿಸಿ ಬೀಳಲು, ಆ ಮೋಟುಗಾಲು ಬ್ರಹ್ಮಾಂಡತನಕ ಬೆಳೆದು ಬಾಧಿಸುತ್ತಿರಲಾಗ ಭೈರವಗಣೇಶ್ವರ ಬಂದು ಎದೆಯಮೇಲೊದ್ದು ಶಿರದಮೇಲೆ

ಹೊಯ್ದು ಕೆಡಹಿ ಬೆನ್ನೆಲುವನು ಚರ್ಮವನು ತೆಗೆದು ನಿಂದಿರಲು ವಿಷ್ಣುವಿಂಗೆ ಎಚ್ಚರುಪುಟ್ಟಿ ಶಿವನ ನುತಿಸಲು ಆ ಭೈರವಗಣೇಶ್ವರನು ಅಸ್ಥಿಯ ಕಂಕಾಳವಮಾಡಿ ಪಿಡಿದು ಚರ್ಮವನ್ನುಟ್ಟುಕೊಂಡು ಆದಿಭೈರವನೆಂಬ ಶಿವನೊಪ್ಪಿದನು.

## "ಕೀರ್ತಿಯಿಂ ಭೋಜನೆಂಬುದಕ್ಕೆ" ಕಥೆ

ಬಲ್ಲಕಿಯೆಂಬ ಪಟ್ಟಣದಲ್ಲಿ ಮಲ್ಲಿರಾಜನೆಂಬ ಶಿವಭಕ್ತನಿಹನು. ಆತನ ಸತಿ ಹೆಱುವಾಗ ಮುನ್ನೂಱು ಜೋಯಿಸರಿಗೆ ಪಟ್ಟಲನಿಕ್ಕಿರುವಾಗ ಶಿಶು ಜನಿಸಿತ್ತು. ಇದು ತಂದೆಗೆ ಒಳ್ಳಿತಲ್ಲ ಬಿಸುಡಬೇಕೆನಲು ತೊಟ್ಟಿಲೊಳಗೆ ಮಡಗಿ ಬಿದಿರಮೆಳೆಗೆ ಕಟ್ಟಿ ಬರಲು ಮೂಱುತಿಂಗಳ ಮೇಲೆ ಅರಸುಗೊಡೆಯ ನೋಡುವಾಗ ಅಲ್ಲಿ ಈ ಹುಟ್ಟಿದ ಶಿಶು ಕೀರ್ತಿವಂತನಾದಾನೆಂದು ಬರೆದಿರಲು, ಆಗ ಕಂಡು ಬಾಗಿಲವರ ಕರೆದು ಶಿಶು ಜನಿಸುವಾಗ ಬಂದಿದ್ದವರಾರೆನಲು, ಈ ಸಣ್ಣಾವ ಬಂದಿದ್ದನೆಂದು ತೋಱಲು, ಎಲೆ ಬಾಲಕ ಶಿಶು ಸತ್ತಿತ್ತು ಇಂತೇಕೆ ಬರೆದೆಯೆನಲು, ಅದು ಸಾಯ ಲಿಲ್ಲ ಕೊಂಡು ಬನ್ನಿಯೆನಲು ಆಗ ಪರಿಚಾರಕರು ಹೋಗಿ ತಂದು ಮುಂದಿರಿಸಿ ಅದು ಮೇಲಿರ್ದ ಜೇನುಗಾಳಿಗೆ ಕಡ್ಡಿತಾಗಿ ಬಾಯೊಳಗೆ ಬೀಳಲು ಬದುಕಿತ್ತುಯೆನಲು ಅರಸನಾಗಳೀ ಪುಣ್ಯವಂತನ ತಂದೆಗೆ ಹೊಲ್ಲವೆಂದು ಬಿಸಾಡಿಸಿದ. ಮುನ್ನೂಱು ಹಾರುವರ ಕಲ್ಲಗಾಣಕ್ಕೆ ಹಾಕಿಸುವಾಗ ಬಾಲಕನಾದ ವರರುಚಿಯೆಂದನರಸಂಗೆ. ಗಳಿಗೆ ಬರುವ ಚಮತ್ಕಾರವಿವರಿಗೆ ತಿಳಿಯದು, ನಾ ತೋಱುವೆನೆಂದು ಮೂಱು ಬಾಳೆಯ ಕಂಭವ ನಿಲಿಸಿ ಕತ್ತಿಯನೆತ್ತಿ ಹೊಯ್ವಾಗ ಒಂದಱಲ್ಲಿ ಹಾಲು ಒಂದಱಲ್ಲಿ ನೀರು ಒಂದಱಲ್ಲಿ ರಕ್ತ ಸುರಿಯಲು, ಮೂಱರಲ್ಲಿಯೂ ಹಾಲು ಬೀಳಬೇಕು. ವಿಷ ಗಳಿಗೆ ಬಂದುದರಿಂದ ಹಿಂಗಾದುದೆಂದು ಅವರ ಬಿಡಿಸಿದನು. ಬಳಿಕ ಆ ಶಿಶುವಿಗೆ ಭೋಜರಾಜನೆಂದು ಹೆಸರ ಕರೆದು ರಾಜ್ಯವನಾಳುವಾಗ ಕಂದಾರವೆಂಬ ಪಟ್ಟಣಕ್ಕೆ ಒಡೆಯನಾದ ಭೋಜರಾಜನು 1ಸವಾ1ರಿಯಹೋಗಿ ಬರುವಾಗ ಒಬ್ಬಗಾಣಿಗನ ಸ್ತ್ರೀಯು ಏಳುನೆಲೆಯ ಉಪ್ಪರಿಗೆಯ ಮೇಲೆ ನಿಂದು ಕೆಳಗೆ ನಿಂದವನ ಗಿಣ್ಣಲಿಗೆ ಎಣ್ಣೆಯನೆರೆಯಲು ಅದ ಭೋಜರಾಜ ಕಂಡು ಆ ಸ್ತ್ರೀಯ ಕರೆಸಿ ಮೆಚ್ಚಿದೆ ಬೇಡು ಎನಲು, ಕಂದಾರವೆಂಬ ಪಟ್ಟಣಕ್ಕೆ ಧಾರಾಪುರವೆಂಬ ಹೆಸರ ಕರೆದು ನಡೆಸು ಎನಲು, ಆಕೆಯೆಂದಂತೆ ಧಾರಾಪುರವೆಂಬ ಹೆಸರ ಕರೆದು ನಡೆಸುತ್ತ ಆಕೆಗೆ ಸವಾಲಕ್ಷ ದ್ರವ್ಯವ ಕೊಟ್ಟು ಸುಖದಲ್ಲಿರುತ್ತಂ ಮತ್ತೊಂದು ದಿನದಲ್ಲಿ 2ಸವಾರಿ2 ಹೋಗುವಾಗ ಒಬ್ಬಬ್ರಾಹ್ಮಣ ಜೋಳದಹೊಲದಲ್ಲಿ ಮಂಚಿಗೆಯಮೇಲೆ ಕುಳಿತಾಗ ಜೋಳದ ತೆನೆಯ ಮೆಲ್ಲಿಯೆಂದು ಭೋಜನರಾಣ್ಯವೆಲ್ಲವಕ್ಕೆಯೂ ಕರೆವುತಾಗಳಾ ಮಂಚಿಗೆಯ

---

1. ಸಘ (ಗ ಚ) 2. ಸಾರಿಯ (ಗಚ)

ನಿಳಿದು ಕಡೆಗೆ ಬಂದಾಗ ಲಊಟಿಯು ಮಾಡುತಾರೆಂದು ಕೂಗುವಂ. ಅದನು ಭೋಜ
ರಾಜ ತಿಳಿದು ಆ ಹೊಲನ ಕ್ರಯಕ್ಕೆ ಕೊಂಡು ಅಗಿಸಲು, ಮುನ್ನ ದೇವೇಂದ್ರನು
ಓಲಗದಲ್ಲಿರುವಾಗ ರಂಭೆ ಊರ್ವಶಿಯೆಂಬವರು ನೃತ್ಯದಲ್ಲಿ ನಾ ಹೆಚ್ಚು ತಾ ಹೆಚ್ಚೆಂದು
ವಾದವ ಮಾಡಲು ಆರೂ ತಿದ್ದಲಾರದಿರಲು, ಇಂದ್ರ ವಿಕ್ರಮನ ಕರೆಸಲು ಬಂದು
ಇಬ್ಬರ ನೃತ್ಯವು ಸಮವೆಂದು ನ್ಯಾಯವ ತಿದ್ದಲು, ಇಂದ್ರನು ಶಿವನು ತನಗೆ ಕೊಟ್ಟ
ಸಿಂಹಾಸನವನು ವಿಕ್ರಮಂಗೆ ಕೊಟ್ಟನು. ಇತ್ತ ವಿಕ್ರಮನುದಾರಕೀರ್ತಿಯಿ
ರಾಜ್ಯವನಾಳಿ ವೀರವಿಕ್ರಮನೆನಿಸಿಕೊಂಡಿರ್ದು ಶಾಲಿವಾಹನನ ಪುರವ ಮು
ಗಾಯವಾಗಿ ವಿಕ್ರಮ ಮಡಿಯಲು, ಆ ಸಿಂಹಾಸನವ ನಿಕ್ಷೇಪವ ಮಾಡಿರಲು, ಆ
ಸಿಂಹಾಸನ ಭೋಜರಾಜಗೆ ಸಿಕ್ಕಲು, ಅದಕ್ಕೆ ನಾಲ್ಕು ಬಾಗಿಲು. ಒಂದೊಂದಕ್ಕೆ
ಎಂಟೆಂಟು ಸಿಂಹಗಳ ಕಾವಲು. ಅವರ ತಲೆಗಳಮೇಲೆ ರತ್ನದ ಬೊಂಬೆಗಳು. ಅವರ
ಕೈಯಲ್ಲಿ ಚಿನ್ನದ ಹರಿವಾಣಗಳು. ಅವಱೊಳಗೆ ರತ್ನದಾರತಿಗಳು. ಆ ಬೊಂಬೆಗಳ
ಹೆಸರುಗಳು: ವಿಜಯುವಾಪ್ತಿ ವಳಯುವಾಪ್ತಿ ಕಂದರ್ಪಸೇನೆ ಆನಂದಸಂಜೀವಿನಿ
ರತ್ನಪ್ರಿಯೆ ವರಮೋಹಿನಿ ಭದ್ರವತಿ ಸುರತಪ್ರಿಯೆ ಸಂಭೋಗನಿಧಿ ಮಧುರಪ್ರಿಯೆ
ಗೀತಪ್ರಿಯೆ ಪ್ರಭಾವತಿ ಇಂದುವದನೆ ಅಂಗಜೆ ಇಂದ್ರಮತಿ ಕುರಂಗನಯನೆ
ಲಾವಣ್ಯವತಿ ಸೌಗಂಧಮೋಹಿನಿ ತ್ರಿಲೋಚನೆ ಕಾಮಕೇಳಿಕೆ ಚಂಡಿಕೆ ವಿಧ್ಯಾ
ಧರಿ ಪ್ರಭಾಕರಿ ಜಗನ್ಮೋಹಿನಿ ಪದ್ಮನಯನೆ ನಿರೂಪಿಣಿ ವರಿವತಿ, [1]ಅಂಹಿನಿ[1]
ಹಂಸಗಮನೆ ಇಂದ್ರಾವತಿ ಕನಕಾವತಿ ತ್ರಿಭುವನಮೋಹಿನಿ ತ್ರೈಲೋಕ್ಯವಿಜಯೆ
ಇಂತೀ ಬೊಂಬೆಗಳು ಸಹವಾದ ಸಿಂಹಾಸನವ ಪಡೆದಿರ್ದ ಭೋಜರಾಜನ ಸಭೆಗೆ ಒಬ್ಬ
ಗಾರುಡಿಗ ಸರ್ಪಗಳ ಕೊಂಡುಬಂದು ಆಡಿಸಿ, ಸಕಲಸರ್ಪಂಗಳ ತೋಱಿಸಲು,
ಭೋಜರಾಜ ಸರ್ಪಗಳಿಗೆ ಕಿವಿಯುಂಟೆಯೆಂದಾ ಗಾರುಡಿಗನ ಕೇಳಲು ಅವ ಪೇಳುತ್ತಿ
ರ್ದನು. ಮುನ್ನ ಬ್ರಹ್ಮದೇವನು ಬ್ರಹ್ಮಾಂಡವಸೃಷ್ಟಿಸುವಾಗ ಸರ್ಪಗಳಿಗೆ ಕರ್ಣವನುಂ
ಟುಮಾಡಿದನು. ಇತ್ತ ಭೂತಳದಲ್ಲಿ ಭೋಜರಾಜ ನೀನು ರಾಜ್ಯವನಾಳುವದ ಬ್ರಹ್ಮ
ದೇವ ಕೇಳಿ ಸರ್ಪಗಳ ಕಿವಿಯ ತೆಗೆದು ಕಿವಿಯಿಲ್ಲದಂತೆ ಮಾಡಿದನು. ನಿನ್ನಿಂದ ಸರ್ಪ
ಗಳ ಕಿವಿಗಳು ಹೋದುವೆನಲು, ಅದೇನು ಕಾರಣವೆಂದು ಭೋಜರಾಜಕೇಳಲು, ನಿನ್ನ
ಉದಾರಕೀರ್ತಿಪ್ರತಾಪವ ಕೇಳಿ ನರಲೋಕ ಸುರಲೋಕದವರು ತಲೆಯ ತೂಗುವರು.
ನಾಗಲೋಕದ ಸರ್ಪರಾಜ ಕೇಳಿ ತಲೆದೂಗಿದರೆ ಬ್ರಹ್ಮಾಂಡವು ಬಿದ್ದು ಪ್ರಳಯವಾ
ದೀತು ಎಂದು ಸರ್ಪಗಳ ಕರ್ಣವ ತೆಗೆದನೆನಲು ಮೆಚ್ಚಿ ಸವಾಲಕ್ಷವಕೊಟ್ಟು ಗಾರು
ಡಿಗನ ಮನ್ನಿಸಿ ಭೋಜರಾಜನು ಉದಾರಕೀರ್ತಿಯಿಂದ ಒಪ್ಪುತ್ತಿರ್ದನು.

**"ಶಿಬಿಚಕ್ರವರ್ತಿ ಕೀರ್ತಿಯಿಂದ ವ್ಯರ್ಥವಾಗಿ ಸತ್ತನು" ಎಂಬುದಕ್ಕೆ ಕಥೆ**

ಉತ್ತರದೇಶದಲ್ಲಿ ವಂಜರಿಯೆಂಬ ನದಿಯ ತೀರದಲ್ಲಿರ್ದ ರಾಯರತ್ನಾಪುರವೆಂಬ
ಪಟ್ಟಣದಲ್ಲಿ ಶಿಬಿಚಕ್ರವರ್ತಿಯೆಂಬ ರಾಯನು ಯಜ್ಞಾದಿಕರ್ಮಗಳನು, ಷೋಡಶ

1. ಅಹಿಂಸಿ (ಕ)

ಮಹಾದಾನವನು ಮಾಡುವದ ಕೇಳಿ ತಮ್ಮ ಪದವಿಗಳು ಹೋದಾವೆಂದು ಹರಿಯಜ ಯಿಂದ್ರಾದಿಗಳು ಅವನ ಯಜ್ಞವ ಕೆಡಿಸಬೇಕೆನಲು, ಬ್ರಹ್ಮನು ಧರ್ಮಕಂಟಕ ವಾಗಲಾಗದು ಎನಲು, ಇಂದ್ರನು ಇವರಿಬ್ಬರ ನುಡಿ ಎನಗೆ ಸಮ್ಮತವೆನಲು, ಭಕ್ತಿ ನಿಷ್ಠೆಯ ಧರ್ಮವುಳ್ಳನೆಂದು ನಾವು ಮೂವರು ಪೋದಲ್ಲದೆ ಆಗದು ಎಂದು ನಿಶ್ಚೈಸಿ ವಿಷ್ಣು ಬೇಂಟೆಕಾಱನಾಗಿ ಬ್ರಹ್ಮ ಪಾರಿವಾಣವಾಗಿ ಇಂದ್ರನು ಗಿಡಗನಾಗಿ ಪಾರಿ ವಾಣವನಟ್ಟಿಕೊಂಡು ಬರಲು, ಯಜ್ಞಶಾಲೆಯಲ್ಲಿರ್ದ ಶಿಬಿಯ ಮಱೆಯ ಕಪೋತ ಪೋಗಲು ವಿಷ್ಣುವಾಗ ಪಕ್ಷಿಯ ಕೊಡು ಎನಲು ಇದನು ಕೊಡೆನು. ಇದರುದ್ದ ಹೊನ್ನ ಕೊಡುವೆನು. ಮತ್ತೇನು ಬೇಕಾದಡೆಯುಂ ಕೊಡುವೆನೆನೆ, ಈಗ ಹಸಿವಿಗೆ ಓಗರವಾದೀತೆ ಹೊನ್ನನೊಲ್ಲೆನೆನಲು, ದೇವಾನ್ನ ದಿವ್ಯಾನ್ನವ ನೀಡಿಸುವೆನೆನಲು, ಅದನೊಲ್ಲೆನೆನಲು ಈ ಪಕ್ಷಿಯ ಮಾಂಸದಿಂದೆ ದೇಹಪುಷ್ಟಿ ಎನಲು, ಈ ಪಕ್ಷಿಯ ಬೇಗ ತಾರೆನಲು ಕೊಡದಿರ್ದೊಡೆ ಕದನಕೆ ಬಾರೆನಲು ಕದನವೇಕೆ ನಿಮ್ಮಾಹಾ ರಕ್ಕೆ ಬೇಕಾದುದ ತೆಗೆದುಕೊಳ್ಳಿ ಎನಲು, ಹಾಂಗಾದಡೆ ಈ ಪಕ್ಷಿಯ ತೂಕದ ನಿನ್ನ ದೇಹದ ಮಾಂಸವ ಕೊಡು ಎನಲು, ಕೊಟ್ಟೆಹೆನೆಂದು ಆ ಹಕ್ಕಿಯನು ತನ್ನ ಮಾಂ1ಸವನು ತೊಲೆಯನಿಕ್ಕಿ ತಕ್ಕಡಿಯಲ್ಲಿ ತೂಗುವಾಗ ಆ ಹಕ್ಕಿಗೆ ಸರಿಬಾರದಿರಲು ಮತ್ತೆ ತನ್ನ ದೇಹವನೆಲ್ಲ ತಾನೆ ಕೊಯ್ದುಹಾಕಿ ಕೀರ್ತಿಕಾರಣ ವ್ಯರ್ಥವಾಗಿ ಸತ್ತು ಹೋದನು.

## "ಕೀರ್ತಿಯಿಂ ಮುಂಜಕವಿ ಸ್ವರ್ಗವನೆಯ್ದಿದನೆಂಬುದಕ್ಕೆ" ಕಥೆ

ಉತ್ತರ ಭುವನದಲ್ಲಿ ಬಂಗಾಳವೆಂಬ ಪಟ್ಟಣದಲ್ಲಿ ಮುಂಜಕವಿ ಎಂಬ ರಾಜನು ಇರುತಿರ್ದು ಆತನ ಮಗ ಭೋಜನು ಪರನಾರಿಯರ ಸಂಗದಿಂದ ಜಪತಪ ಕೋಟಿ ದಾನಧರ್ಮವು ಕೆಡುತಿಪವೆಂಬ ನೀತಿಯಿಂ ವಸುದೇವನೆಂಬ ತಮ್ಮ ಗುರುವಿನಿಂದ ಕೇಳಿ ರಾಜನೀತಿ ತಪ್ಪಲಾಗದೆಂದು ನಡೆವುತ್ತ ದಾನಧರ್ಮ ಪರಹಿತಾರ್ಥಿ ಎಂದು ನಡೆವುತ್ತಿ ರಲು ಮುಂಜಕವಿ ರಾಜನ ಕಿಱಿಯ ಸತಿಯ ತಮ್ಮನು ದುರಾಚಾರಿಯಾಗಿ ಕುಲಹೀನ ಸತಿಯ ಕೂಡಿರಲು, ಒಂದುದಿನ ಮುಂಜಕವಿಯ ಮನೆಗೆ ಅವ ಬರಲು, ತಂದೆಯವನ ಮನ್ನಿಸಿ ಮಾತನಾಡಿದನು. ಮಗನಾದ ಭೋಜನು ಮನ್ನಣೆಯ ಮಾಡದೆ ಜಱೆದು ಧಿಕ್ಕರಿಸಲು, ಮುಂಜಕವಿಯ ಕಿಱಿಯ ಸತಿ ಕ್ರೋಧವಂ ತಾಳಿರುತ ಕುಲಹೀನರಿ ಗೆಯು ಕುಲಶ್ರೇಷ್ಠರಿಗೆಯು ಕೂಟವುಂಟೆ ಕ್ಷತ್ರಿಯರಲ್ಲಿ ಎಂದಿರಲು, ಒಂದುದಿನ ಭೋಜನು ಸಖರ ಕೂಡಿಕೊಂಡು ಹೊಡೆಚೆಂಡನಾಡುವಾಗ ಸಿಡಿದು ಕಿಱಿಯ ತಾಯ ಮಂಚದ ಕೆಳಯಿಕೆಬೀಳಲು, ಅದ ತರುವುದಕೆ ಹೋದರೆ ಎನಗೆ ಕಂಟಕಬರುವುದೆಂದು ಚಿಂತಿಸುತ್ತಿರಲು, ಅವಳು ತನ್ನ ವಿಳಾಸಿನಿಯರಿಗೆ ಬಂದರೆ ಪಿಡಿದನೆಂದು ನೀವು ಪೇಳಿ ನಾನು ಕೂಗುವೆನೆನಲು, ಈ ಕೃತಕವನಱಿದು ಅವ ಪೋಗದಿರಲಾಗ ನನ್ನ ತಮ್ಮನ

1. ನ್ನದೇಹದ ಮಾಂ (ಗ)

ಕುಲಹೀನದ ಸತತೆ ಎಂದು ಜಱಿದನಲಾ ಎಂದು ತನ್ನ ಗಂಡನ ಕೂಡೆ ನಿನ್ನ ಮಗನು ನನ್ನ ಪಿಡಿದನು. ಅವನ ಆಜ್ಞೆಯಂ ಮಾಡಿದೊಡೆ ನಾನುಳಿವೆ ಇಲ್ಲದಿರ್ದೊಡೆ ನಾನಳಿವೆ ನೆನಲು, ಆಜ್ಞೆಯಂ ಮಾಡೆಂದು ಗುಣನಿಧಿಯೆಂಬ ಮಂತ್ರಿಯು ಕೈಯ ಕೊಡಲು, ಅವ ಕುಮಾರನ ಕೇಳಲು, ನಾನು ಪಾಪಿಯುಹುದೆಂದು ತನ್ನಲಗ ಮಂ1ತ್ರಿಗೆ1 . ಕೊಡಲು, ಅವನಾಗ ಅರಣ್ಯದಲ್ಲಿ ಮಡಗಿ ಪಕ್ಷಿಯ ರಕ್ತವ ತಂದು ಅವಳಿಗೆ ತೋಱಲು, ಅವನ ರಕ್ತವ ಹಣೆಗೆ ಬೊಟ್ಟನಿಟ್ಟು ನನ್ನ ಛಲ ಬಂತೆಂದು ನಗುತ್ತಿರಲು, ಬಳಿಕ ವಿದ್ವಾಂಸರು ಬರಲು, ಅಸತಿಯರ ಮಾತ ಕೇಳುವ ಪತಿ ಮೂಲೋಕದೊಳು ಧರ್ಮಹೀನನೆಂಬ ಶ್ಲೋಕವನೋದುವಲ್ಲಿ, ಕೃತಯುಗದಲ್ಲಿ ಮಾಂಧಾತ ರಾಜ್ಯವನಾಳಿದ ತಾನೆ ಹೋದ. ತ್ರೇತಾಯುಗದಲ್ಲಿ ರಘುರಾಮ ಹೋದನು ಸೀತೆಯಿಂದ ಭಂಗಿತನಾಗಿ ದ್ವಾಪರದಲ್ಲಿ ಪಾಂಡವರು ಹೋದರು. ತಮ್ಮ ತಾಯಿ ಜಾರೆಯೆಂದಱಿಯದೆ ಎಲೆ ತಂದೆಯಾದ ಮುಂಜಕವಿರಾಯ ತಾವು ಮುಟ್ಟಿಯಾಳಿದ ಸ್ತ್ರೀಯರನು ಕಟ್ಟಿಯಾಳಿದ ಭೂಮಿಯನು ಆರು ಜೈಸಿದವರಿಲ್ಲ. ನಿನ್ನ ಸತಿಯ ಮಾತ ಕೇಳಿ ಎನ್ನ ಕೊಂದು ನಿನ್ನ ಸತಿಯನು ಭೂಮಿಯನು ನೀನು ಒಯ್ದಿಯಲಾ ಎಂಬ ಶ್ಲೋಕದರ್ಥವ ಮುಂಜಕವಿಯೋದಿ ನೋಡಿ ಅಲಗಿನ ಮೇಲೆ ಬೀಳುವಾಗ ಮಂತ್ರಿ ವನದಲ್ಲಿ ಮಡಗಿದ ಮಗನ ತೋಱಿದನು. ಸತಿಯ ಕೃತಕವ ಮಗನಿಂದ ಮಂತ್ರಿಯಿಂದಱಿದು ಸ್ತ್ರೀಯನಾಜ್ಞೆಗೆಯ್ದು ಮಂತ್ರಿಗೆ ಸಕಲೈಶ್ವರ್ಯವನಿತ್ತು ಷೋಡಶಮಹಾದಾನದಿಂದ ಸ್ವರ್ಗವನೆಯ್ದಿದನು.

## "2ಮಾಂ2ಧಾತ ಕೀರ್ತಿಯಿಂದ ಕೆಟ್ಟನೆಂಬುದಕ್ಕೆ" ಕಥೆ

ಇಕ್ಷುಕರಾಜನ ಮಗ ಕುಕ್ಷಿ, ಅವನ ಮಗ ಬಾಣ, ಅವನ ಮಗ ಅನರಣ್ಯ, ಅವನ ಮಗ ದುಂದುಮಾರ, ಅವನ ಮಗ ಯುವನಾಶ್ವ, ಅಹನ ಮಗ ಮಾಂಧಾತನು. ಇವನು ಕೃತಯುಗದಲ್ಲಿ ಎಲ್ಲಾ ರಾಯರನೀ ಭುವನದಲ್ಲಿ ಗೆದ್ದು ಇಂದ್ರನ ಜಯಿಸಬೇಕೆಂದು ಅಮರಾವತಿಗೆ ಪೋಗಲು ಇಂದ್ರನಿಂತೆಂದನು. ಲವಣಾಸುರನ ಜಯಿಸದೆ ಇತ್ತಲೇಕೆ ಬಂದೆ ಎನಲು, ಆ ಮಾತಿಗೆ ಮಾಂಧಾತ ರಕ್ಕಸನ ಮೇಲೆ ತಿರಿಗಿದನು. ಇತ್ತ ಭುವನದಲ್ಲಿ ಮಧುವನವೆಂಬ ಶೃಂಗಾರತೋಂಟದಿಂದೊಪ್ಪುವ ಮಧುಪುರದಲ್ಲಿರ್ದ ಮಧುವೆಂಬ ರಕ್ಕಸನ ಹೆಂಡತಿ ಸುಮಾಲಿಯ ಮಗಳು ಕುಂಭನಾಸಿನಿ. ಆಕೆಯ ಮಗ ಲವಣಾಸುರ. ಅವನು ಮಧುರೆಯಲ್ಲಿರ್ದ ಕಾರ್ತವೀರ್ಯನಮಗ ಶೂರಸೇನನಕೊಂದು ಮಧುರೆಯ ಕಟ್ಟಿಕೊಂಡು ಇರುತಿ ಬಳಿಕವ ತಪವಮಾಡುವಾಗ ಶಿವ ಮೆಚ್ಚಿ ಎಲೆ, ಲವಣಾಸುರ ಏನುಬೇಕು ಬೇಡಿದ್ದನೀವೆನೆನಲು, ಶತ್ರುಗಳ ಸಂಹಾರವಮಾಡಿ ತಿರುಗಿ ಬರುವ ತ್ರಿಶೂಲವಕೊಡಿ ಎಂದು ಬೇಡಿ ಪಡೆಕೊಂಡಿರಲು, ಆ ಮಾಂಧಾತ ಲವಣಾ

1. ತ್ರಿಯ ಕೈಗೆ (ಗ) 2. ಮಹಾಂ (ಗಚ) ಈ ಕಥೆಯ ಇತರ ಕಡೆಗಳಲ್ಲಿಯೂ ಇದೇರೀತಿ ಬರುತ್ತದೆ.

ಸುರನ ಮೇಲೆ ಜಗಳಕ್ಕೆ ಬರಲು, ಅವನ ಕೂಡೆ ಕಾದುವುದಕ್ಕೆ ಶಕ್ಯವಲ್ಲದಿರಲು, ಆಗ ತ್ರಿಶೂಲವ ಬಿಡಲು ಮಾಂಧಾತ ತ್ರಿಶೂಲ ಬರುವ ರೌದ್ರವ ಕಂಡು ವಿಷ್ಣುವ ನೆನದ ಕರೆಯಲು ಹರಿ ಬರದಿರಲು ಮಾಂಧಾತನ ಕೊಂದು ತಿರಿಗಿಬಂದಿತ್ತು. ಇಂತು ಮಾಂಧಾತ ಹದಿನೆಂಟುಯಜ್ಞವ ವಿಷ್ಣುವ ಕುರಿತು ಮಾಡಿ ವಿಷ್ಣುವ ಕುರಿತು ಭಕ್ತಿಯ ಮಾಡಿ ಮುಕ್ತಿಯ ಕಂಡುದಿಲ್ಲ.

### "ಕೀರ್ತಿಯಿಂದ ಪರಹಿತಾರ್ಥಿಯಾದನು ಜೀಮೂತ" ಎಂಬುದಕ್ಕೆ ಕಥೆ

ಗಾಂಧರ್ವಪುರದಲ್ಲಿ ಮೇಘವಾಹನನಸುತ ನಂದನಾಥ. ಆತಂಗೆ ಜೀಮೂತ ನೆಂಬ ಸುತನಾಗಿ ಸಕಲೈಶ್ವರ್ಯದಲ್ಲಿ ಬಾಳುವಾಗ ಅರಿರಾಯರು ದಂಡೆತ್ತಿಬಂದು ಪುರವಂ ಮುತ್ತಲು ಕಂಡು ಬಂದ ದಂಡಾರದು ಎಂದು ತನ್ನ ಪಿತನ ಕೇಳಲು, ನಮ್ಮ ಬಂಧುಗಳಾದ ದಾಯಾದ್ಯರು ನಮ್ಮ ರಾಜ್ಯವನುಂಬುದಕ್ಕೆ ಬಂದರೆಂದು ಪೇಳಲು ಕೇಳಿ ಜೀಮೂತನು ಬಂಧುಗಳೊಡನೆ ಕಾದುವದು ಸಲ್ಲದೆಂದು ತಂದೆಗೆ ಪೇಳಿ ಇವರ ಕೂಡೆ ಕಾದಿ ಅವರ ಕೊಂದರೆ ನಮಗೆ ಇಹದಲ್ಲಿ ಪರದಲ್ಲಿ ಗತಿಯಿಲ್ಲವೆಂದು ತಮ್ಮ ಪುರವೊದಲಾದ ರಾಜ್ಯಸಕಲೈಶ್ವರ್ಯ ಚತುರಂಗಬಲ ಅಷ್ಟಭೋಗವನವರಿಗೆ ಒಪ್ಪಿಸಿ ತಂದೆ ತಾಯಿ ತನ್ನ ಸ್ವಬಂಧುಗಳು ಸಹವಾಗಿ ಅಱುವತ್ತೆಂಟುಕೋಟಿ ಕ್ಷೇತ್ರವ ನೋಡಿ ತೀರ್ಥಸ್ನಾನವ ಮಾಡಿ ಲಿಂಗಪೂಜೆಯ ಮಾಡುತ್ತೆ ಭೂಪ್ರದಕ್ಷಿಣವ ಬಂದು ಕಡೆಯಲ್ಲಿ ಮಲೆಯಾದ್ರಿಗೆ ಹೋಗಿ ಸೌಗಂಧವನದಲ್ಲಿರುವ ರತ್ನದೇಗುಲದಲ್ಲಿ ಪಾರ್ವತಿ ದೇವಿ ಇರೆ ಅಲ್ಲಿಗೆ ಬಂದು ವಂದಿಸಿ ಕೀರ್ತಿಸಿ ನಿಂದಿರುವಲ್ಲಿ, ಅಲ್ಲಿ ಒಬ್ಬ ದೇವಸ್ತ್ರೀ ಪಾರ್ವತೀದೇವಿಗೆ ವೀಣೆಯಂ ಕೇಳಿಸುತ್ತಿರೆ ಕಂಡು ಮತ್ತೊರ್ವಸ್ತ್ರೀಯ ಕರೆದು ಈ ವೀಣೆಯಂ ನುಡಿಸುವ ಸ್ತ್ರೀ ಆರು ಎಂದು ಕೇಳಲು, ಒಬ್ಬ ಸಿದ್ಧನ ಮಗಳು ಪದ್ಮಾವತಿ ಎಂಬವಳು ಎನಲು ಇಲ್ಲಿಗೇಕೆ ಬಂದಳೆನೆ ಈ ದೇವಿ ಒಲಿದು ಕೊಟ್ಟವನೆನಗೆ ಪುರುಷನ್ನು ಉಳಿದವರು ಎನಗೆ ಸಹೋದರರು ಎಂದು ಪೇಳಲು, ಆಗ ಜೀಮೂತನ ಧರ್ಮನೀತಿಯ ಕೀತಿಗೆಯು ಆ ಸ್ತ್ರೀಯ ಸೇವೆಗೆ ಮೆಚ್ಚಿ ಆ ಸ್ತ್ರೀಯ ಜೀಮೂತಂಗೆ ಕೈಗೂಡಿಸಿ ಸುಖ, ದಲ್ಲಿರಲು ಬಳಿಕ ದೇವಿಯ ಬೀಳ್ಕೊಂಡು ನಾಗಲೋಕವ ನೋಡುತ ಬರುವಲ್ಲಿ ನಾಗ ಕುಲಂಗಳ ಗರುಡ ತಿನ್ನುತ್ತಿರೆ ಆ ಸರ್ಪಗಳ ಅಸ್ಥಿ ಏಳುಪರ್ವತಂಗಳ ಹಾಂಗೆ ಬಿದ್ದಿರೆ ಅಚ್ಚರಿವಟ್ಟು ಜೀಮೂತ ನೋಡುತ್ತಿರೆ ಶಂಖಚೂಡನ ಜನನಿ ದುಃಖವಂ ಮಾಡುತ್ತಿರೆ ಕೇಳಿದನೇಕೆಂದು. ಗರುಡನು ಉರಗಕುಲವ ತಿನ್ನುತ್ತಿರಲು, ಬಾರಿಯೊಂದು ಮಾಡಿ ಕೊಂಡು ದಿನಕೊಬ್ಬರ ತಿನ್ನುತಿರೆ ಇಂದು ನನ್ನ ಮಗನ ಬಾರಿ ಬಂದಿತೆಂದು ಮತ್ತೆಯು ಮಱುಗಲವ ಅಂಜದಿರೆಂದು ಅಭಯುವನಿತ್ತು ಎನ್ನಪ್ರಾಣವ ಕೊಡುವೆನು. ಆವ ಪರಿಯಲ್ಲಿ ಶರೀರ ಸಾವುದು ಸತ್ಯ ಪರಹಿತಕೆ ಈವೆನು ಎಂದನು ವಾಗಿ ಆ ಗರುಡನು ಬಾರಿಯಕೊಂಬ ಭಂಡಿಯೊಳು ಮುಸುಕಿಟ್ಟು ಮಲಗಿರೆ ಘೋರ

ನಿಳಿದು ಹೊಡೆದೆತ್ತಿ ಕಡಿಖಂಡವ ಮಾಡಿ ತಿನ್ನುತ್ತಿರೆ ಶಿವಧ್ಯಾನದಿಂದಿರೆ ಅವನು ಶಿರೋಮಣಿ ಜೀಮೂತವಾಹನನರಸಿಯ ತೊಡೆಯ ಮೇಲೆ ಬೀಳಲು ಕಾಣುತ್ತೆ ಆ ಮಾನಿನಿ ಮೃತವಾದಳು.ವನಜನೇತ್ರೆಯು ಶಂಖ ಚೂಡನ ತಾಯಿ ಮಡಿಯಲು ಕಾಣುತಾಗ ಗಗನದಿ ಸುರರು ಹೂಮಳೆ ಗರೆದರು. ಖೇಚರರು ನೋಡಿ ಬೆರಗಾಗಲು ಪರಹಿತಕ್ಕೆ ಪ್ರಾಣವನಿತ್ತನಿವನೆಂದು ಗಿರಿಜೆ ಸಹಿತಬಂದು ಮೂವರಿಗೆಯು ಪ್ರಾಣವ ಶಿವನಿತ್ತಲ್ಲಿ ಈ ಮೂವರೊಳಗೆ ಆರು ಪರೋಪಕಾರಿಗಳೆಂದು ಮನುಗಳು ಕೇಳಲು ಜೀಮೂತನಿತ್ತ ಪ್ರಾಣವಾಶ್ಚರಿಯೆಂದು ಹರಿಯುಜೇಂದ್ರಾದಿಗಳು ಕೊಂಡಾಡಿದರು.

## ಶರಣ ಸಾಹಿತ್ಯ ಗ್ರಂಥಮಾಲಾ, ಬೆಂಗಳೂರು.

| | | | |
|---|---|---|---|
| ೧. | ಪುರಾತನರ ತ್ರಿವಿಧಿ | ನಿಜಗುಣ ಶಿವಯೋಗಿ | 1-0-0 |
| *೨. | ವೀರೇಶ ಚರಿತೆ | ರಾಘವಾಂಕ ಕವಿ | 2-0-0 |
| *೩. | ಮನೋವಿಜಯಮ್ | ಗುರುಬಸವ ಕವಿ | 2-0-0 |
| ೪. | ಬಸವೋದಾಹರಣಮ್ | ಪಾಲ್ಕುರಿಕೆ ಸೋಮನಾಥ | 1-0-0 |
| *೫. | ಬಿಲ್ವಸ್ತೋತ್ರಂ | | 0-4-0 |
| ೬. | ಘನಲಿಂಗಿದೇವರ ವಚನ | ಘನಲಿಂಗಿ ದೇವರು | 1-0-0 |
| ೭. | ಯುಗವಾಣಿ | (ಕವನ ಸಂಗ್ರಹ) | 1-0-0 |
| ೮. | ಸಂಕ್ಷಿ ಶಿವಪೂಜಾವಿಧಿ | ಶ್ರೀ ವಿರೂಪಾಕ್ಷ ಒಡೆಯರ್ | 1-0-0 |
| ೯. | ತುರುಗಾಹಿ ರಾಮಣ್ಣ ವಚನಗಳು | ರಾಮಣ್ಣ | 0-4-0 |
| ೧೦. | ಭಾರತ-ಚೀಣಾ ಜನಜೀವನ | | 0-8-0 |
| ೧೧. | ನ್ಯಾಯ ಶತಕಮ್ | ರಾಮೇಶ್ವರ ಮುಖಿ | 0-12-0 |
| ೧೨. | ಕನ್ನಡಕಲಿ ಸಿರುಮನ ಚರಿತೆ | ಹು. ಶ್ರೀ. ಜೋಯಿಸರು | 0-12-0 |
| ೧೩. | ದುಂಬಿ (ಕವನ ಸಂಗ್ರಹ) | ಬಿ. ಶಿವಮೂರ್ತಿ ಶಾಸ್ತ್ರೀ | 1-0-0 |
| ೧೪. | ಕನ್ನಡ ಆದಿತ್ಯಪುರಾಣಂ (ಭಾಗ-೧) | ಕವಿರಾಜ ಕಂಠೀರವ | 1-0-0 |
| ೧೫. | ವೀರಶೈವ ಮಹಾ ಪುರುಷರು (ಭಾಗ-೧) | ಬಿ. ಶಿವಮೂರ್ತಿಶಾಸ್ತ್ರೀ | 5-0-0 |
| ೧೬. | ವೀರಶೈವ ಸಾಹಿತ್ಯ ಮತ್ತು —ಇತಿಹಾಸ (ಭಾಗ ೧) | ಬಿ. ಶಿವಮೂರ್ತಿಶಾಸ್ತ್ರೀ | 2-0-0 |

## ವಿದ್ಯಾರ್ಥಿ ಗ್ರಂಥಮಾಲಾ

| | | | |
|---|---|---|---|
| *೧. | ಗಾಂಧಿ ಗೀತೆಗಳು | ಬಿ. ಶಿವಮೂರ್ತಿಶಾಸ್ತ್ರೀ | 0-4-0 |
| ೨. | ಸರ್ವಜ್ಞಮೂರ್ತಿ | ಬಿ. ಶಿವಮೂರ್ತಿಶಾಸ್ತ್ರೀ | 1-4-0 |
| ೩. | ಶ್ರೀ ರಮಣ ಮಹರ್ಷಿ | ಅರ್ಚಕ ವೆಂಕಟೇಶ ಮತ್ತು ರೇಣುಕ ಪ್ರಸಾದ್ ಬಿ.ಎ., | 1-0-0 |
| ೪. | ಮಹಾಕವಿ ಬಾಣ | ಕವಿ-ಕಾವ್ಯ ವಿಚಾರ | 0-8-0 |

* ಪುಸ್ತಕಗಳು ಅಚ್ಚಿನಲ್ಲಿವೆ.

ಪ್ರಕಾಶಕರು:

**ಶರಣ ಸಾಹಿತ್ಯ ಕಾರ್ಯಾಲಯ**

92. ರಂಗಸ್ವಾಮಿ ಗುಡಿ ಬೀದಿ (ಬಳೇಪೇಟೆ)

p.o. ಬೆಂಗಳೂರು-2